
ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಅಕ್ಟೋಬರ್ 22, 2008 ರೂ. 12/-



ೀವರ್ಧನಮೂರ್ತಿ

ಸೈಕೋ



ಸಿದ್ಧರಾಮಯ್ಯ

ಜ್ವಾಲಾಮುಖಿ

ೀಕರ್ಣ 2

ರಾಯ ರಾಯ ಛತ್ರ ಸ್ವಾಹ

ಯಡ್ಡಿ-ಶೆಟ್ಟಿ 80 ಕೋಟಿ ಡೀಲ್

ಗೂಂಡಾಗಿರಿ ಶುರು!




ಮದ್ದೂರು ಟಿಕೆಟ್ ಕಚ್ಚಾಟ!

ನಗ್ಗಲ ಮುಳ್ಳು


ಹೀಗೆ ಮಾಡಿದರೆ ಹೇಗೆ?

ಮಾತು ಬೆಳ್ಳಿ ಮೌನ ಬಂಗಾರ ಎನ್ನುವ ಮಾತಿದೆ. ಆದರೆ ಏನುಮಾಡ್ತೀರಿ. ಬಗ್ಗು ಅಂದರೆ ತೆವಳೋ ಜಾತಿಯವರ ಮುಂದೆ ಯಡ್ಯೂರಪ್ಪನವರಿಗೆ ಅದೆಂತಹದ್ದೋ ಹುಚ್ಚು ಆವೇಶ ಮೈದುಂಬಿಕೊಂಡು ಬಿಡುತ್ತದೋ ಏನು ಕತೆಯೋ. ತಮ್ಮ ಸರ್ಕಾರ ಅಭಿವೃದ್ಧಿಪರ ಅಂತ ತೋರಿಸಿಕೊಳ್ಳೋಕೆ ಪೆದ್ದುಪೆದ್ದಾಗಿ ಯದ್ವಾತದ್ವಾ ಮಾತುಗಳನ್ನ ಉದುರಿಸ್ತಾರೆ. ಕುಮಾರ ಸ್ವಾಮಿ ಮಾತು ಒತ್ತಟ್ಟಿಗಿರಲಿ, ದಡ್ಡದಡ್ಡನಾಗಿ ಕಾಣಿಸುವ ರೇವಣ್ಣನೂ ಅವರ ಮಾತಿನ ಜಾಡು ಹಿಡಿದು 'ಆ ವ್ಯವಹಾರದಲ್ಲಿ ಇಷ್ಟು ಗಿಟ್ಟಿದೆ, ಈ ವ್ಯವಹಾರದಲ್ಲಿ ಅಷ್ಟು ಭ್ರಷ್ಟಾಚಾರ ನಡೆದಿದೆ' ಅಂತ ಜಾಡಿಸುತ್ತಾ ಕುಂತವನೆ. ಇದಕ್ಕೆ ನನ್ನ ಹತ್ತಿರ ದಾಖಲೆ ಸಹ ಇದೆ ಅಂತ ಮಾಧ್ಯಮದೆದುರು ಕೊಚ್ಚಿಕೊಳ್ಳುತ್ತಾ ಇರ್ತಾನೆ. ಯಡವಟ್ಟು ಗಿರಾಕಿ ಯಡ್ಯೂರಪ್ಪ ಬಾಯಿಬಿಟ್ಟರೆ ಸಾಕು, ಸರ್ಕಾರದ ಮರ್ಯಾದೆ ಹರಾಜು ಆಗುತ್ತಿದೆಯಲ್ಲ, ಇವನ ಮಾತು ಬೆಳ್ಳಿ ಅಲ್ಲ ಹೊಲಸು ಅಂತ ಕೇಶವಕೃಪಾ ಭಾವಿಸಿತೋ ಅಥವಾ ಅವರಿಗೆ ಹಾಗೆ ಅನ್ನಿಸಿತೋ ಗೊತ್ತಿಲ್ಲ, ಅಂತೂ ಇಂತೂ 'ದೇವೇಗೌಡರ ಮಕ್ಕಳ ಆರೋಪಗಳಿಗೆ ನಾನು ಇನ್ನು ಮುಂದೆ ಉತ್ತರಿಸುವುದಿಲ್ಲ, ಮೌನವಾಗಿರುತ್ತೇನೆ' ಅಂತ ಸಾರಿದರು. ಇಷ್ಟೆ ಸಾಲದು ಎಂಬಂತೆ 'ಇತರೇ ಸಚಿವರೂ ಅವರ ಮಾತುಗಳಿಗೆ ಪ್ರತಿಕ್ರಿಯಿಸದಂತೆ ಸೂಚಿಸುತ್ತೇನೆ' ಎಂದೂ ಹೇಳಿದರು. ಸಮಸ್ಯೆ ಏನು ಅಂದರೆ ಭ್ರಷ್ಟಾಚಾರದ ಆರೋಪ ಬಂದಾಗ ಅಲ್ಲಗಳೆಯದಿದ್ದರೆ ಅದು ನಡೆದಿದೆ ಅನ್ನೋದು ಖಾತರಿಯಾಗುತ್ತದಲ್ಲಾ... ದೇವೇಗೌಡರ ಮಕ್ಕಳ ಆರ್ಭಟ ಇನ್ನೂ ಜೋರಾಗುತ್ತದಲ್ಲಾ...



ಅದಕ್ಕೆ ಒಂದು ಸಲಹೆ ಏನು ಅಂದರೆ ಯಾವ ಪತ್ರಿಕೆಯಲ್ಲೂ ಅವರ ಹೇಳಿಕೆಗಳು ಬರದಂತೆ ಜಾಗ್ರತೆ ವಹಿಸುವುದು. ಒಂದಷ್ಟು ಜಾಹೀರಾತು ಹೆಚ್ಚಿಗೆ ಬಿಡುಗಡೆ ಮಾಡಿದರೆ ಮುಗೀತು! ಪತ್ರಿಕೆಗಳನ್ನ ಓದುವವರೇ ಕಡಿಮೆ ಜನ, ಟಿವಿ ನೋಡೆ ಪ್ರಪಂಚದ ವ್ಯವಹಾರ ಗ್ರಹಿಸುವ ಘಟಂಗರಿದ್ದಾರಲ್ಲ ಅಂತಹವರಿಗೇನು ಮಾಡೋದು ಅನ್ನುವ ಅನುಮಾನ ಬೇಕಿಲ್ಲ. ಹೇಗಿದ್ದರೂ ಲೋಡ್ ಷೆಡ್ಯೂಲ್ ಅನ್ನೋ ಹೆಸರಲ್ಲಿ ವಿದ್ಯುತ್‌ಗೆ ಸಂಚಕಾರ ತರ್ತಾನೆ ಇದಾರಲ್ಲ, ಈ ಸಂಚಕಾರನ ನ್ಯೂಸ್ ಟೈಮಿಗೆ ಶಿಫ್ಟ್ ಮಾಡಿದರಾಯಿತು. **QED** ಅಲ್ಲವಾ...!

ಸಾಯುವ ಸಮಯ



ಹುಟ್ಟಿದವರು ಸಾಯಲೇ ಬೇಕು. ಆದರೆ ಸಾಯುವವರು ಸಮಯ ಸಂದರ್ಭ ನೋಡಿ ಸಾಯಬೇಕು. ಸುದ್ದಿ ಮಾಧ್ಯಮದವರಿಗೆ ವಿಶೇಷ ಒತ್ತಡ ಇರಬಾರದು. ಹಬ್ಬ ಹರಿದಿನ ಇರಬಾರದು. ರಾಜಕೀಯ ಧುರೀಣರು ಆರಾಮ ಇರಬೇಕು. ಇದು ಸಾಯಲು ಸೂಕ್ತ ಸಮಯ. ಜಾತ್ಯತೀತ ಜನತಾದಳದ ಅಧ್ಯಕ್ಷ ಮಿರಾಜುದ್ದೀನ್ ಪಟೇಲ್ ನೋಡಿ. ಹೋಗಿ ಹೋಗಿ ಅಷ್ಟಮಿ ದಿವಸ ಸತ್ತವರೆ. ಆ ಪಕ್ಷದ ಹಿರಿಯರಾದ ಎಚ್.ಡಿ.ದೇವೇಗೌಡರು ಕೇರಳದ ಯಾವುದೋ ದೇವಸ್ಥಾನದಲ್ಲಿ ಅಷ್ಟಮಿ ಪೂಜೆ ಇಟ್ಟುಕೊಂಡಿದ್ದರಂತೆ. ಕೇಡು ಆಗಲೇ ಪ್ರಾರಂಭ ಆಗಿತ್ತಂತೆ. ಅದು ಅಂತಿಂತಹ ಪೂಜೆ ಅಲ್ಲವಂತೆ. ಪ್ರಾರಂಭಮಾಡಿದ ಮೇಲೆ ಪೂರ್ತಿ ಮಾಡಲೇಬೇಕಂತೆ. ಇಲ್ಲವಾದಲ್ಲಿ ಕೇಡು ತಪ್ಪುವುದಿಲ್ಲವಂತೆ. ಅಂತಹ ಸಮಯದಲ್ಲಿ ಪಕ್ಷದ ರಾಜ್ಯಾಧ್ಯಕ್ಷರು ಸಾಯಬೇಕಾ... ಇದನ್ನೇ ಅಗ್ನಿ ಪರೀಕ್ಷೆ ಅನ್ನೋದು ಅನ್ನಿಸುತ್ತೆ, ಪಾಪ ದೇವೇಗೌಡರ ಸಂಕಟ ನೋಡಿ. ತಮ್ಮ ಪಕ್ಷದ ರಾಜ್ಯಾಧ್ಯಕ್ಷರ ಸಾವಿಗೆ ಹೋಗಬೇಕು. ಆದರೆ ಪ್ರಾರಂಭಿಸಿರುವ ಪೂಜೆ ನಿಲ್ಲಿಸುವಂತಿಲ್ಲ, ಹಾಗೇನಾದರೂ ಮಾಡಿದರೆ ತಮ್ಮ ವಂಶಕ್ಕೆ ವಿಘ್ನ! ಏನು ಮಾಡಿದರು ಗೌಡರು...ಸತ್ತವನನ್ನ ಬದುಕಿಸಲಾಗುತ್ತದೆಯೇ, ಎಲ್ಲಾ ದೇವರ ಲೀಲೆ ಅಂತ ಪರಿತಪಿಸಿಕೊಂಡು ತಮ್ಮ ವಂಶದ ಶ್ರೇಯಸ್ಸಿಗೆ ಪೂಜೆ ನಿರ್ವಿಘ್ನವಾಗಿ ನಡೆಯುವಂತೆ ನೋಡಿಕೊಂಡರು!

ಪುನರ್‌ಜನ್ಮ



ಚರ್ಚುಗಳ ಮೇಲೆ ಸತತವಾಗಿ ದಾಳಿ ನಡೆಯಿತಲ್ಲಾ, ಭಜರಂಗದಳ ನಿಷೇಧಿಸಲು ಹಲವು ಮೂಲಗಳಿಂದ ಒತ್ತಾಯ ಬರಲಾರಂಭಿಸಿತು. 'ದಮ್ಮಿದ್ದರೆ ನಿಷೇಧಿಸಲಿ' ಅಂತ ವೆಂಕಯ್ಯನಾಯ್ಡು ಅರಚಿದರೆ 'ನಾವು ದೈವಭಕ್ತರು ಇಂತಹವುಕ್ಕೆಲ್ಲ ಹೆದರುವುದಿಲ್ಲ' ಅನ್ನೋ ರೀತಿ ಸಿ.ಟಿ.ರವಿ ಕೂಗಾಡಿದ. ಅರೆ ಇದೇನು ಯುಪಿಎ ಸರ್ಕಾರ ಅನ್ನೋದು ಇಷ್ಟೊಂದು ದುರ್ಬಲವೇ. ಒಂದು ವೇಳೆ ಧೈರ್ಯ ತಗೊಂಡು ನಿಷೇಧಿಸಿಯೇ ಬಿಟ್ಟರೆ ಏನು ಮಾಡ್ತಾರೆ ದೊಂಬಿ, ಗಲಭೆಗಳಿಗೆ ಜನಾನೆ ಇರಲ್ವಲ್ಲ ಪರಿವಾರದವರ ಹತ್ತಿರ ಅನ್ನೋ ಗುಮಾನಿ ಬಂತು. ಇದನ್ನೇ ಸಂಘಪರಿವಾರಿಯ ಹತ್ತಿರ ತೋಡಿಕೊಂಡೆ. ಅಯ್ಯೋ ಅಜ್ಞಾನಿ ಅನ್ನುವ ರೀತಿ ನೋಡಿದ, ಟ್ಯೂಬ್‌ಲೈಟ್ ಹತ್ತಿಕೊಂಡಿತು. ಸಂಘಪರಿವಾರದ್ದು ನೂರೆಂಟು ಹೆಸರಿನ ಸಂಘ ಸಂಸ್ಥೆಗಳು ಇದಾವೆ. ಇದನ್ನು ನಿಷೇಧಿಸಿದರೆ ಹೊಸ ಹೆಸರಿನಲ್ಲಿ ಜನ್ಮತಾಳುತ್ತೆ!

ಕುರ್ಚಿ ಶಾಪ



ರಾಜಕಾರಣಿಗಳನ್ನು ನೋಡಿ, ಒಂದು ಸಲ ಹಿಡಿದ ಅಧಿಕಾರದ ಕುರ್ಚೀನ ಬಿಡೋಕೆ ಅವರಿಗೆ ಮನಸ್ಸು ಬರುವುದಿಲ್ಲ, ಅವರು ಸಾಯಬೇಕು. ಆಗಲೇ ಅದರ ಸಂಬಂಧ ಕಳಚೋದು. ಹೊಸಬರು ಬರಬಾರದು ಅಂತ ಅವರೇನೂ ಹೇಳಲ್ಲ, ಬರಲಿ ಅಂತಾನೇ ಅಂತಾರೆ. ಆದರೆ ಬಂದವರು ತಮ್ಮ ಕುರ್ಚಿಯ ಮೇಲೆ ಕಣ್ಣಿಡಬಾರದು ಅಷ್ಟೆ!

ವ್ಯಕ್ತಿ ರಾಜಕಾರಣಿಗಳ ವಿರುದ್ಧ ಹುಟ್ಟಿದ್ದು ಪ್ರಗತಿಪರ ಸಂಘಟನೆಗಳು. ಅವುಗಳ ಕತೆ ಏನು?

ಕಳೆದ ಎಪ್ಪತ್ತು ಎಂಬತ್ತರ ದಶಕದಲ್ಲಿ ಪ್ರಭಾವಿಯಾಗಿದ್ದ ಅವು ಶಕ್ತಿಹೀನ ಆಗಿವೆ. ಚೂರುಚೂರಾಗಿ ಒಡೆದು ಮೂರಾಬಟ್ಟೆಯಾಗಿವೆ. ಒಂದೊಂದು ಚೂರಿಗೂ ಒಬ್ಬೊಬ್ಬ ಮುಖ್ಯಸ್ಥ. ಯಾರು ಇವರು? ಪ್ರಾರಂಭದಲ್ಲಿ ಇದ್ದವರೆ! ಹೊಸಬರಿಗೆ ಆ ಸ್ಥಾನ ನಿಷಿದ್ಧ!

ಇದೇನು ಕುರ್ಚಿಯ ಆಕರ್ಷಣೆಯೋ? ಕುರ್ಚಿಯ ಶಾಪವೋ?

Quote-Unquote

ಒಂದು ಜೋಕ್



"ಸಲಿಂಗ ಕಾಮವನ್ನು ಒಂದು ಅಪರಾಧ ಎಂದೇ ಪರಿಗಣಿಸಬೇಕು. ಅಂತಹ ವಿಕೃತ ನಡವಳಿಕೆಯಿಂದ ಸಮಾಜದ ನೈತಿಕತೆಯೇ ಕಂಗೆಡುತ್ತದೆ. ಸತಿ ಮತ್ತು ವರದಕ್ಷಿಣೆ ಪದ್ಧತಿಗಳಂತೆ ಸಲಿಂಗಕಾಮವೂ ಒಂದು ಸಾಮಾಜಿಕ ಪಿಡುಗು"

-ಅಡಿಷನಲ್ ಸಾಲಿಸಿಟರ್ ಜನರಲ್ ಪಿ.ಪಿ.ಮಲ್ಹೋತ್ರ, ಸಲಿಂಗ ಕಾಮವು ಒಂದು ಅಪರಾಧ ಎಂದೇ ಪರಿಗಣಿಸುವ ಇಂಡಿಯನ್ ಪೀನಲ್‌ಕೋಡ್ ಪರಿಚ್ಛೇದ *377* ಅನ್ನು ರದ್ದುಗೊಳಿಸಬೇಕೆಂಬ ಅರ್ಜಿಯನ್ನು ವಿರೋಧಿಸಿ ನ್ಯಾಯಾಲಯದ ಮುಂದೆ.

ಒಂದು ವಿರೋಧ

"ಸರಕಾರವನ್ನು ವಿರೋಧಿಸುವ ಅಥವಾ ನ್ಯಾಯಾಲಯದ ಮೆಟ್ಟಿಲನ್ನು ಹತ್ತುವ ಇರಾದೆ ನಮಗಿಲ್ಲ, ಆದರೆ ಸರಕಾರವು ಆದಷ್ಟು ಬೇಗ ನಮ್ಮ ಭೂಮಿಗೆ ಸರಿಯಾದ ಪರಿಹಾರವನ್ನು ಘೋಷಿಸದಿದ್ದರೆ ನಾವು ವಿಧಿ ಇಲ್ಲದೆ ಪ್ರತಿಭಟಿಸಬೇಕಿದೆ, ನ್ಯಾಯಾಲಯದ ಮೊರೆಹೋಗಬೇಕಿದೆ"

-ಜೀತ್‌ಸಿಂಗ್ ವಘೇಲಾ, ಟಾಟಾ ಸಂಸ್ಥಾನದ ನ್ಯಾನೋ ಕಾರ್ ಫ್ಯಾಕ್ಟರಿಗೆ ತನ್ನ ಭೂಮಿಯನ್ನು ಕಳೆದುಕೊಳ್ಳುತ್ತಿರುವ ಗುಜರಾತ್‌ನ ರೈತ ಮುಖಂಡ.

ಒಂದು ಶಹಬ್ಬಾಸ್




"ತಮ್ಮದು ಜಾತ್ಯತೀತ ವಿಶ್ವವಿದ್ಯಾಲಯಗಳು ಎಂದು ಕರೆದುಕೊಳ್ಳುವ ಬನಾರಸ್ ಹಿಂದೂ ವಿಶ್ವವಿದ್ಯಾಲಯ, ಅಲಹಾಬಾದ್ ವಿಶ್ವವಿದ್ಯಾಲಯ ಮತ್ತು ದೆಹಲಿ ವಿಶ್ವವಿದ್ಯಾಲಯಗಳಿಗಿಂತ ಅಲ್ಪಸಂಖ್ಯಾತ ಮುಸಲ್ಮಾನರ ವಿಶ್ವವಿದ್ಯಾಲಯ ಎಂದೇ ಪರಿಗಣಿಸಲ್ಪಡುವ ನಮ್ಮ ಜಾಮಿಯಾ ಮಿಲಿಯಾ ಇಸ್ಲಾಂಮಿಯಾ ವಿಶ್ವವಿದ್ಯಾಲಯವೇ ಹೆಚ್ಚು ಜಾತ್ಯತೀತವಾಗಿದೆ. ಆದರೂ ನಮ್ಮನ್ನು ಗುರಿಯಾಗಿಸಲಾಗಿದೆ. ಹಾಗೆಯೇ ಭವ್ಯ ಇತಿಹಾಸ ಹೊಂದಿರುವ ದಿಲೋಬಂಡ್ ವಿಶ್ವವಿದ್ಯಾಲಯ, ಲಕ್ನೋದ ನದ್ವತ್-ಉಲ್-ಉಲೇಮ ಮತ್ತು ಅಲಿಗಢ್‌ದ ವಿಶ್ವವಿದ್ಯಾಲಯಗಳನ್ನೂ ಗುರಿಯಾಗಿಸಲಾಗಿದೆ. ಇದೆಲ್ಲದರ ಹಿಂದೆ ಒಂದು ಪೂರ್ವ ನಿರ್ಧಾರ ಕಾಣಿಸುತ್ತದೆ.

ಲಕ್ಷಾಂತರ ಜನರಂತೆ ನಾನೂ ಭಾರತ ಎಂಬ ಸೌಧದ ಅಂಗ. ಭಾರತ ಎಂಬ ಪ್ರತೀಕವೇ ನನ್ನ ಪ್ರತೀಕ. ನಾನಿಲ್ಲದ ಭಾರತದ ಕಲ್ಪನೆಯೇ ನನಗಿಲ್ಲ ಮತ್ತು ಆ ಕಲ್ಪನೆ ಬದಲಾಗುವುದಕ್ಕೆ ನಾನೆಂದು ಬಿಡುವುದಿಲ್ಲ, ಐಕ್ಯತೆಯ ಬಗ್ಗೆ ನಮಗಿರುವ ಸಂಕಲ್ಪ ಮತ್ತು ಭಾರತ ಸಂವಿಧಾನದ ಬಗ್ಗೆ ನಮಗಿರುವ ನಿಷ್ಠೆ ಪ್ರಶ್ನಾತೀತ.

-ಮುಷಿರುಲ್ ಹಸನ್, ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾಲಯದ ಉಪಕುಲಪತಿ.

ಒಂದು ದುರಂತ



"ನನ್ನ ಹೆಂಡತಿ ಮತ್ತು ಮಗಳ ಮೇಲೆ ಅತ್ಯಾಚಾರ ನಡೆಸಲಾಯಿತು. ಅವರಿಬ್ಬರನ್ನಲ್ಲದೇ ನನ್ನ ಇಬ್ಬರು ಗಂಡು ಮಕ್ಕಳನ್ನು ನಿರ್ದಾಕ್ಷಿಣ್ಯವಾಗಿ ಕೊಚ್ಚಿ ಕೊಲ್ಲಲಾಯಿತು. ಈ ಎಲ್ಲ ದುರಂತ ಸಂಭವಿಸಿದ್ದು ನಾವು ದಲಿತರಾಗಿದ್ದರೂ ಕಷ್ಟಪಟ್ಟು ದುಡಿದು ಸ್ವಾಭಿಮಾನದ ಜೀವನವನ್ನು ಸಾಗಿಸಲು ಪ್ರಯತ್ನಿಸಿದ್ದಕ್ಕೆ. ನನ್ನ ಇಡೀ ಸಂಸಾರವನ್ನು ನಾಶಪಡಿಸಿದವರಿಗೆ ಶಿಕ್ಷೆ (ಆರು ಜನರಿಗೆ ಗಲ್ಲು, ಇಬ್ಬರಿಗೆ ಜೀವಾವಧಿ ಶಿಕ್ಷೆ ನೀಡಲಾಗಿದೆ) ನೀಡಿರುವುದರ ಬಗ್ಗೆ ನನಗೆ ಯಾವ ಸಹಾನುಭೂತಿಯೂ ಇಲ್ಲ. ನನ್ನ ಸಂಸಾರವನ್ನು ಕತ್ತರಿಸುತ್ತಿರುವಾಗ ಅವರಿಗೆ ಬೇಸರವಾಗಿರಲಿಲ್ಲವಲ್ಲ? ನನ್ನವರನ್ನು ಕೊಂದು ಕೊಚ್ಚುಹಾಕುತ್ತಿರುವಾಗ ಇಡೀ ಹಳ್ಳಿಯೇ ನಗಾಡುತ್ತಿತ್ತು, ಇವರೆಲ್ಲರೂ ಸಾಯಬೇಕು."

-ಖೈರ್ಲಾಂಜಿ ದುರಂತದಲ್ಲಿ ತನ್ನ ಇಡೀ ಸಂಸಾರವನ್ನು ಕಳೆದುಕೊಂಡ ದಲಿತ ಭಯ್ಯಾಲಾಲ್ ಭೂತ್‌ಮಾಂಗೆ

ಒಂದು ವಿಪರ್ಯಾಸ



"ಭಯ್ಯಾಲಾಲ್ ಭೂತ್ ಮಾಂಗೆಯವರ ಪತ್ನಿ ಸುರೇಖಾ ಮತ್ತು ಪುತ್ರಿ ಪ್ರಿಯಾಂಕಳ ಮೇಲೆ ಅತ್ಯಾಚಾರ ನಡೆದಿತ್ತು ಎಂದು ಸಾಬೀತಾಗಿಲ್ಲ. ಹಾಗೆಯೇ ಎಫ್‌ಐಆರ್‌ನಲ್ಲಿ ಅವರನ್ನು ಕೊಂದವರು ಹಿಂದುಳಿದ ವರ್ಗದವರು ಎಂದು ನಮೂದಿಸಿಲ್ಲವಾದ್ದರಿಂದ ಇದನ್ನು ದಲಿತರ ಮೇಲಿನ ದೌರ್ಜನ್ಯ ಎಂದು ಪರಿಗಣಿಸಲಾಗುವುದಿಲ್ಲ"

-ಖೈರ್ಲಾಂಜಿ ದುರಂತ ಕುರಿತಂತೆ ತೀರ್ಪು ನೀಡಿದ ನ್ಯಾಯಾಧೀಶ.

ಹೀಗೊಂದು ದಾಂಪತ್ಯ



ಇತ್ತೀಚೆಗೆ ಯಾರೋ ಪುಣ್ಯಾತ್ಮನೊಬ್ಬ ದೇಶಭಕ್ತ ನೈತಿಕ ವಾರಸುದಾರ ಪಕ್ಷವಾದ ಬಿಜೆಪಿಯ ಸಂಸದರಾದ ಧರ್ಮೇಂದ್ರ ಮತ್ತು ಹೇಮಾಮಾಲಿನಿ ಯಾರನ್ನು ಮದುವೆಯಾಗಿದ್ದಾರೆ ಎಂದು ಮಾಹಿತಿ ಹಕ್ಕು ಕಾಯ್ದೆಯ ಅಡಿ ಪ್ರಶ್ನೆಗಳನ್ನು ಸಲ್ಲಿಸಿದ್ದ. ಈ ಮಾಜಿ ನಟ ಮತ್ತು ನಟಿ ಪರಸ್ಪರ ಮದುವೆಯಾಗಿದ್ದು ಇಬ್ಬರು ಹೆಣ್ಣುಮಕ್ಕಳಿರುವುದು ಇಡೀ ಜಗತ್ತಿಗೆ ಗೊತ್ತು. ಆದರೂ ಆರ್‌ಟಿಐ ಕಾನೂನಿನಡಿ ಪ್ರಶ್ನೆ ಕೇಳಿದ್ದ ಭೂಪನಿಗೆ "ಧರ್ಮೇಂದ್ರ ಅವರು ಪ್ರಕಾಶ್ ಎಂಬಾಕೆಯನ್ನು (ಈಕೆ ಆತನ ಮೊದಲ ಹೆಂಡತಿ ಮತ್ತು ನಾಲ್ಕೈದು ಮಕ್ಕಳ ತಾಯಿ) ಮದುವೆ ಆಗಿದ್ದಾರೆ ಮತ್ತು ಹೇಮಾಮಾಲಿನಿ ಅವರು ಧರ್ಮೇಂದ್ರ ಎಂಬುವವರನ್ನು ಮದುವೆಯಾಗಿದ್ದಾರೆ" ಎಂಬ ಉತ್ತರ ಬಂತು.


ಮಾಹಿತಿ ಹಕ್ಕಿಗೂ, ಸತ್ಯಕ್ಕೂ ಎತ್ತಣಿಂದೆತ್ತಣ ಸಂಬಂಧ?!

ಒಂದು ವಿಷಸರ್ಪ

"ಭಯೋತ್ಪಾದನೆಯನ್ನು ವಿರೋಧಿಸುವುದೆಂದರೆ ಮುಸಲ್ಮಾನರನ್ನು ವಿರೋಧಿಸುವುದು ಎಂದೇ ಅರ್ಥ. ಅವರ ವಿರುದ್ಧ ಸಮರ ಸಾರಬೇಕಿದೆ. ಹಿಂದೂ ಭಯೋತ್ಪಾದನೆ ಎಂಬುದು ಇಲ್ಲವೇ ಇಲ್ಲ"

-ಉತ್ತರ ಪ್ರದೇಶದ ವಿಹೆಚ್‌ಪಿ ಮುಖಂಡ ಯೋಗಿ ಆದಿತ್ಯನಾಥ್

ಓರ್ವ ಜ್ಞಾನಿ



"ಸಮಾಜದಲ್ಲಿ ಬುದ್ಧಿಜೀವಿಗಳು ಬಹಳ ಮುಖ್ಯ ಪಾತ್ರ ನಿರ್ವಹಿಸುತ್ತಾರೆ. ಅಭಿವೃದ್ಧಿ ಕುರಿತಂತೆ ದಡ್ಡ ನಿರ್ಧಾರಗಳನ್ನು ತೆಗೆದುಕೊಂಡ ಎಡಪಕ್ಷಗಳೂ ಸೇರಿದಂತೆ ಎಲ್ಲ ರಾಜಕೀಯ ಪಕ್ಷಗಳು ನಮ್ಮನ್ನು ನಿರಾಶೆಗೊಳಿಸಿದೆ. ಇವತ್ತು ನಮಗೆ ಬೇಕಿರುವುದು ಸರ್ವೋದಯ. ಈ ನೆಲದ ವಾಸ್ತವದೊಂದಿಗೆ ಸಂಬಂಧ ಹೊಂದಿರುವ ಬುದ್ಧಿ ಜೀವಿಗಳು ಇವತ್ತಿನ ಅಗತ್ಯ. ಈ ಹಿನ್ನೆಲೆಯಲ್ಲಿ ಮೇಧಾ ಪಾಟ್ಕರ್ ಅಂಥವರು ನಮಗೆ ಮುಖ್ಯವಾಗುತ್ತಾರೆ.

-ಯು.ಆರ್. ಅನಂತಮೂರ್ತಿ

ಒಂದು ಮೂಢನಂಬಿಕೆ

ಹೊಸದಾಗಿ ನಿರ್ಮಿಸಲ್ಪಟ್ಟಿರುವ ಕೇರಳದ ಹೈಕೋರ್ಟ್‌ನಲ್ಲಿ ಕೊಠಡಿ ಸಂಖ್ಯೆ 13 ಇಲ್ಲ.

-ಒಂದು ಪತ್ರಿಕಾ ವರದಿ (*13* ಅಪಶಕುನದ ಸಂಖ್ಯೆ ಎಂಬ ಮೂಢನಂಬಿಕೆ ಇದೆ. ಅಷ್ಟೇ ಅಲ್ಲ, ಕೇರಳ ನಮ್ಮ ದೇಶದಲ್ಲಿ ಅತಿ ಹೆಚ್ಚು ಸಾಕ್ಷರತೆಯನ್ನು ಹೊಂದಿರುವ ರಾಜ್ಯ)

ಕಾಂಗ್ರೆಸ್ ಪಾಲಿಗೆ ದೇಶಪಾಂಡೆಯೇ ಸೈನೈಡ್




ಕಂಡಹಾಗೆ

ಗೌರಿ ಲಂಕೇಶ್

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ತನ್ನ ಸಮಾಧಿಯನ್ನು ...ರ್ಮಿಸಲು ಹೊರಟಿದೆ. ಅದರ ಪ್ರಥಮ ಇಟ್ಟಿಗೆಯೇ ...ರ್.ವಿ. ದೇಶಪಾಂಡೆ ಎಂಬ ದುಷ್ಟನನ್ನು ರಾಜ್ಯಾಧ್ಯಕ್ಷ ...ನ್ನಾಗಿ ನೇಮಿಸಿರುವುದು. ಈ ದೇಶಪಾಂಡೆಗೆ ಇತ್ತ ...ಕ್ಷವೂ ಇಲ್ಲ, ಅತ್ತ ಜಾತಿ ಬೆಂಬಲವೂ ಇಲ್ಲ. ...ಷ್ಟೇ ಅಲ್ಲ, ಈತನಲ್ಲಿ ಯಾವ ಸಿದ್ಧಾಂತ, ನೈತಿಕತೆ, ...ಚನಾತ್ಮಕ ಯೋಚನೆ, ಪಕ್ಷನಿಷ್ಠೆ ಎಂತಹದ್ದೂ ಇಲ್ಲ. ...ಷ್ಟ ಬದುಕಿನುದ್ದಕ್ಕೂ ಬರೀ ಸ್ವಾರ್ಥ ರಾಜಕಾರಣ ...ಮಾಡಿದ, ಅಪಾರ ಆಸ್ತಿ ಸಂಗ್ರಹಿಸಿದ ಅಪ್ಪಟ ಅವಕಾಶ ...ದಿ ಈ ದೇಶಪಾಂಡೆ. ಇವೆಲ್ಲಕ್ಕಿಂತ ಆತಂಕಕಾರಿ ...ಷಯ ಯಾವುದೆಂದರೆ ಈತ ಜಾತ್ಯತೀತ ಕಾಂಗ್ರೆಸ್ ...ನುಷ್ಯನಂತಲ್ಲದೆ ಕೋಮುವಾದಿ ಬಿಜೆಪಿಯ ಕ್ಯಾಂಡಿ...ಟ್‌ನಂತೆ ವರ್ತಿಸುತ್ತಿರುವುದು. ರಾಜ್ಯ ...ಂಗ್ರೆಸ್‌ನ ಅಧ್ಯಕ್ಷನಾಗಿ ನೇಮಕಗೊಳ್ಳುತ್ತಿದ್ದಂತೆ ದೇಶಪಾಂಡೆ ಮಾಡಿದ ಮೊದಲ ಕೆಲಸ ...ಮಚಂದ್ರಾಪುರ ಮಠದ 'ಗೋ'ಸ್ವಾಮಿ ...ಘವೇಶ್ವರನ ಪಾದಕ್ಕೆ ಎರಗಿದ್ದು. ರಾಘವೇಶ್ವರ ...ಪ್ಪಟ ಹಿಂದೂತ್ವವಾದಿ ಮಾತ್ರವಲ್ಲ, ಬಿಜೆಪಿ ...ಧಿಕಾರದಲ್ಲಿರುವುದನ್ನೇ ಬಂಡವಾಳ ಮಾಡಿ...ಕೊಂಡು ಗೋಕರ್ಣವನ್ನು ಸ್ವಾಹಾ ಮಾಡಿ...ದವನು, ಅಮೃತಮಹಲ್ ಕಾವಲ್‌ಅನ್ನು ...ದೋಚಲು ಪ್ರಯತ್ನಿಸಿದವನು, ಸಂವಿಧಾನ ...ಕೊಡಿರುವ ಮತಾಂತರ ಹಕ್ಕನ್ನು ನಿಷೇಧಿಸ...ಬೇಕೆಂದು ಹೇಳುತ್ತಿರುವವನು, ಸರ್ಕಾರದಿಂದ ...ಕೋಟಿಗಟ್ಟಲೆ ಸಾರ್ವಜನಿಕರ ಬೆವರಿನ ...ಣವನ್ನು ಕಿಂಚಿತ್ತೂ ಸ್ವಾಭಿಮಾನವಿಲ್ಲದೆ ...ಕರಿಸುತ್ತಿರುವವನು.

ಇಂತಹ ಸ್ವಾಮಿಗೂ, ಕಾಂಗ್ರೆಸ್ ಪಕ್ಷದ ಸಿದ್ಧಾಂತಕ್ಕೂ ...ಯಾವ ಸಂಬಂಧ? ಆದರೆ ತನ್ನ ಖಾದಿ ಪ್ಯಾಂಟಿನೊಳಗೆ ...ಕಿ ಚೆಡ್ಡಿ ಧರಿಸಿರುವಂತೆ ವರ್ತಿಸುತ್ತಿರುವ ದೇಶಪಾಂಡೆ ...ಘವೇಶ್ವರನ ಪಾದಪೂಜೆ ಮಾಡುತ್ತಾರಲ್ಲದೆ, ಆತ ...ನಾಭಿಪ್ರಾಯದ ವಿರುದ್ಧ, ಕಾನೂನನ್ನು ಮುರಿದು ...ತಿಹಾಸಿಕ ಗೋಕರ್ಣ ದೇವಸ್ಥಾನ ಸೇರಿದಂತೆ ಅಲ್ಲಿನ ...ತರೆ ದೇಗುಲಗಳನ್ನು ಅಕ್ರಮವಾಗಿ ತನ್ನದಾಗಿಸಿಕೊಂಡಿರು...ದನ್ನು ಸಮರ್ಥಿಸಿಕೊಳ್ಳುತ್ತಾರೆ. ಮಾತ್ರವಲ್ಲ ...ಗೋಕರ್ಣವನ್ನು ರಾಘವೇಶ್ವರ ಸ್ವಾಮಿಗೆ ನೀಡಿರುವುದರ ...ಗ್ಗೆ ನನಗೆ ಯಾವ ಅಭ್ಯಂತರವೂ ಇಲ್ಲ. ಗೋಕರ್ಣ ...ಭಿವೃದ್ಧಿಯಾಗಬೇಕಷ್ಟೇ" ಎಂದೂ ದೇಶಪಾಂಡೆ ...ಘೋಷಿಸುತ್ತಾರೆ. ರಾಘವೇಶ್ವರನ ಪಕ್ಕಾ ಭಂಟ ಯಡ್ಡಿಗೂ, ...ಂಗ್ರೆಸ್‌ನ ಈ ಗುಪ್ತ ಚೆಡ್ಡಿಗೂ ಏನು ವ್ಯತ್ಯಾಸ? ಬಿಜೆಪಿಯನ್ನು ವಿರೋಧಿಸುವ, ಕಾಂಗ್ರೆಸ್ ಅನ್ನು ಗೆಲ್ಲಿಸುವ ಶಕ್ತಿ ಇಂತಹ ಮನುಷ್ಯನಿಗೆ ಬರುವುದಾದರೂ ಎಲ್ಲಿಂದ?

ರಾಘವೇಶ್ವರ ಸ್ವಾಮಿ ಮಾತ್ರವಲ್ಲ, ಈ ದೇಶಪಾಂಡೆ ಇತ್ತೀಚೆಗೆ ಭೇಟಿ ಮಾಡಿರುವ ಇತರರು–ರವಿಶಂಕರ್ ಎಂಬ ಢೋಂಗಿ ಗುರು, ಗಂಗೂಬಾಯಿ ಹಾನಗಲ್-ಕೂಡ ಹಿಂದೂತ್ವವಾದಿಗಳ ಆಪ್ತರೆ. ಈ ದೇಶಪಾಂಡೆ ಎಂತಹ ಕೋಮುವಾದಿ ಎಂದರೆ ಕೆಲವರ್ಷಗಳ ಹಿಂದೆ ಈತ ಸಂಯುಕ್ತ ಕರ್ನಾಟಕ ಪತ್ರಿಕೆಯ ಧರ್ಮದರ್ಶಿ ಆಗಿದ್ದಾಗಲೇ ಆ ಪತ್ರಿಕೆಯು ತನ್ನ ಅಲ್ಲಿಯತನಕದ ಜನಪರ ನಿಲುವನ್ನು ತೊರೆದು ಸಂಪೂರ್ಣವಾಗಿ ಕೇಸರಿಮಯಗೊಂಡಿತು. ಅಂದಹಾಗೆ, ಈ ಕೃತ್ಯದಲ್ಲಿ



ದೇಶಪಾಂಡೆಯೊಂದಿಗೆ ಕೈಜೋಡಿಸಿದ್ದು ಹಾರ್ನಳ್ಳಿ ರಾಮಸ್ವಾಮಿ ಎಂಬ ಮತ್ತೋರ್ವ ಕಾಂಗ್ರೆಸ್ಸಿಗ. ತಾನು ಮಾಜಿ ಸ್ವಾತಂತ್ರ್ಯ ಹೋರಾಟಗಾರ ಎಂದು ಹೇಳಿಕೊಳ್ಳುವ ಹಾರ್ನಳ್ಳಿ ರಾಮಸ್ವಾಮಿ ಇವತ್ತು ಗಾಂಧಿ ತತ್ವ, ಸಿದ್ಧಾಂತ, ಜಾತ್ಯತೀತ ನಿಲುವು ಎಲ್ಲವನ್ನು ತೊರೆದು ಅಪ್ಪಟ ಕೋಮುವಾದಿಯಾಗಿದ್ದಾರೆ. ಆದರೆ ಕಾಂಗ್ರೆಸ್ ಪಕ್ಷ ಇವತ್ತಿಗೂ ಈ ಹಾರ್ನಳ್ಳಿ ರಾಮಸ್ವಾಮಿ ಎಂಬ ಬ್ರಾಹ್ಮಣ-ಬ್ರಾಹ್ಮಣಶಾಹಿಯನ್ನು ಪಕ್ಷದಿಂದ ಒದ್ದೋಡಿಸುವ ಕೆಲಸ ಮಾಡಿಲ್ಲ. ಮಾತ್ರವಲ್ಲ ಇದೇ ರಾಮಸ್ವಾಮಿಯ ಪಡಿಯಚ್ಚನಂತಿರುವ ದೇಶಪಾಂಡೆ ಕೈಗೆ ರಾಜ್ಯ ಕಾಂಗ್ರೆಸ್ ಅನ್ನು ನೀಡಿದೆ ಪಕ್ಷದ ಹೈಕಮಾಂಡ್. ದೇಶಪಾಂಡೆ ಕಾಂಗ್ರೆಸ್‌ಗೆ ಕೈ ಕೊಡಬಹುದೇ ಹೊರತು ಪಕ್ಷದ 'ಕೈ'ಯನ್ನು ಖಂಡಿತವಾಗಿಯೂ ಬಲಪಡಿಸುವುದಿಲ್ಲ.

ದೇಶಪಾಂಡೆಯನ್ನು ರಾಜ್ಯಾಧ್ಯಕ್ಷನನ್ನಾಗಿ ನೇಮಿಸಿದಾಗ ರಾಜ್ಯದ ವಿವಿಧೆಡೆ ಕ್ರಿಶ್ಚಿಯನ್ನರ ಚರ್ಚ್‌ಗಳ ಮೇಲೆ ಹಿಂದೂತ್ವವಾದಿಗಳು ದಾಳಿ ನಡೆಸಿದ್ದರು, ಅಲ್ಪಸಂಖ್ಯಾತರ ದಮನ ಮುಂದುವರಿದಿತ್ತು, ಇವತ್ತಿಗೂ ಬಿಜೆಪಿ ಸರ್ಕಾರದಿಂದ ರೈತರಿಗೆ ಪುಕ್ಕಟೆ ವಿದ್ಯುತ್ ಇರಲಿ, ನೆಟ್ಟಗೆ ದಿನಕ್ಕೆ ಹತ್ತು ಗಂಟೆಯೂ ವಿದ್ಯುತ್ ಸರಬರಾಜು ಮಾಡಲಾಗುತ್ತಿಲ್ಲ. ಆದರೆ ಇದೇ ಅವಧಿಯಲ್ಲಿ 6,000 ಅಧಿಕಾರಿಗಳ ವರ್ಗಾವರ್ಗಿ ನಡೆದು ಲಂಚದ ರೂಪದಲ್ಲಿ ಕೋಟ್ಯಂತರ ರೂ.ಗಳನ್ನು ಯಡ್ಡಿ ಗ್ಯಾಂಗ್ ಕೊಳ್ಳೆ ಹೊಡೆಯುತ್ತಿದೆ.

ಬಿಜೆಪಿಯ ಈ ಎಲ್ಲ ಅವ್ಯವಹಾರಗಳ ವಿರುದ್ಧ ರಣಕಹಳೆ ಊದುತ್ತಿರುವುದು ಜೆಡಿಎಸ್‌ನ ಕುಮಾರಸ್ವಾಮಿ. ಮುದಿ ದೇಶಪಾಂಡೆಗೆ ಹೋಲಿಸಿದರೆ ರಾಜಕೀಯ ಅನುಭವದಲ್ಲಿ ಕುಮಾರಸ್ವಾಮಿ ಇನ್ನೂ ಬಾಲಕ. ಆದರೆ ಅವರು ವಿರೋಧಪಕ್ಷವೊಂದರ ನಾಯಕನಂತೆ ಯಡ್ಡಿ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ. ಯಾವ ಮುಲಾಜು, ಭಯ ಇಲ್ಲದೆ ಟೀಕಾ ಪ್ರಹಾರ ನಡೆಸಿದ್ದಾರೆ.

ಆದರೆ ದೇಶಪಾಂಡೆ ಮಾಡಿರುವುದೇನು? "ನಿರುದ್ಯೋಗಿಗಳಿಗೆ ಕೊಡುತ್ತೇವೆಂದಿದ್ದ ಭತ್ಯೆಯನ್ನು ನೀಡಿಲ್ಲ" ಎಂದು ಎಲ್ಲೋ ಪಿಸುಗುಟ್ಟಿದ್ದಾರೆ. ಅಲ್ಲಾ, ನಿರುದ್ಯೋಗ ನಿವಾರಣೆಗೆ ಕೆಲಸಗಳನ್ನು ಸೃಷ್ಟಿಸುತ್ತೇವೆ ಎನ್ನುವುದು ನಿಜವಾದ ನಾಯಕನ ಗುಣ, ಅದರ ಬದಲಾಗಿ ನಿರುದ್ಯೋಗಿಗಳಿಗೆ ಭಿಕ್ಷೆಗೆ ಸಮನಾದ ಭತ್ಯೆ ನೀಡುತ್ತೇವೆ ಎನ್ನುವುದು ಚಿಲ್ಲರೆ ನಾಯಕನ ಗುಣ ಎಂಬುದೂ ದೇಶಪಾಂಡೆಗೇ ಗೊತ್ತಿಲ್ಲವೆ? ಅಥವಾ ಗೊತ್ತಿದ್ದೂ ಯಡಿಯೂರಪ್ಪನ ಸರ್ಕಾರವನ್ನು ಟೀಕಿಸಲಾಗದಷ್ಟು ಭಯವೇ?

ಹೋಗಲಿ, ಮಾತನಾಡುವುದು ಬೇಡ, ಮಾಡಿಯಾದರೂ ಈತ ತೋರಿಸಿದ್ದಾರೆಯೇ ಎಂದು ನೋಡಿದರೆ, ಅದೂ ಇಲ್ಲ. ಹಿಂದುತ್ವವಾದಿ ಧರ್ಮಾಂಧರ ದಾಳಿಗೆ ಗುರಿಯಾದ ಯಾವ ಚರ್ಚ್‌ಗೂ ದೇಶಪಾಂಡೆ ಭೇಟಿ ನೀಡಲಿಲ್ಲ, ಯಾವುದೇ ಕ್ರಿಶ್ಚಿಯನ್ನರನ್ನು ಕಂಡು ಸಹಾನುಭೂತಿಯನ್ನು ವ್ಯಕ್ತಪಡಿಸಲಿಲ್ಲ. ದೇಶಪಾಂಡೆಯ ತಲೆಯ ಮೇಲಿನ ಕೂದಲು ಬೆಳ್ಳಗಾಗಿದೆಯೇ ಹೊರತು ಈತನ ಬುದ್ಧಿ ಮಾತ್ರ ಬೆಳೆದಿಲ್ಲ ಎಂಬುದು ಇದೆಲ್ಲದ ರಿಂದ ಅರ್ಥವಾಗುತ್ತದೆ.

ಸಿದ್ಧರಾಮಯ್ಯ ತರಹದ ಜನನಾಯಕರು ಕಾಂಗ್ರೆಸ್ ಪಕ್ಷದಲ್ಲಿ ಹತಾಶರಾದರೆ ಅದಕ್ಕೆ ಕಾರಣ ದೇಶಪಾಂಡೆ ತರಹದವರು. ಅದರೊಂದಿಗೆ ಇಂಥ ನಿರುಪಯುಕ್ತ ಜನರಿಗೆ ನಾಯಕತ್ವ ಸ್ಥಾನವನ್ನು ನೀಡುವ 'ಹೈಕಮಾಂಡಿನ ಧೋರಣೆ.

ಕಾಂಗ್ರೆಸ್ ಹೈಕಮಾಂಡ್ ಇಂತಹ ತಪ್ಪನ್ನು ಮಾಡುತ್ತಿರುವುದು ಇದೇ ಮೊದಲಲ್ಲ. ಕೆಲವರ್ಷಗಳ ಹಿಂದೆ ಗುಜರಾತಿನಲ್ಲಿ ನರಹಂತಕ ನರೇಂದ್ರ ಮೋದಿಯ ವಿರುದ್ಧ ಚುನಾವಣಾ ಕಾಳಗದಲ್ಲಿ ಕಾಂಗ್ರೆಸ್ ಇಳಿಸಿದ್ದು ಶಂಕರ್ ಸಿಂಗ್ ವಘೇಲಾ ಎಂಬಾತನನ್ನು. ದೇಶಪಾಂಡೆ ಗುಪ್ತ ಚೆಡ್ಡಿಯಾದರೆ ವಘೇಲಾ ಮಾಜಿ ಚೆಡ್ಡಿ. ಇವರಿಬ್ಬರ ನಡುವೆ ಅಷ್ಟೇ ವ್ಯತ್ಯಾಸ. RSS, ಜನಸಂಘ, ಸಂಘ ಪರಿವಾರ ಮತ್ತು ಬಿಜೆಪಿಯಲ್ಲೇ ಬೆಳೆದಿದ್ದ ವಘೇಲಾ ಗುಜರಾತ್ ಕಾಂಗ್ರೆಸ್ ಅನ್ನು ಹಿಂದೂತ್ವದ 'ಬಿ' ಟೀಮ್ ಆಗಿ ಪರಿವರ್ತಿಸಿದ. ಪರಿಣಾಮ ಚುನಾವಣೆಯಲ್ಲಿ ಕಾಂಗ್ರೆಸ್ ಮಣ್ಣು ಮುಕ್ಕಿತಲ್ಲದೆ, ಹಿಂದೂತ್ವದ 'ಎ' ಟೀಮ್ ಆಗಿದ್ದ ಮೋದಿ ಮತ್ತೆ ಗೆದ್ದು ಮುಖ್ಯಮಂತ್ರಿಯಾಗಿ ಮುಂದುವರೆದ.

ಗುಜರಾತಿನಲ್ಲಿ ಮಾಡಿದ ಈ ವಿಫಲ ಪ್ರಯೋಗದಿಂದಲಾದರೂ ಕಾಂಗ್ರೆಸ್‌ಗೆ ಬುದ್ಧಿ ಬಂದಿದೆ ಎಂದು ಹಲವರು ಭಾವಿಸಿದ್ದರು. ಆದರೀಗ ಅಂತಹದ್ದೇ ತಪ್ಪನ್ನು ಕರ್ನಾಟಕದಲ್ಲೂ ಕಾಂಗ್ರೆಸ್ ಮಾಡಿದೆ. ಕಾಂಗ್ರೆಸ್ ತನ್ನ ಸಮಾಧಿಯನ್ನು ತಾನೇ ಕಟ್ಟಿಕೊಳ್ಳಲು ಮುಂದಾಗಿದೆ.... ■

ಬಾಬಾಬುಡನ್ ಗಿರಿ: ಚೆಡ್ಡಿಗಳ ಕುತಂತ್ರಕ್ಕೆ ಜಿಲ್ಲಾಡಳಿತ ಬಲಿ!

ಬಾಬಾಬುಡನ್ ಗಿರಿಯಂಥ ಕೋಮುಸೌಹಾರ್ದ ...ತಾಣವನ್ನು ಹಿಂದೂತ್ವ ಕೋಮುವಾದಿಗಳು ಹೇಗೆ ಒಂದು ...ರಣರಂಗವನ್ನಾಗಿ ಮಾಡಿದರು ಎಂಬುದು ಇಡೀ ರಾಜ್ಯಕ್ಕೇ ...ಗೊತ್ತಿದೆ. ಆದರೆ ಇತ್ತೀಚೆಗೆ ಚುನಾಯಿತ ಸರ್ಕಾರಗಳು, ...ಜಿಲ್ಲಾಡಳಿತಗಳು ಬಹಿರಂಗವಾಗಿ ಸಂಘಪರಿವಾರಿಗ...ಳೊಂದಿಗೆ ಕೈಜೋಡಿಸುತ್ತಿರುವುದು ಬರಲಿರುವ ಅಪಾಯದ ...ಮುನ್ಸೂಚನೆಯಾಗಿದೆ.

ಇತ್ತೀಚೆಗೆ ಚಿಕ್ಕಮಗಳೂರು ಜಿಲ್ಲಾಧಿಕಾರಿ ನಾರಾಯಣ ...ಸ್ವಾಮಿಯ ನೇತೃತ್ವದಲ್ಲಿ ಜಿಲ್ಲಾಡಳಿತ ತೆಗೆದುಕೊಂಡಿರುವ ನಿರ್ಧಾರ ಇದಕ್ಕೊಂದು ಸ್ಪಷ್ಟ ಉದಾಹರಣೆಯಾಗಿದೆ.

ಶತಶತಮಾನಗಳಷ್ಟು ಹಳೆಯದಾದ ಬಾಬಾಬುಡನ್ ಗುಹಾದರ್ಗಾ ಜಿಲ್ಲಾಡಳಿತ ಮತ್ತು ಸರ್ಕಾರದ ನಿರ್ಲಕ್ಷ್ಯದಿಂದಾಗಿ ಇತ್ತೀಚೆಗೆ ಶಿಥಿಲಾವಸ್ಥೆಯೆಡೆಗೆ ಹೊರಟಿದೆ. ಕಳೆದ ಜೂನ್‌ನಲ್ಲಿ ಗುಹೆಯು ಕುಸಿದುಬಿದ್ದಿತ್ತು, ಆ ನಂತರದಲ್ಲಿ ಸುರಿದ ಧಾರಾಕಾರ ಮಳೆಯಿಂದಾಗಿ ಮತ್ತಷ್ಟು ನಾಶವಾಗಿ ಈಗ ಅದಕ್ಕೆ ಬೀಗ ಹಾಕಿ ಅಲ್ಲಿಗೆ ಯಾರೂ ಹೋಗದಂತೆ ತಡೆಯಲಾಗಿದೆ.



ಬಾಬಾಬುಡನ್ ಗುಹಾದರ್ಗಾವನ್ನು ಸರ್ಕಾರ ಮತ್ತು ಜಿಲ್ಲಾಡಳಿತಗಳು ಪುನರ್ರೂಪಿಸುವುದಕ್ಕೆ ಯೋಜನೆ ರೂಪಿಸುತ್ತಿವೆ. ಈ ಅವಕಾಶವನ್ನೇ ಬಳಸಿಕೊಂಡು ಆ ಜಾಗದಲ್ಲಿ ಹೊಸ ಹೊಸ ಪೂಜೆಗಳಿಗೆ, ಹೋಮ-ಹವನಗಳಿಗೆ ಅನುಕೂಲವಾಗುವಂತೆ ಅದನ್ನು ಪುನರ್ರೂಪಿಸುವ ತಂತ್ರವನ್ನು ಸಂಘಪರಿವಾರಿಗಳು ಹೆಣೆಯುತ್ತಿದ್ದಾರೆ. ಗುಹೆಯು ಈ ಹಿಂದೆ ಹೇಗಿತ್ತೋ ಅದೇ ರೀತಿಯಲ್ಲಿ ಅದನ್ನು ಪುನರ್‌ನಿರ್ಮಿಸಬೇಕಿರುವ ಸರ್ಕಾರ ಮತ್ತು ಜಿಲ್ಲಾಡಳಿತಗಳು ಚೆಡ್ಡಿಗಳ ತಾಳಕ್ಕೆ ತಕ್ಕಂತೆ ಕುಣಿಯುವ ಸಾಧ್ಯತೆಯನ್ನು ಈಗಾಗಲೇ ತೋರ್ಪಡಿಸುತ್ತಿವೆ.

ಈಗ ಗುಹೆಯು ಕುಸಿದು ಬಿದ್ದಿರುವುದರಿಂದ ಎಲ್ಲಾ ಸಮುದಾಯದ ಭಕ್ತರು ಅಲ್ಲಿಗೆ ಹೋಗುವುದನ್ನು ಅನಿವಾರ್ಯವಾಗಿ ನಿಲ್ಲಿಸಿದ್ದಾರೆ. ಅಲ್ಲಿ ಪ್ರತಿದಿನ ನಡೆಯುತ್ತಿದ್ದ ಆಚರಣೆಗಳೂ ನಿಂತಿವೆ. ಇದನ್ನೇ ನೆಪವಾಗಿಟ್ಟುಕೊಂಡು ಸಂಘಪರಿವಾರ ಅಲ್ಲಿ ದತ್ತಾತ್ರೇಯನ ವಿಗ್ರಹ ಸ್ಥಾಪಿಸುವುದಕ್ಕೆ ಆಗ್ರಹಿಸುತ್ತಿದೆ. ಇದಕ್ಕೆ ಮಣಿದಿರುವ ಜಿಲ್ಲಾಡಳಿತ ಗುಹೆಯಿಂದ ಒಂದು ಕಿ.ಮೀ. ದೂರದಲ್ಲಿರುವ ಗಾಳಿಕೆರೆ ಎಂಬಲ್ಲಿ ತಾತ್ಕಾಲಿಕವಾಗಿ ದತ್ತಾತ್ರೇಯ ವಿಗ್ರಹ ಸ್ಥಾಪಿಸುವುದಕ್ಕೆ ಅನುಮತಿ ಕೊಟ್ಟಿದೆಯಲ್ಲದೇ ಶ್ರೀರಾಮನ ವಿಗ್ರಹವನ್ನು ತಾನೇ ಪ್ರತಿಷ್ಠಾಪಿಸುವುದಾಗಿ ಭರವಸೆ ಕೊಟ್ಟಿದೆ.

ಇಲ್ಲಿ ಗಮನಿಸಬೇಕಾದ ಎರಡು ಅಂಶಗಳಿವೆ. ಮೊದಲನೆಯದು, ಗುಹೆ ಕುಸಿದಿರುವುದರಿಂದ ಕೇವಲ ಹಿಂದೂಗಳ ಆಚರಣೆಗೆ ಅಡಚಣೆಯಾಗಿಲ್ಲ, ಪ್ರತಿದಿನ ಮುಸ್ಲಿಮರು ಲೋಬಾನ, ಕರ್ಪೂರಗಳನ್ನು ತರುವುದಕ್ಕೂ ಅಡಚಣೆಯಾಗಿದೆ. ಹೀಗಿದ್ದ ಮೇಲೆ, ಕೇವಲ ಸಂಘಪರಿವಾರಿಗಳಿಗೆ ಮಾತ್ರವೇ ಪರ್ಯಾಯ ವ್ಯವಸ್ಥೆ ಮಾಡಿರುವುದು ತಾರತಮ್ಯವಲ್ಲದೇ ಮತ್ತೇನಲ್ಲ.

ಎರಡನೆಯದು ಮತ್ತು ಅತ್ಯಂತ ಅಪಾಯಕಾರಿಯಾದದ್ದು ಎಂದರೆ ಇದರ ಹಿಂದಿರುವ ಸಂಘಪರಿವಾರಿಗಳ ಕುತಂತ್ರ. ಚರಿತ್ರೆಯನ್ನು ತಮಗೆ ಬೇಕಾದಂತೆ ತಿರುಚುವಲ್ಲಿ ನಿಸ್ಸೀಮರಾಗಿರುವ ಸಂಘಪರಿವಾರಿಗಳು ಇಲ್ಲೂ ಅದನ್ನೇ ಮಾಡಲು ಹೊರಟಿದ್ದಾರೆ. ಈ ಹೊತ್ತು ತಾತ್ಕಾಲಿಕ ವಿಗ್ರಹಗಳನ್ನು ಸ್ಥಾಪಿಸುವುದನ್ನೇ ಮುಂದೊಂದು ದಿನ ಐತಿಹಾಸಿಕ ದಾಖಲೆಯಂತೆ ತೋರಿಸಿ 'ಶತ ಶತಮಾನಗಳಿಂದಲೂ ಇಲ್ಲಿ ದತ್ತಾತ್ರೇಯನ, ಶ್ರೀರಾಮನ ವಿಗ್ರಹವಿತ್ತು' ಎಂದು ವಾದಿಸಿ ಜನರನ್ನು ಹಾದಿ ತಪ್ಪಿಸುತ್ತಾರೆ. ವಾಸ್ತವದಲ್ಲಿ ದತ್ತ ಜಯಂತಿ ಎಂಬ ಆಚರಣೆಯನ್ನು ಅವರು ಹೀಗೇ ಪ್ರಾರಂಭಿಸಿದರು. 1997ಕ್ಕಿಂತ ಹಿಂದೆ ಅಲ್ಲಿ ದತ್ತಜಯಂತಿ ಎಂಬ ಆಚರಣೆಯೇ ಇರಲಿಲ್ಲ. ಕೇವಲ ಈ ಹಿಂದಿನ ಆರೇಳು ವರ್ಷಗಳಲ್ಲಿ ಅಂತಹ ಕೃತಕ ಆಚರಣೆಯನ್ನು ಪ್ರಾರಂಭಿಸಿ ಈಗ ಅದನ್ನೇ ಐತಿಹಾಸಿಕ ಸಂಪ್ರದಾಯದಂತೆ ತೋರಿಸುತ್ತಿದ್ದಾರೆ.

ಇಂತಹ ಉದಾಹರಣೆ ಕಣ್ಣೆದುರಿಗೇ ಇದ್ದರೂ ಜಿಲ್ಲಾಡಳಿತ ಸಂಘಪರಿವಾರಿಗಳಿಗೆ ವಿಗ್ರಹ ಸ್ಥಾಪಿಸಲು ಅವಕಾಶ ಮಾಡಿಕೊಟ್ಟಿರುವುದು ಅದರ ಪಕ್ಷಪಾತಿತನವನ್ನು ತೋರಿಸುತ್ತದೆ. ಮಾತ್ರವಲ್ಲ, ಸಂಘಪರಿವಾರಿಗಳ ಕುತಂತ್ರಕ್ಕೆ ತಾನೂ ಬಲಿಯಾಗುತ್ತಾ ಜನರನ್ನೂ ಬಲಿಕೊಡುತ್ತಿದೆ. ■

ಮಾದೇಗೌಡರಿಗೆ ಮೂರು ನಾಮ



ಮಾದೇ ಗೌಡರಿಗ್ಯಾಕೋ ಟೈಮ್ ಸರಿ ಇದ್ದಂತಿಲ್ಲ. ಎಸ್‌ಎಂ ಕೃಷ್ಣ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಬಿರುಸಾಗಿದ್ದ ಕಾವೇರಿ ಚಳವಳಿಯ ಮುಂದೆ ನಿಂತು, ಇಡೀ ಚಳವಳಿಗೆ ಏಕಮೇವ ವಕ್ತಾರ ತಾನೇ ಎಂಬಂತೆ ಗುಟುರು ಹಾಕಿದ್ದ ಮಾದೇಗೌಡರನ್ನು ಕೃಷ್ಣ ಮೆತ್ತಗೆ ಮಾಡಿದ್ದರು. ಕಿರುಗಾವಲಿನಿಂದ ಮಗನಿಗೆ ಟಿಕೆಟ್ ಕೊಡುತ್ತೇವೆಂದು ಹೇಳಿದ್ದಕ್ಕೇ ಮಾದೇಗೌಡ ಸುಮ್ಮನಾಗಿ ಬಿಟ್ಟಿದ್ದರು. ಅದೇ ಕಾರಣದಿಂದ ಹೆಸರು ಕೆಡಿಸಿಕೊಂಡ ಗೌಡರು, ಕಾವೇರಿ ಅಂತಿಮ ತೀರ್ಪು ಬಂದಾಗ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಟೆಂಟ್ ಹಾಕಿ ಕೂತಾಗ ಪುರಾತನ ಹಿಂಬಾಲಕ ಆತ್ಮಾನಂದರೊಬ್ಬರನ್ನು ಬಿಟ್ಟರೆ, ಇನ್ಯಾರೂ ಹಿಂದೆ ಸುಳಿಯಲಿಲ್ಲ. ಅತ್ತ ಕಿರುಗಾವಲಿನಲ್ಲಿ ಮಗನೂ ಗೆಲ್ಲಲಿಲ್ಲ. ಈಗ ಕ್ಷೇತ್ರವನ್ನೂ ಕಳೆದುಕೊಂಡು, ವ್ರತವನ್ನೂ ಕೆಡಿಸಿಕೊಂಡು ಬಿಜೆಪಿಗೆ ಹೋದರೆ, ಅವರಂತೂ ಮಾದೇಗೌಡರಿಗೆ ಹುಸಿಗೌರವವನ್ನು ಬಿಟ್ಟರೆ ಯಾವ ಕಿಮ್ಮತ್ತನ್ನೂ ಕೊಡುತ್ತಿಲ್ಲ. ತನ್ನ ಪಾರಂಪರಿಕ ಕಾಂಗ್ರೆಸ್ ಪಕ್ಷವೇ ವಾಸಿ ಎಂಬುದು ಮಾದೇಗೌಡರಿಗೆ ಅರಿವಾದಂತಿದೆ. ತನ್ನ ಕಾಂಗ್ರೆಸ್ ನಿಷ್ಠೆ, ಗಾಂಧಿವಾದವನ್ನೆಲ್ಲ ಒತ್ತೆ ಇಟ್ಟು ಬಿಜೆಪಿಯನ್ನು ಸೇರಿದ್ದರೂ ಇಂದು ಮಗನಿಗೆ ಟಿಕೆಟ್ ಕೊಡದೆ ತಮ್ಮಣ್ಣನನ್ನು ಕರೆತರಲು ಯತ್ನಿಸುತ್ತಿರುವುದು ಅವರಿಗೆ ಸಿಟ್ಟು ತರಿಸಿದೆ. ತಾನು ಕಾಂಗ್ರೆಸ್‌ನಲ್ಲೇ ಎಂಥೆಂಥವರನ್ನೆಲ್ಲಾ ನೋಡಿದ್ದರೂ, ಬಿಜೆಪಿಯವರು ಮಾಡುತ್ತಿರುವ ವ್ಯಾಪಾರ ಮಾದೇಗೌಡರನ್ನು ದಂಗುಬಡಿಸಿದೆ. ಈಗಲಾದರೂ ಮಾದೇಗೌಡರು ಬಿಜೆಪಿಗೆ ಎಳ್ಳು ನೀರು ಬಿಟ್ಟು ತಮ್ಮ ಮಗನ ಸಮೇತ ಕಾಂಗ್ರೆಸ್‌ಗೆ ಮರಳುವುದೇ ಕ್ಷೇಮಕರವೇನೋ? ■

ಮದ್ದೂರು ಉಪಚುನಾವಣೆ: ಯಾರ‍್ಯಾರಿಗೆ ಟಿಕೆಟ್

ಆಪರೇಷನ್ ಕಮಲದಲ್ಲಿ ಕ್ಷಮಿಸಿ ಆಪರೇಷನ್ ಕ'ಮಲ'ದಲ್ಲಿ ಬಕರಿಯಾದ ೭ ಶಾಸಕರ ಕ್ಷೇತ್ರಗಳ ಜೊತೆ ಮದ್ದೂರು ವಿಧಾನಸಭಾ ಕ್ಷೇತ್ರಕ್ಕೂ ಉಪಚುನಾವಣೆ ನಡೆಯಲಿದೆ. ಮದ್ದೂರಿಗೆ ಎಂಎಲ್‌ಎ ಆಗಿಯೇ ತೀರಬೇಕೆಂಬ ಮಹದಾಸೆ ಹೊತ್ತಿದ್ದ ಸಿದ್ದರಾಜು ಎಂಎಲ್‌ಎ ಆದ ಮೂರು ತಿಂಗಳಿಗೇ ತೀರಿಕೊಂಡಿದ್ದರಿಂದ ಈ ಉಪಚುನಾವಣೆ ನಡೆಯಲಿದೆ. ಜೆಡಿಎಸ್‌ನಿಂದ ಮೃತ ಶಾಸಕರ ಪತ್ನಿ ಕಲ್ಪನಾ ಸಿದ್ದರಾಜುಗೇ ಟಿಕೆಟ್ ಎಂದು ಹೇಳಲಾಗುತ್ತಿದೆಯಾದರೂ, ಹೊನ್ನಲಗೆರೆ ರಾಮಕೃಷ್ಣ ಸಹ ತನಗೇ ಬೇಕೆಂದು ಪಟ್ಟು ಹಿಡಿದಿರುವುದರಿಂದ ಇನ್ನೂ ಅಧಿಕೃತವಾಗಿ ಘೋಷಣೆಯಾಗಿಲ್ಲ. ಆಶ್ಚರ್ಯಕರ ವಿಚಾರವೆಂದರೆ ಬಿಜೆಪಿ ಮತ್ತು ಕಾಂಗ್ರೆಸ್ ಎರಡರಲ್ಲೂ ಮಾಜಿ ಶಾಸಕ ಡಿ.ಸಿ.ತಮ್ಮಣ್ಣರಿಗೇ ಟಿಕೆಟ್ ಕೊಡುವ ಪ್ರಯತ್ನ ನಡೆದಿದೆ.




ಕಲ್ಪನಾಸಿದ್ದರಾಜ್

ಕಳೆದ ಚುನಾವಣೆಯಲ್ಲಿ ಹಣಾಹಣಿ ನಡೆದಿದ್ದು ಜೆಡಿಎಸ್‌ನ ಸಿದ್ದರಾಜು, ಕಾಂಗ್ರೆಸ್‌ನ ತಮ್ಮಣ್ಣ ಮತ್ತು ಬಿಜೆಪಿಯ ಮಧು ಮಾದೇಗೌಡ ಇವರ ನಡುವೆ. 2004ರಲ್ಲಿ ಇದೇ ತಮ್ಮಣ್ಣ ಮತ್ತು ಮಧು ಇಬ್ಬರೂ ಕಾಂಗ್ರೆಸ್‌ನಿಂದಲೇ ಮದ್ದೂರು ಮತ್ತು ಕಿರುಗಾವಲುಗಳಿಂದ ಸ್ಪರ್ಧಿಸಿದ್ದರು. ಮಧು ಮಾದೇಗೌಡರಿಗೆ ಅವಕಾಶ ಕಲ್ಪಿಸಲೆಂದೇ ತಮ್ಮಣ್ಣ ತಾವು ಶಾಸಕರಾಗಿದ್ದ ಕಿರುಗಾವಲು ಕ್ಷೇತ್ರವನ್ನು ಬಿಟ್ಟುಕೊಟ್ಟು ಮದ್ದೂರಿಗೆ ಬಂದಿದ್ದರು. ಅದು ಅಂದಿನ ಮುಖ್ಯಮಂತ್ರಿ ಎಸ್‌ಎಂ ಕೃಷ್ಣ ಮತ್ತು ಜಿ.ಮಾದೇಗೌಡರ ನಡುವೆ ನಡೆದಿದ್ದ ಡೀಲ್‌ನ ಪರಿಣಾಮ. ಮದ್ದೂರಿನಲ್ಲಿ ಸತತ ಎರಡನೆಯ ಬಾರಿಗೆ ಯಾರೂ ಗೆದ್ದಿಲ್ಲವೆಂಬ ನಂಬಿಕೆಯ ಜಾಡು ಹಿಡಿದ ಕೃಷ್ಣ ಬೆಂಗಳೂರಿನ ಚಾಮರಾಜಪೇಟೆಗೆ ದೌಡಾಯಿಸಿದ್ದರು. ತನ್ನ ಹಣದ ಥೈಲಿಯನ್ನು ಕೈಯಲ್ಲಿ ಹಿಡಿದೇ ಮದ್ದೂರಿಗೆ ಬಂದಿದ್ದ ತಮ್ಮಣ್ಣ ಗೆಲ್ಲಲು ದುಡ್ಡೊಂದೇ ಕಾರಣವಾಗಿರಲಿಲ್ಲ.

ತನ್ನ ಮಗಳನ್ನು ಸಾಕ್ಷಾತ್ ದೇವೇಗೌಡರ ಮಗನಿಗೇ ಧಾರೆಯೆರೆದಿದ್ದರ ಫಲವಾಗಿ ಬೀಗ ತಮ್ಮಣ್ಣನನ್ನು ಗೆಲ್ಲಿಸಲು ದೇವೇಗೌಡರು ಕುತಂತ್ರದ ರಾಜಕಾರಣ ನಡೆಸಿದ್ದರು. ಗೆಲ್ಲುವ ಕ್ಯಾಂಡಿಡೇಟ್ ಸಿದ್ದರಾಜುವಿಗೆ ಬದಲಾಗಿ ಜಿಪಂ ಮಾಜಿ ಅಧ್ಯಕ್ಷ ವಿವೇಕಾನಂದರಿಗೂ ಬಿಫಾರಂ ಕೊಟ್ಟುಬಿಟ್ಟಿದ್ದರು. ನಂತರ ಅಧಿಕೃತ ಅಭ್ಯರ್ಥಿ ಸಿದ್ದರಾಜು ಎಂದು ಘೋಷಿಸಿದರೂ, ಅವರಿಗೆ ಚಿಹ್ನೆಯೂ ತಪ್ಪಿತ್ತು; ವಿವೇಕಾನಂದ ಸಹ ವಾಪಸ್ ತೆಗೆಯಲಿಲ್ಲ. ಹೀಗಾಗಿ ತಮ್ಮಣ್ಣರಿಗೆ ಗೆಲುವು ಸ್ಮೂತ್ ರೈಡ್ ಆಗಿತ್ತು. ಆದರೆ ಕಿರುಗಾವಲಿನಲ್ಲಿ ಮಧು ಮಾದೇಗೌಡರಿಗೆ, ನಾಗೇಗೌಡರ ಸಾವಿನಿಂದಾಗಿ ನಾಗಮಣಿ ನಾಗೇಗೌಡರಿಗಿದ್ದ ಸಿಂಪಥಿಯ ವಿರುದ್ಧ ಈಜಲಾಗಿರಲಿಲ್ಲ. ಹಾಗಾಗಿ ಮಾದೇಗೌಡರಿಗೆ ತಮ್ಮ ಮಗನನ್ನು ಎಂಎಲ್‌ಎ ಮಾಡಲೇಬೇಕೆಂಬ ಸಾಯೋ ಕಾಲದ ಕೊನೆಯ ಆಸೆ ಈಡೇರಿರಲಿಲ್ಲ.

2008ಕ್ಕೆ ಕ್ಷೇತ್ರ ಪುನರ್ವಿಂಗಡಣೆಯ ಕಾರಣದಿಂದ ಕಿರುಗಾವಲು ಕ್ಷೇತ್ರ ರದ್ದಾಗಿ ಮದ್ದೂರು, ಮಳವಳ್ಳಿ ಕ್ಷೇತ್ರಗಳಲ್ಲಿ ಹಂಚಿಹೋಯಿತು. ಜೆಡಿಯುನಲ್ಲಿದ್ದ ನಾಗಮಣಿ ಸಕ್ರಿಯ ರಾಜಕಾರಣ ಮುಂದುವರೆಸುವ ಗೋಜಿಗೆ ಹೋಗದೆ ಮನೆಯಲ್ಲೇ ಕೂತರು. ಹಾಗಾಗಿ ಸಿದ್ದರಾಜುವಿಗೇ ಟಿಕೆಟ್ ಕೊಡದೆ ದೇವೇಗೌಡರಿಗೆ ಬೇರೆ ದಾರಿಯಿರಲಿಲ್ಲ. ಕಾಂಗ್ರೆಸ್‌ನಲ್ಲಿ ಮಾತ್ರ ತಮ್ಮ ಮಗನಿಗೇ ಟಿಕೆಟ್ ಕೊಡಬೇಕೆಂದು ಮಾದೇಗೌಡರು ಹಿಡಿದ ಪಟ್ಟಿಗೆ ಎಸ್‌ಎಂ ಕೃಷ್ಣರ ತಮ್ಮ ಎಸ್‌ಎಂ ಶಂಕರ್ ಮತ್ತು ಆತನ ಮಗ ಗುರುಚರಣ್ ಸಹ ಒತ್ತಾಸೆ ನೀಡಿದ್ದರು. ಆದರೆ ಎಲ್ಲಾ ಸಿಟಿಂಗ್ ಎಂಎಲ್‌ಎಗಳಿಗೆ ಟಿಕೆಟ್ ಕೊಡಲೇಬೇಕೆಂಬ ಹೈಕಮಾಂಡ್‌ನ ತೀರ್ಮಾನವನ್ನು ಎಸ್‌ಎಂ ಕೃಷ್ಣ ಸಹ ಬದಲಾಯಿಸುವ ಹಾಗೆ ಇರಲಿಲ್ಲ. ಹಾಗಾಗಿ ಕಾಂಗ್ರೆಸ್‌ನಿಂದ ತಮ್ಮಣ್ಣನಿಗೆ ಟಿಕೆಟ್ ಸಿಕ್ಕರೆ, ಗಾಂಧಿವಾದಿ ಮಾದೇಗೌಡ ತನ್ನ ಮಗನಿಗೆ ಬಿಜೆಪಿಯಿಂದ ಟಿಕೆಟ್ ತಂದರು. ಎಸ್‌ಎಂಕೆ ಫ್ಯಾಮಿಲಿ ಬಿಜೆಪಿ ಅಭ್ಯರ್ಥಿ ಮಧುಗೆ ಬಹಿರಂಗವಾಗಿಯೇ ಬೆಂಬಲ ನೀಡಿತು. ಇವರೆಲ್ಲರ ಅಬ್ಬರ ನೋಡಿದರೆ ಮಧು ಮಾದೇಗೌಡನೇ ಗೆದ್ದುಬಿಟ್ಟ ಎನ್ನುವ ವಾತಾವರಣವಿತ್ತು. ಆದರೆ ಮಂಡ್ಯದ ಮತದಾರರು ಸರಿಯಾದ ಆಯ್ಕೆಯನ್ನೇ ಮಾಡಿದ್ದರು. ಸಿದ್ದರಾಜುವನ್ನು ಗೆಲ್ಲಿಸಿ, ಬಿಜೆಪಿಯನ್ನು ಮೂರನೇ ಸ್ಥಾನಕ್ಕೆ ಸೀಮಿತಗೊಳಿಸಿದ್ದರು. ಸಿದ್ದರಾಜು ಹತ್ತಾರು ವರ್ಷಗಳಿಂದ ಮದ್ದೂರಿನಲ್ಲಿ ಕಟ್ಟಿಕೊಂಡು ಬಂದಿದ್ದ ಯುವಪಡೆ, ಎಲ್ಲಾ ಜಾ[...] ಧರ್ಮದವರ ವಿಶ್ವಾಸ ಗಳಿಸಿದ್ದದ್ದು, ಹಿಂದಿ[...] ಚುನಾವಣೆಯಲ್ಲಿ ಸೋತಿದ್ದ ಸಿಂಪಥಿ ಎಲ್ಲವೂ ಸೆ[...] ಆತನನ್ನು ಗೆಲ್ಲಿಸಿತ್ತು.



ರಾಮಲಿಂಗಯ್ಯ



ಮಧು

ಸಿದ್ದರಾಜುವಿಗಿದ್ದ ಅಪಾರ ಬೆಂಬಲ, ಎಸ್‌ಎ[...] ಫ್ಯಾಮಿಲಿಯ ವಿರೋಧ, ಮಧು ಮಾದೇಗೌಡ ಹಾಗ[...] ಬಿಜೆಪಿಯ ಅಬ್ಬರದ ನಡುವೆಯೂ ತಮ್ಮಣ್ಣ ಎರಡ[...] ಸ್ಥಾನಕ್ಕೆ ಬಂದಿದ್ದುದಕ್ಕೆ ಮುಖ್ಯ ಕಾರಣ ಆತ ಚೆಲ್ಲಾಡಿ[...] ಹಣ. ಇದೇ ಹಣದಿಂದಲೇ ತಮ್ಮಣ್ಣ ಮೂರು ವರ್ಷ[...] ಕಾಲ ಪ್ರತೀ ಹಳ್ಳಿಯಲ್ಲೂ ತನ್ನ ಬೆಂಬಲಿಗರನ[...] ಸಾಕಿಕೊಂಡೇ ಬಂದಿದ್ದರು. ಈಗಲೂ ಮದ್ದೂರಿನ[...] ಮನೆ ಮಾಡಿಕೊಂಡು ವಾಸಿಸುವ ತಮ್ಮಣ್ಣ ಕೆಐಎಡಿ[...] ಯಲ್ಲಿದ್ದಾಗ ಮಾಡಿಕೊಂಡ ಹಣ ಅಷ್ಟಿಷ್ಟಲ್ಲ. ಬಹು[...] ಹಾಲಿ ಕಾಂಗ್ರೆಸ್ ಅಧ್ಯಕ್ಷ ದೇಶಪಾಂಡೆಯನ್ನು ಬಿಟ್ಟ[...] ಕೆಐಎಡಿಬಿಯಲ್ಲಿ ಅತ್ಯಂತ ಹೆಚ್ಚು ಹಣ ಮಾಡಿಕೊಂ[...] ರುವುದು ತಮ್ಮಣ್ಣನೇ ಇರಬೇಕು.

ಈಗ ಹೇಗಾದರೂ ಸರಿ ಸಾಧ್ಯವಿರುವ ಎ[...] ಸೀಟುಗಳನ್ನು ಗೆಲ್ಲಲೇಬೇಕೆಂದು ಹೊರಟಿರು[...] ಬಿಜೆಪಿ ತಮ್ಮಣ್ಣನನ್ನೇ ಕ್ಯಾಂಡಿಡೇಟ್ ಮಾಡ[...] ಹೊರಟಿದೆ. ಸರ್ಕಾರವನ್ನು ಸುಭದ್ರ ಮಾ[...] ಕೊಳ್ಳಲು ಗೆದ್ದ ಮೇಲೆ ಶಾಸಕರನ್ನು ತಮ್ಮೆಡೆ[...] ಸೆಳೆದುಕೊಳ್ಳುವ ಬದಲು, ಗೆಲ್ಲುವ ಗಿರಾ[...] ಯನ್ನು ಚುನಾವಣೆಗೆ ಮೊದಲೇ ಸೆಳೆ[...] ಕೊಂಡು ಬಿಟ್ಟರೆ ಒಳ್ಳೆಯದು ಎಂಬುದ[...] ಅದರ ಆಲೋಚನೆ. ತಮ್ಮ ಪಕ್ಷ ಇತ[...] ಪಕ್ಷಗಳಿಗಿಂತ ಭಿನ್ನ, ತಮಗೆ ತತ್ವ ಸಿದ್ಧಾಂತಗಳಿ[...] ಎಂದು ಹೇಳುತ್ತಿದ್ದ ಬಿಜೆಪಿಯ ಎಲ[...] ಮಾನವೂ ಆಪರೇಷನ್ 'ಮಲ'ದಲ್ಲಿ ಮೂರ[...] ಕಾಸಿಗೆ ಹರಾಜಾಗಿರುವುದರಿಂದ, ಈಗ ಯಾ[...] ಅಡ್ಡಿಯೂ ಇಲ್ಲ.


ಆದರೆ ತನಗೇ ಟಿಕೆಟ್ ಬೇಕೆಂದು ಮಧ[...] ಮಾದೇಗೌಡ ಪಟ್ಟು ಹಿಡಿದಿದ್ದಾರೆ. ನಿಗಮ[...] ಮಂಡಳಿಗಳ ಅಧ್ಯಕ್ಷ ಸ್ಥಾನಕ್ಕೆ ಒಪ್ಪುತ್ತಿ[...] ಸೋತರೂ ಪರವಾಗಿಲ್ಲ, ತಾನೇ ಸ್ಪರ್ಧಿಸಿದ[...] ಮಾತ್ರ ಕ್ಷೇತ್ರ ಉಳಿಸಿಕೊಳ್ಳಬಹುದು[...] ಇಲ್ಲವಾದರೆ ಮದ್ದೂರನ್ನು ತಮ್ಮಣ್ಣನಿಗೆ ಬರೆದುಕೊಟ್ಟಂ[...] ಎಂಬುದು ಮಧುಗೆ ಗೊತ್ತಾಗಿದೆ. ಹಾಗಾ[...] ಮಾದೇಗೌಡರು ಪಟ್ಟು ಬಿಡುತ್ತಿಲ್ಲ. ಕೊನೆಗಳಿಗೆಯ[...]

▶▶▶

ಮಂಡ್ಯ ಬಿಜೆಪಿ ಮುಕ್ಕುತ್ತಿರುವ ಹಕ್ಕ-ಬುಕ್ಕರು

ಮಂಡ್ಯಾ ಜಿಲ್ಲಾ ಬಿಜೆಪಿಯೊಳಗಿನ ಮುಸುಕಿನ ಗುದ್ದಾಟಗಳು, ಕಾಲೆಳೆಯುವ ಕೆಲಸಗಳು ಅತ್ಯಂತ ಮನೋರಂಜಕವಾಗಿವೆ.

ಒಕ್ಕಲಿಗರ ಪ್ರಾಬಲ್ಯದ ಮಂಡ್ಯ ಜಿಲ್ಲೆಯಲ್ಲಿ ಬಿಜೆಪಿಯು ಯಡ್ಡಿಯ ಬಂಧು ನಾಗರಾಜಯ್ಯ ಎಂಬ ಲಿಂಗಾಯತನ ಕಂಟ್ರೋಲಿನಲ್ಲಿ ಸಿಕ್ಕು ನರಳುತ್ತಿದೆ. ಇದರಿಂದಾಗಿ ಪಕ್ಷದ ನಿಷ್ಠಾವಂತ ಕಾರ್ಯಕರ್ತರ ಅಸಹನೆ ಬೆಳೆಯುತ್ತಿದೆ. ಈ ಶರಣ ನಾಗರಾಜಯ್ಯನ ಜೊತೆ ಡಿ. ರಾಮಲಿಂಗಯ್ಯನೆಂಬ ಇನ್ನೊಬ್ಬ ನುಂಗಪ್ಪನೂ ಸೇರಿಕೊಂಡು ಸಿಕ್ಕಸಿಕ್ಕೆಡೆ ಕೈಹಾಕಿ ಹಣ ನುಂಗುತ್ತಿದ್ದಾರೆ. ರಾಮಲಿಂಗಯ್ಯ ಹೇಳಿಕೊಳ್ಳಲಿಕೆ ಜಿಲ್ಲಾ ಬಿಜೆಪಿ ಲೀಡರ್ ಅಂತಿದ್ದರೂ ಶರಣ ನಾಗರಾಜಯ್ಯನ ಕಪಿಮುಷ್ಟಿಯಲ್ಲಿ ಸಿಕ್ಕಿಬಿದ್ದಿದ್ದಾನೆ. ಯಡ್ಡಿಯ ಜಾತಿಪ್ರೇಮದಿಂದಾಗಿ ಮೈಸುಗರ್‌ನ ಅಧ್ಯಕ್ಷಗಾದಿ ಲಪಟಾಯಿಸಿರುವ ನಾಗರಾಜಯ್ಯ ಕಳೆದ ವಿಧಾನಸಭಾ ಎಲೆಕ್ಷನ್‌ನಲ್ಲಿ ಪಕ್ಷದ ಕ್ಯಾಂಡಿಡೇಟ್‌ಗಳಿಗೆ ಹರಿದು ಬಂದ ತಲಾ ಒಂದು ಕೋಟಿ ಹಣದ ಬಹುಭಾಗವನ್ನು ತಾನೇ ಜೇಬಿಗಿಳಿಸಿಕೊಂಡಿದ್ದ. ಜೊತೆಗೆ ಬಿ ಫಾರಂ ಹಂಚಿಕೆಯೂ ಇವನಿಂದಲೇ ಆಗಿತ್ತು. ಮಂಡ್ಯ ಟೌನಿನ ಅಭ್ಯರ್ಥಿ ವಿದ್ಯಾ ನಾಗೇಂದ್ರರಿಗೆ ಪಾರ್ಟಿ ಒಂದು ಕೋಟಿ ರೂ. ಕಳಿಸಿದರೆ ಈ ನಾಗರಾಜ ಮೂವತ್ತು ಲಕ್ಷ ಜೇಬಿಗಿಳಿಸಿ ಎಪ್ಪತ್ತು ಲಕ್ಷ ತಲುಪಿಸಿದ್ದ. ಅದೇರೀತಿ ಮಳವಳ್ಳಿಯ ಕಲ್ಲಳ್ಳಿ ಮಹದೇವಯ್ಯನಿಗೆ 50 ಲಕ್ಷ ನೀಡಿ ಇನ್ನೈವತ್ತು ನುಂಗಿದ್ದ. ಜಯರಾಮೇಗೌಡನಿಗೆ ಬರೀ 20 ಲಕ್ಷ ತಲುಪಿಸಿ ತಾನೇ ಎಂಬತ್ತು ಲಕ್ಷ ತಿಂದು ಹಾಕಿದ್ದ. ಮಜಾ ಅಂದರೆ ಕೆ.ಆರ್. ಪೇಟೆ ಅಭ್ಯರ್ಥಿ ಪ್ರಕಾಶ್‌ಗೆ ಮಾತ್ರ ಪಾರ್ಟಿ ನೀಡಿದ್ದ ಒಂದು ಕೋಟಿ ಹಣವನ್ನು ಪೂರ್ತಿಯಾಗಿ ತಲುಪಿಸಿದ್ದ.



ರಾಮಲಿಂಗಯ್ಯ


ಯಾಕೆ ಗೊತ್ತಾ?

ಅದು ಯಡ್ಡಿಯ ತವರೂರಾದ್ದರಿಂದ ಕನಿಷ್ಠ ಅಲ್ಲಾದರೂ ಪಾರ್ಟಿ ಅಭ್ಯರ್ಥಿ ಗೆಲ್ಲಲಿ ಎಂದು! ಹೀಗೆ ಎಲೆಕ್ಷನ್ ಹಣದಲ್ಲಿ ಹತ್ತಿರತ್ತಿರ ಎರಡುಕೋಟಿ ರೂ. ಲಪಟಾಯಿಸಿದ್ದ ನಾಗರಾಜಯ್ಯ ಪ್ರಚಾರಕ್ಕೆ ಮಾತ್ರ ಹೋಗಲಿಲ್ಲ. ಮಂಡ್ಯ ಕ್ಷೇತ್ರದಲ್ಲೇ 35 ಸಾವಿರ ಲಿಂಗಾಯತರ ಓಟುಗಳಿದ್ದವಾದರೂ ವಿದ್ಯಾ ನಾಗೇಂದ್ರ ಪರವಾಗಿ ಒಂದು ದಿನವೂ ಓಡಾಡಿರಲಿಲ್ಲ. ಅಂತವನು ಈಗಲೂ ಮಂಡ್ಯ ಬಿಜೆಪಿಯ ರಿಮೋಟ್ ಕಂಟ್ರೋಲರ್ ಆಗಿ ಬಂದುಕುಳಿತು ಬಿಟ್ಟಿದ್ದಾನೆ.

ಯಡ್ಡಿ ಮುಖ್ಯಮಂತ್ರಿಯಾದ ಮೇಲೆ ಒಂದು ಸಾರಿ ಈ ನಾಗರಾಜಯ್ಯನ ಮನೆಗೆ ಬಂದು ಹೋದ ಮೇಲೆ ಅವನ ಖದರ್ರೇ ಬದಲಾಗಿದೆ. ಯಡ್ಡಿ ತನಗೆ ಕ್ಲೋಸು ಎಂದು ಸರ್ಕಾರಿ ಅಧಿಕಾರಿಗಳನ್ನು ಬೆದರಿಸಿ ಹಫ್ತಾ ವಸೂಲಿಗಿಳಿದಿದ್ದಾನೆ. ಜಿಲ್ಲಾ ಪಂಚಾಯಿತಿ, ಪಿಡಬ್ಲ್ಯೂಡಿ, ನೀರಾವರಿ ಇಲಾಖೆ ಎಂಜಿನಿಯರ್‌ಗಳಿಂದ ಮಂತ್ಲಿ ವಸೂಲಿ ಶುರು ಮಾಡಿಕೊಂಡಿದ್ದಾನೆ.

ಇಷ್ಟು ಸಾಲದೆಂಬಂತೆ ಯಡ್ಡಿ ಪ್ರಭಾವ ಬಳಸಿಕೊಂಡು ಕೆಎಸ್‌ಎಫ್‌ಸಿಗೆ 41 ಲಕ್ಷದ ಉಂಡೆನಾಮ ತಿಕ್ಕಿರುವ ಘಟನೆಯೂ ಇತ್ತೀಚೆಗೆ ನಡೆದಿದೆ.

ಮಂಡ್ಯದ ಇಂಡವಾಳು ಗ್ರಾಮದಲ್ಲಿ ಯಾತರದ್ದೋ ಕಾರ್ಖಾನೆ ನಡೆಸಲು ಕೆಎಸ್‌ಎಫ್‌ಸಿನಿಂದ ಸಾಲ ಎತ್ತಿದ್ದ ನಾಗರಾಜಯ್ಯ ಅಸಲು ಬಡ್ಡಿ ಒಂದೂ ತೀರಿಸದೆ ಸಾಲದ ಮೊತ್ತ 41 ಲಕ್ಷಕ್ಕೆ ಬೆಳೆದು ನಿಂತಿತ್ತು. ಈಗ ಯಡ್ಡಿ ಮೂಲಕ ತನ್ನ ಕಾರ್ಖಾನೆ ರೋಗಗ್ರಸ್ತ ಉದ್ಯಮವಾಗಿದೆ ಎಂದು ಹೇಳಿಸಿ ಸಾಲವನ್ನು ಮನ್ನಾ ಮಾಡಿಸಿಕೊಂಡಿದ್ದಾನೆ. ಅಷ್ಟೇ ಅಲ್ಲ ಈಗ ಅದೇ ಜಾಗದಲ್ಲಿ ಮತ್ತೆ ಸಾಲ ಎತ್ತಿ ಇಟ್ಟಿಗೆ ಫ್ಯಾಕ್ಟರಿ ಮಾಡಿದ್ದಾನೆ.




ನಾಗರಾಜಪ್ಪ

ಬಿಜೆಪಿಯ ಕಬ್ಬು ಬೆಳೆಗಾರರ ಪ್ರಕೋಶವೆಂಬ ವಿಭಾಗದ ರಾಜ್ಯ ಅಧ್ಯಕ್ಷನಾಗಿರುವ ನಾಗರಾಜಯ್ಯ ಇತ್ತೀಚೆಗೆ ಕಬ್ಬು ಬೆಳೆಗಾರರ ಜಾಥಾ ಒಂದನ್ನು ಅರೆಂಜ್ ಮಾಡಿದ್ದನು. ಆರು ದಿನಗಳ ಜಾಥಾದಲ್ಲಿ ರೈತರು ಮಂಡ್ಯಾದಿಂದ ಬೆಂಗಳೂರಿಗೆ ಕಾಲ್ನಡಿಗೆಯಲ್ಲಿ ಬಂದಿದ್ದರು. ಆದರೆ ಲೀಡರ್ ನಾಗರಾಜಯ್ಯ ಜಾಥಾ ಉದ್ಘಾಟನೆ ದಿನ ಮಾತ್ರ ಕಾಣಿಸಿಕೊಂಡವನು ಕೊನೇದಿನ ಯಡ್ಡಿ ಮನೆಗೆ ಜಾಥಾ ಬಂದಾಗ ನೇರ ಅಲ್ಲಿಗೆ ಬಂದು ತಾನು ನಡೆದುಕೊಂಡುಬಂದಂತೆ ಪೋಸು ಕೊಟ್ಟಿದ್ದ.

ಹಾಲಿ ಅಧ್ಯಕ್ಷ ರಾಮಲಿಂಗಯ್ಯ ಒಕ್ಕಲಿಗನಾದರೂ ಈತನಿಗೆ ನಾಯಕತ್ವ ಗುಣ ಇಲ್ಲ. ಲಿಂಗಾಯತ ನಾಗರಾಜಯ್ಯನ ಚಮಚಾಗಿರಿ ಮಾಡುತ್ತಾ ಕೈಗೊಂಬೆಯಂತಾಗಿ ಹೋಗಿದ್ದಾನೆ. ಎಲೆಕ್ಷನ್ ಟೈಮಿನಲ್ಲಿ ಟಿಕೆಟ್ ಕೊಡಿಸುತ್ತೇನೆ ಅಂತ ಆಸೆ ತೋರಿಸಿ ಮೇಲುಕೋಟೆಯ ಶ್ರೀಕಂಠಯ್ಯನಿಂದ 20 ಲಕ್ಷ ನುಂಗಿದ್ದು ಹಾಗೂ ಮದ್ದೂರಿನ ಟಿಕೆಟ್ ಆಕಾಂಕ್ಷಿ ಲೇಡಿಯೊಬ್ಬಳನ್ನು ತಿಂದು ಮುಗಿಸಿದ್ದು ಇವೆರಡೇ ರಾಮಲಿಂಗಯ್ಯನ ಸಾಧನೆಗಳು.

ಮಂಡ್ಯದಲ್ಲಿ ನೆಲೆ ಕಂಡುಕೊಳ್ಳಲು ಶತಪ್ರಯತ್ನ ಮಾಡುತ್ತಿರುವ ಬಿಜೆಪಿಗಳು ಒಕ್ಕಲಿಗರನ್ನು ಮೂಲೆಗುಂಪು ಮಾಡಿ ಬರೀ ಲಿಂಗಾಯತರನ್ನು ಓಲೈಸುತ್ತಾ ಪಕ್ಷದ ಸಮಾಧಿ ತಾವೇ ತೋಡುತ್ತಿದ್ದಾರೆ. ಇವರ ಲಿಂಗಾಯತ ಜಾತಿ ಪ್ರೇಮ ಯಾವ ಮಟ್ಟಕ್ಕೆ ಹೋಗಿದೆಯೆಂದರೆ ತೋಂಟದಪ್ಪ ಎಂಬ ಜೆಡಿಎಸ್ ಪಾರ್ಟಿಯ ಲೋಕಲ್ ಲೀಡರ್ ಒಬ್ಬನಿಗೆ ಈಗ ಜಿಲ್ಲಾ ಸಹಕಾರಿ ಬ್ಯಾಂಕ್‌ನ ನಿರ್ದೇಶಕ ಹುದ್ದೆ ಕೊಡಿಸಿದ್ದಾರೆ.

ಆದರೆ ತೋಂಟದಪ್ಪ ಈಗಲೂ ಜೆಡಿಎಸ್ ಪಾರ್ಟಿ ಮೆಂಬರ್ ಆಗಿದ್ದಾನೆ. ಇದನ್ನೆಲ್ಲಾ ನೋಡುತ್ತಿದ್ದರೆ ಬಿಜೆಪಿಗೆ ಈಗ 'ಪಾರ್ಟಿ ಯಾವುದಾದರೇನು ಲಿಂಗಾಯತ ತಾನೇ ನೀನು, ಅಧಿಕಾರ ಕೊಡುವೆ ನಾನು' ಎಂಬ ಭಾವನೆ ಬೆಳೆಯುತ್ತಿರುವಂತೆ ಕಾಣುತ್ತಿದೆ. ■



ನರೇಂದ್ರ


ನರೇಂದ್ರಸ್ವಾಮಿ ಏನು ಮಾಡುತ್ತಾರೆ?

ಪಕ್ಷದ ಮಳವಳ್ಳಿಯಿಂದ ಪಕ್ಷೇತರನಾಗಿ ಗೆದ್ದು ಮಂತ್ರಿಯಾಗಿರುವ ನರೇಂದ್ರಸ್ವಾಮಿ ಹೇಳಿಕೇಳಿ ಸಿದ್ದರಾಮಯ್ಯ ಮತ್ತು ಡಿಕೆ ಶಿವಕುಮಾರ್ ಬೆಂಬಲದಿಂದಲೇ ಎಲೆಕ್ಷನ್ ಫೇಸ್ ಮಾಡಿ ಗೆದ್ದಿದ್ದು. ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದಾಗಲೂ ಇಳಿದು ಬಂದು ಅಲ್ಲೇ ಕೂತಿದ್ದ ಡಿಕೆಶಿಯ ಕಾಲಿಗೆ ನಮಸ್ಕರಿಸಿದ್ದರು. ಆದರೆ ಈಗ ಬಿಜೆಪಿ ಸರ್ಕಾರದಲ್ಲಿ ಸಚಿವ ಆಗಿರುವುದರಿಂದ ಈತನ ನಿಯತ್ತು ಯಾರಿಗೆ ಎಂಬ ಪ್ರಶ್ನೆ ಇದೆ. ತನಗೆ ಸಚಿವ ಸ್ಥಾನ ನೀಡಿದ್ದರೂ, ಈತ ಇನ್ನೂ ಪಕ್ಷೇತರ ಶಾಸಕನೇ ಹೊರತು, ಬಿಜೆಪಿ ಪಕ್ಷ ಸೇರಿಲ್ಲ. ಹಾಗೆಂದು ನರೇಂದ್ರಸ್ವಾಮಿಗ ...ಮದ್ದೂರಿನಲ್ಲಿ ಯಾವುದೇ ಬೇಸ್ ಇಲ್ಲ. ಒಂದಷ್ಟು ದಲಿತರ ಮತಗಳನ್ನು ತಿರುಗಿಸಬಹುದು ಮತ್ತು ಸಚಿವನ ಗೆಟಪ್ಪಿನಲ್ಲಿ ಬಂದು ಪ್ರಚಾರ ...ಗಳಲ್ಲಿ ಭಾಗವಹಿಸಬಹುದು. ಆದರೆ ಯಾರ ಪರ ಎಂಬುದು ಮಾತ್ರ ಇನ್ನೂ ಗೊತ್ತಾಗಿಲ್ಲ.

▶▶▶

...ಕೆಟ್ ಸಿಗದಿದ್ದರೆ, ಮಧು ಮಾದೇಗೌಡ ಕಾಂಗ್ರೆಸ್ ...ಂಡಿಡೇಟ್ ಆದರೂ ಆಶ್ಚರ್ಯವಿಲ್ಲ ಎನ್ನುತ್ತಿವೆ ಕೆಲವು ...ಮೂಲಗಳು. ಆದರೆ ತಮ್ಮಣ್ಣನನ್ನು ಬಿಡಲು ಕಾಂಗ್ರೆಸ್ ...ಸಿದ್ಧವಿಲ್ಲ. ಈಗಾಗಲೇ ಹೊಸ ಕಾರ್ಯಾಧ್ಯಕ್ಷ ...ಕೆ.ಶಿವಕುಮಾರ್ ತಮ್ಮಣ್ಣನನ್ನು ಎರಡು ಬಾರಿ ...ಮಾತನಾಡಿಸಿದ್ದಾರೆ. ತಾನು ಒಕ್ಕಲಿಗರ ನಾಯಕನಾಗಬೇಕಾ...ದರೂ ಈ ಸೀಟನ್ನು ಗೆಲ್ಲುವುದು ಅಗತ್ಯ ಎಂಬುದು ...ಕೆಶಿ ಹವಣಿಕೆ. ಆದರೆ ಉಪಚುನಾವಣೆಯಲ್ಲಿ ...ಂಗ್ರೆಸ್-ಜೆಡಿಎಸ್ ಹೊಂದಾಣಿಕೆ ಮಾಡಿಕೊಂಡರೆ, ಈ ...ಕ್ಷೇತ್ರ ಗ್ಯಾರಂಟಿಯಾಗಿ ಜೆಡಿಎಸ್ ಪಾಲಾಗುತ್ತದಾದ್ದರಿಂದ ...ತಮ್ಮಣ್ಣ ಬಿಜೆಪಿಯ ಕಡೆಗೇ ಮುಖ ಮಾಡಿ ...ಹೊರಟಿದ್ದಾರೆನ್ನಲಾಗುತ್ತಿದೆ. ಕಾಂಗ್ರೆಸ್‌ನಿಂದ ಗುರುಚರಣ್ ...ಹ ಟಿಕೆಟ್‌ಗಾಗಿ ಪ್ರಯತ್ನ ಮಾಡುತ್ತಿದ್ದಾರೆ.


ತಮ್ಮಣ್ಣ



ನಾಗರಾಜಪ್ಪ

ಜೆಡಿಎಸ್‌ನಲ್ಲಿ ಇದುವರೆಗೂ ಸಿದ್ದರಾಜುವಿಗೆ ದುಡಿದ ...ಚನ್ನಲಗೆರೆ ರಾಮಕೃಷ್ಣ ತನಗೇ ಟಿಕೆಟ್ ಬೇಕೆಂದು ...ಪ್ರಯತ್ನ ಹಾಕುತ್ತಿದ್ದಾರೆ. ಆದರೆ ಸಿಂಪಥಿಯ ಲಾಭ ದಕ್ಕುವುದು ...ಇದ್ದರೂ ಕಲ್ಪನಾ ಸಿದ್ದರಾಜುವಿಗೇ ಆದ್ದರಿಂದ, ಜೆಡಿಎಸ್ ...ಹೈಕಮಾಂಡ್‌ನ ಒಲವು ಅವರಿಗೇ ಇದೆ. ಇನ್ನೇನು ಅಧಿಕೃತ ಘೋಷಣೆಯೇ ಆಗಿಬಿಟ್ಟಿತು ಎನ್ನುವಂತಿದ್ದರೂ, ಕಾರ್ಯಕರ್ತರನ್ನು ಕೇಳಿ ತೀರ್ಮಾನಿಸುತ್ತೇವೆಂದು ಕುಮಾರಸ್ವಾಮಿ ಹೇಳುತ್ತಿರುವುದರ ಹಿಂದೆ ರಾಮಕೃಷ್ಣರನ್ನು ಗೆದ್ದುಕೊಳ್ಳುವ ತಂತ್ರವಿದೆ. ಕಲ್ಪನಾ ಆಗಲೇ ಮಗನನ್ನು ಹಿಂದಿಕ್ಕಿಕೊಂಡು ಹಳ್ಳಿ ಸುತ್ತಲು ಆರಂಭಿಸಿದ್ದಾರೆ.

ಬಿಜೆಪಿ ಈಗಾಗಲೇ ನೂರು ದಿನಗಳ ಆಡಳಿತದಲ್ಲಿ ಹೆಸರು ಕೆಡಿಸಿಕೊಂಡಿರುವುದು, ಬಹಳ ಬೇಗನೆ ಆಡಳಿತ ವಿರೋಧಿ ಅಲೆ ಕಾಣುತ್ತಿರುವುದು ಅದರ ಮೈನಸ್ ಪಾಯಿಂಟ್‌ಗಳಾಗಿವೆ. ಲಿಂಗಾಯತರ ಪಕ್ಷ ಎಂಬ ಹಣೆಪಟ್ಟಿಯಂತೂ ಮಂಡ್ಯದಲ್ಲಿ ಅದಕ್ಕೆ ತೊಂದರೆ ಕೊಡಲಿದೆ. ಈಗಾಗಲೇ ಆ ಹಣೆಪಟ್ಟಿ ಇದ್ದರೂ, ಮೈಷುಗರ್ ಕಾರ್ಖಾನೆಗೆ ನೇಮಿಸುವಾಗ ಮತ್ತೆ ಲಿಂಗವಂತ ನಾಗರಾಜಪ್ಪನಿಗೇ ಮಣೆ ಹಾಕುವ ಅಗತ್ಯ ಏನಿತ್ತು ಎಂದು ಬಿಜೆಪಿಯಲ್ಲಿರುವ ಒಕ್ಕಲಿಗರೂ ಕೇಳುತ್ತಿದ್ದಾರೆ.

ಅಂತಿಮವಾಗಿ ಕಾಂಗ್ರೆಸ್‌ನಿಂದ ತಮ್ಮಣ್ಣ, ಬಿಜೆಪಿಯಿಂದ ಮಧು ಮಾದೇಗೌಡ ಆದರೂ, ಅಥವಾ ತಮ್ಮಣ್ಣನೇ ಬಿಜೆಪಿಯಿಂದ ನಿಂತರೂ ಮದ್ದೂರು ಕ್ಷೇತ್ರ ಜೆಡಿಎಸ್‌ನ ತೆಕ್ಕೆಯಲ್ಲೇ ಇರುವುದು ಗ್ಯಾರಂಟಿಯಾಗಿದೆ. ಇದು ಸದ್ಯದ ಪರಿಸ್ಥಿತಿ.


■ ವರದಿಗಾರ



ಇಕ್ಕಟ್ಟಿನಲ್ಲಿ ಎಸ್‌ಎಂ ಕೃಷ್ಣ

ಮದ್ದೂರು ಕ್ಷೇತ್ರದ ಮೇಲೆ ಯಾವತ್ತೂ ಎಸ್‌ಎಂ ಕೃಷ್ಣರಿಗೆ ಅಂತಹ ಬಿಗಿ ಪಟ್ಟು ಇದ್ದಿದ್ದಿಲ್ಲ. ಆದರೆ ಸ್ವಂತ ಕ್ಷೇತ್ರವೆಂಬ ಪಟ್ಟಿಯಿರುವುದರಿಂದ ಇಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಿಕೊಂಡು ಬರುವ ಹೊಣೆ ಮಾತ್ರ ಇದ್ದೇ ಇದೆ. ತನ್ನ ಶಿಷ್ಯ ಡಿಕೆಶಿ ರಾಜ್ಯ ಕಾಂಗ್ರೆಸ್‌ನ ಕಾರ್ಯಾಧ್ಯಕ್ಷನಾಗಿರುವುದರಿಂದಲೂ ಇದು ಅಗತ್ಯವಾಗಿದೆ. ಈ ಹಿಂದೆ ತಾನೇ ಮುಂದೆ ನಿಂತು ತಮ್ಮಣ್ಣನಿಗೆ ಟಿಕೆಟ್ ಕೊಡಿಸಿದ್ದರು. ಆದರೆ ಈಗ ತಮ್ಮನ ಮಗ ಗುರುಚರಣ್‌ಗೆ ಟಿಕೆಟ್ ಕೇಳುತ್ತಿದ್ದಾರೆ. ಕಳೆದ ಚುನಾವಣೆಯಲ್ಲಿ ಗುರುಚರಣ್ ನೇರವಾಗಿ ತಮ್ಮಣ್ಣನ ವಿರುದ್ಧ ಬಿಜೆಪಿಗೆ ಸಪೋರ್ಟ್ ಮಾಡಿದ್ದರು. ಆತನ ಭವಿಷ್ಯವೂ ಕೃಷ್ಣರ ಕೈಯಲ್ಲಿಯೇ ಇದ್ದು, ಅಂತಿಮವಾಗಿ ತಕ್ಕಡಿ ಯಾವ ಕಡೆ ವಾಲುತ್ತದೋ ನೋಡಬೇಕು.

...ಅಂಕೋಲ: ಕಾಗೇರಿಯೂ ಒಂದು ಕೊಲೆ ಮಾಡಿದ!


...ಗೇರಿ

ಹೌದು, ಇದನ್ನು ಹೀಗನ್ನದೇ ಬೇರೆ ದಾರಿಯೇ ಇಲ್ಲ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾಗಿರುವ ವಿಶ್ವೇಶ್ವರ ಹೆಗಡೆ ಕಾಗೇರಿಯ ಧನದಾಹ ಒಂದು ಅಮಾಯಕ ಹೆಣ್ಣು ಮಗಳನ್ನು ಬಲಿತೆಗೆದುಕೊಂಡಿದೆ.

ಆಕೆಯ ಹೆಸರು ವನಿತಾ ಶೇಡಗೇರಿ. 28ರ ಹರೆಯದ ಯುವತಿ. ಮೂಲತಃ ದಲಿತ ಕುಟುಂಬದಿಂದ ಬಂದಿದ್ದ ಈಕೆ ನಗರದ ಪೌರ ಕಾರ್ಮಿಕರು ವಾಸಿಸುವ ಕೊಳಚೆ ಪ್ರದೇಶದಲ್ಲಿ ...ಅಕ್ಕನೊಂದಿಗೆ ಕಿತ್ತು ತಿನ್ನುವ ಬಡತನದಲ್ಲಿ ಬದುಕು ಸಾಗಿಸಿದ್ದಳು. ...ವರೂ ಬದುಕನ್ನು ಅದಮ್ಯವಾಗಿ ಪ್ರೀತಿಸುತ್ತಿದ್ದಳು. ಕೈಗೆ ಒಂದು ...ಸ ಅಂತ ಸಿಕ್ಕರೆ ಹೇಗೋ ಬದುಕಿನ ಬಂಡಿಯನ್ನು ಸಾಗಿಸಬಹುದು ...ದು ಭವಿಷ್ಯದ ಬಗ್ಗೆ ಭರವಸೆ ಇಟ್ಟುಕೊಂಡಿದ್ದಳು. ಆಕೆ ದೊಡ್ಡ ...ದ್ದ ಡಿಗ್ರಿ ಪಡೆದುಕೊಂಡಿರದಿದ್ದರೂ ಪರವಾಗಿಲ್ಲ, ಒಬ್ಬ ಉತ್ತಮ ...ಅಂಗನವಾಡಿ ಶಿಕ್ಷಕಿಯಾಗುವ ಎಲ್ಲಾ ಅರ್ಹತೆಯನ್ನೂ ಹೊಂದಿದ್ದಳು. ...ದೇ ಆಸೆಯಿಂದ ಅಂಗನವಾಡಿ ಶಿಕ್ಷಕಿಯಾಗುವುದಕ್ಕಾಗಿ ಅರ್ಜಿಯನ್ನೂ ...ಸಲ್ಲಿಸಿದ್ದಳು.

2006ರಲ್ಲಿ ಅಂಗನವಾಡಿ ಕಾರ್ಯಕರ್ತರ ನೇಮಕಾತಿಯಾಯಿತು. ...ಪ್ರಕ್ರಿಯೆಗೆ ಅಂದಿನ ಎಮ್ಮೆಲ್ಲೆಯಾಗಿದ್ದ ಮತ್ತು ಇಂದು ಪ್ರಾಥಮಿಕ ...ಮತ್ತು ಪ್ರೌಢ ಶಿಕ್ಷಣ ಸಚಿವನಾಗಿರುವ ವಿಶ್ವೇಶ್ವರ ಹೆಗಡೆ ಕಾಗೇರಿಯೇ ...ಅಧಿಕೃತ ಅಧ್ಯಕ್ಷನಾಗಿದ್ದ. 2006ರ ಅಕ್ಟೋಬರ್ 16 ರಂದು ...ಅಂಗನವಾಡಿ ಕಾರ್ಯಕರ್ತರ ನೇಮಕಾತಿಗಾಗಿ ಸಂದರ್ಶನ ...ನಡೆಸಲಾಯಿತು. ಇದರಲ್ಲಿ ಕಾಗೇರಿಯೊಂದಿಗೆ ಧನದಾಹಿ ಬಿಜೆಪಿ ...ಮುಖಂಡರ ಹಿಂಡೇ ಇತ್ತು. ಸರ್ಕಾರವೇ ನಿಗದಿಗೊಳಿಸಿದ ಎಲ್ಲಾ ...ಅರ್ಹತೆಗಳನ್ನು ಹೊಂದಿರುವ ವನಿತಾ ಶೆಡಗೇರಿಯಂಥವರನ್ನು ಇವರು ...ಪರಿಗಣಿಸಲೇ ಇಲ್ಲ. ಯಾರು ಒಂದು ಲಕ್ಷ ರೂ.ಗಳನ್ನು ಇವರ ...ಜೇಬಿಗೆ ಹಾಕಲು ಸಿದ್ಧರಿದ್ದರೋ ಅವರನ್ನು ಮಾತ್ರ ಆಯ್ಕೆ ಮಾಡಿಕೊಳ್ಳ...ಲಾಯಿತು. ಮೊದಲೇ ಬಡತನದ ಬೇಗುದಿಯಲ್ಲಿ ಬೇಯುತ್ತಿದ್ದ ...ವನಿತಾ ಶೆಡಗೇರಿಯ ಹತ್ತಿರ ಅಷ್ಟೊಂದು ದುಡ್ಡಿರಲಿಲ್ಲ. ಆಕೆ ನೇರವಾಗಿ ...ಕಾಗೇರಿಯ ಕಾಲಿಗೆ ಬಿದ್ದು ತನ್ನ ಬಡತನವನ್ನೂ, ತನ್ನ ಅರ್ಹತೆಯನ್ನೂ ...ವಿವರಿಸಿ ತನ್ನನ್ನು ಕಾನೂನುಬದ್ಧವಾಗಿಯೇ ಆಯ್ಕೆ ಮಾಡುವಂತೆ ...ಅಂಗಲಾಚಿ ಗೋಗರೆದಳು. ಆದರೆ, ಇದ್ಯಾವುದಕ್ಕೂ ಕಾಗೇರಿಯ ಕಲ್ಲಿನ ಹೃದಯ ಕರಗಲೇ ಇಲ್ಲ. ಯಾರ್ಯಾರು ತಲಾ ಒಂದೊಂದು ಲಕ್ಷ ಚೆಲ್ಲಿದರೋ ಅಂಥ 32 ಜನರನ್ನು ಕಾಗೇರಿಯ ಹಿಂಬಾಲಕ ಪಡೆ ಆಯ್ಕೆ ಮಾಡಿತು. ಸರ್ಕಾರದ ನೀತಿ, ನಿಯಮ, ನಿರ್ದೇಶನಗಳ ಪ್ರಕಾರ ಆಯ್ಕೆಯಲ್ಲಿ ದಲಿತರಿಗೆ, ಹಿಂದುಳಿದ ವರ್ಗಗಳಿಗೆ ಮತ್ತು ಆರ್ಥಿಕವಾಗಿ ದುರ್ಬಲರಾದವರಿಗೆ ಈ ಸ್ಥಾನಗಳನ್ನು ಕೊಡಬೇಕು. ಆದರೆ, ಇವುಗಳನ್ನೆಲ್ಲಾ ಗಾಳಿಗೆ ತೂರಿದ ಕಾಗೇರಿ ಅಂಡ್ ಗ್ಯಾಂಗ್ ಇಲ್ಲಿನ ಪಟ್ಟಣ ಪಂಚಾಯತಿ ವ್ಯಾಪ್ತಿಯ ಯಾವೊಂದು ಕೇಂದ್ರಕ್ಕೂ ಒಬ್ಬಳೇ ಒಬ್ಬ ಪರಿಶಿಷ್ಟ ಜಾತಿಯ ಕಾರ್ಯಕರ್ತೆಯನ್ನು ಆಯ್ಕೆ ಮಾಡಲಿಲ್ಲ. ಆಯ್ಕೆಯಲ್ಲಿ ಕಾಗೇರಿ ನಡೆಸಿದ ಅನ್ಯಾಯದ ವಿರುದ್ಧ ವನಿತಾಳಂಥ ಅರ್ಹ ಅಭ್ಯರ್ಥಿಗಳೆಲ್ಲಾ ಸೇರಿಕೊಂಡು ಪ್ರತಿಭಟನೆ ನಡೆಸಿದರು. ಕೆಲವರು ನ್ಯಾಯಾಲಯದ ಮೆಟ್ಟಿಲೇರಿದರು. ಕೊನೆಗೆ ರಾಜ್ಯದ ಉಚ್ಚ ನ್ಯಾಯಾಲಯವೇ ತಡೆಯಾಜ್ಞೆ ನೀಡಿ, ಎಲ್ಲಾ 32 ಸ್ಥಾನಗಳಿಗೂ ಮರುಸಂದರ್ಶನ ನಡೆಸಬೇಕೆಂದು ಆದೇಶ ನೀಡಿದೆ. ಇದಕ್ಕಾಗಿ ಆರು ತಿಂಗಳ ಗಡುವು ಕೂಡ ನೀಡಿದೆ. ಆದರೂ ಯಾವುದೇ ಮರುಸಂದರ್ಶನ ನಡೆದಿಲ್ಲ.

ವನಿತಾಳಿಗೆ ಇದರಿಂದ ತೀರಾ ಜಿಗುಪ್ಸೆಯುಂಟಾಯಿತು. ಭ್ರಷ್ಟಾಚಾರವೇ ತಾಂಡವವಾಡುತ್ತಿರುವ, ನೋವಿಗೆ ಮಿಡಿಯದ ಈ ಕ್ರೂರ ಸಮಾಜದಲ್ಲಿ ಬದುಕುವುದೇ ದುಸ್ತರವಾಗಿ ಕಂಡಿತು. ತನಗಾದ ಅನ್ಯಾಯ ಅವಳನ್ನು ಮತ್ತಷ್ಟು ಖಿನ್ನತೆಗೆ ದೂಡಿತು. ಈ ನಡುವೆ ಆಕೆಯ ಆರೋಗ್ಯವೂ ಕೈಕೊಟ್ಟು ಹಾಸಿಗೆ ಹಿಡಿದಳು. ಒಂದೆಡೆ ಅನ್ಯಾಯವಾಗಿ ಕೈತಪ್ಪಿದ ಕೆಲಸ ಆಕೆಯನ್ನು ಕಾಡುತ್ತಿದ್ದರೆ, ಇನ್ನೊಂದೆಡೆ ಆರೋಗ್ಯದ ಸಮಸ್ಯೆ ಅವಳನ್ನು ಜರ್ಜರಿತಳನ್ನಾಗಿ ಮಾಡಿತು. ಜೊತೆಗೆ, ಕಿತ್ತು ತಿನ್ನುವ ಬಡತನದಿಂದಾಗಿ ಆಕೆಯ ಚಿಕಿತ್ಸೆಗೂ ಹಣವಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಮತ್ತಷ್ಟು ಖಿನ್ನಳಾಗಿ ಈಗ ಆತ್ಮಹತ್ಯೆಯೊಂದೇ ತನಗುಳಿದಿರುವ ದಾರಿ ಎಂದು ತನ್ನ ಡೈರಿಯಲ್ಲಿ ಬರೆದಿಟ್ಟು ಸಾವಿಗೆ ಶರಣಾಗಿದ್ದಾಳೆ. ವಾಸ್ತವದಲ್ಲಿ ಇದು ಆತ್ಮಹತ್ಯೆಯಲ್ಲ, ಕಾಗೇರಿ ಮಾಡಿದ ಕೊಲೆ ಎಂದರೇನೇ ಸೂಕ್ತವಾಗುತ್ತದೆ.


ವನಿತಾ ಶೇಡಗೇರಿ

■ ರಮೇಶ್ ಅಂಕೋಲ


ಅಕ್ಕಿ

ವಿಧಾನ ಪರಿಷತ್ ಚುನಾವಣೆ: ಮೂಲ ಮತ್ತು ವಲಸಿಗರ ಹಗ್ಗ ಜಗ್ಗಾಟ!

ಬಸವರಾಜ್ ಬೊಮ್ಮಾಯಿಯ ರಾಜೀನಾಮೆಯಿಂದ ಖಾಲಿಯಾದ ವಿಧಾನ ಪರಿಷತ್ ಸ್ಥಾನಕ್ಕೆ ಇದೇ ತಿಂಗಳು 31ರಂದು ಉಪಚುನಾವಣೆ ನಡೆಯಲಿದೆ. ಆಯ್ಕೆಯಾಗುವ ಸದಸ್ಯರ ಅಧಿಕಾರಾವಧಿ ಕೇವಲ ಒಂದು ವರ್ಷ ಮತ್ತು ಎರಡು ತಿಂಗಳು ಮಾತ್ರ ಆಗಿದ್ದರೂ ಈ ಸ್ಥಾನಕ್ಕಾಗಿ ಆಡಳಿತಾರೂಢ ಬಿಜೆಪಿಯಲ್ಲಿ ಭಾರಿ ಪೈಪೋಟಿ ನಡೆದಿದೆ.


ನಾಗರಾಜ್

ಈ ಹಿಂದೆ ವಿಧಾನ ಪರಿಷತ್ ಚುನಾವಣೆಯಲ್ಲಿ ಒಂದು ಭಾಗದಿಂದ ಎಂ.ಎಂ. ಹಿಂಡಸಗೇರಿ ಆಯ್ಕೆಯಾಗುತ್ತಿದ್ದರೆ ಇನ್ನೊಂದು ಭಾಗದಿಂದ ಬಸವರಾಜ್ ಬೊಮ್ಮಾಯಿ ಆಯ್ಕೆಯಾಗುತ್ತಿದ್ದರು. ಮೇಲ್ನೋಟಕ್ಕೆ ಇದು ಬೇರೆ ಬೇರೆ ಪಕ್ಷಗಳ ನಡುವಿನ ಜಿದ್ದಾಜಿದ್ದಿಯಂತೆ ಕಾಣುತ್ತಿದ್ದರೂ ಹಾವೇರಿ ಪ್ಯಾಟಿ ಲೆಕ್ಕದಲ್ಲಿ ಅದು ಮಿಲಾಪಿ ಕುಸ್ತಿಯಾಗಿರುತ್ತಿತ್ತೇ ಹೊರತು ಚುನಾವಣೆ ಎನ್ನಿಸಿಕೊಳ್ಳುತ್ತಿರಲಿಲ್ಲ. ಆದರೆ, ಇಂದು ಜೆಡಿಎಸ್ ತೊರೆದು ಬಿಜೆಪಿ ತೆಕ್ಕೆಗೆ ಜಾರಿ, ಈಗ ಮಂತ್ರಿಯಾಗಿರುವ ಬಸವರಾಜ್ ಬೊಮ್ಮಾಯಿಯ ಕಾರಣಕ್ಕೆ ಈ ಚುನಾವಣೆ ಕಾಂಗ್ರೆಸ್ ಪಾಲಿಗೆ ಕಬ್ಬಿಣದ ಕಡಲೆಯಾಗುವುದಂತೂ ಸತ್ಯ.


ಶ್ರೀನಿವಾಸ ಮಾನೆ


ಕಳೆದ ವಿಧಾನಸಭಾ ಚುನಾವಣೆಯಲ್ಲಿ ಧಾರವಾಡ, ಹಾವೇರಿ ಮತ್ತು ಗದಗ ಜಿಲ್ಲೆಯ ಹದಿನೇಳು ಸ್ಥಾನಗಳ ಪೈಕಿ ಹದಿನೈದನ್ನು ಬಿಜೆಪಿ ತನ್ನ ಬಗಲಿಗೆ ಹಾಕಿಕೊಂಡಿದೆ. ನಂತರದ ದಿನಗಳಲ್ಲಿ ವಿಧಾನ ಪರಿಷತ್‌ನ ಪಶ್ಚಿಮ ಪದವೀಧರ ಕ್ಷೇತ್ರಕ್ಕೆ ಮೋಹನ ಲಿಂಬಿಕಾಯಿ ಎಂಬ ರಾಜಕೀಯದ ಹಸುಳೆಯನ್ನು ನಿಲ್ಲಿಸಿ ಸೋಲಿಲ್ಲದ ಸರದಾರನೆಂದೇ ಖ್ಯಾತಿ ಹೊಂದಿದ್ದ ಹುಲಕೋಟಿಯ ಹುಲಿ ಎಚ್ಕೆ ಪಾಟೀಲರಿಗೆ ಸೋಲುಣಿಸಿದೆ.


ಅನಿಲ್ ಪಾಟೀಲ್

ಪ್ರಹ್ಲಾದ್ ಜೋಶಿ ಎಂಬ ಬಿಜೆಪಿ ಎಂಪಿ ಈ ಹಿಂದೆ ಯಡ್ಡಿಯೊಂದಿಗಿದ್ದ ತನ್ನ ವೈರತ್ವವನ್ನು ಕೈಬಿಟ್ಟು ಸ್ನೇಹಹಸ್ತ ಚಾಚುವ ಮೂಲಕ ತನ್ನ ಸ್ಥಾನವನ್ನು ಮತ್ತಷ್ಟು ಭದ್ರಪಡಿಸಿಕೊಂಡಿದ್ದಾರೆ. ಅದೂ ಅಲ್ಲದೇ, ಜಗದೀಶ್ ಶೆಟ್ಟರ್‌ಗೆ ವಿಧಾನಸಭಾಧ್ಯಕ್ಷನನ್ನಾಗಿ ಮಾಡಿದ ಮೇಲೆ ಈ ಭಾಗದಲ್ಲಿ ಯಡ್ಡಿ-ಅನಂತೂ ಬಣಗಳ ಕಿತ್ತಾಟ ಸ್ವಲ್ಪ ಕಡಿಮೆಯಾಗಿದೆ. ಇದು ವಾಸ್ತವದಲ್ಲಿ ಬಿಜೆಪಿಗೆ ಅನುಕೂಲ ಮಾಡಿಕೊಡಲಿದೆ. ಮಂಜುನಾಥ್ ಕುನ್ನೂರು ಎಂಬ ಬಿಜೆಪಿ ಎಂಪಿ ಮಾನಸಿಕವಾಗಿ ಕಾಂಗ್ರೆಸ್ ಜೊತೆಗಿರುವುದು ಕಾಂಗ್ರೆಸ್ಸಿಗೆ ಒಂದಿಷ್ಟು ಅನುಕೂಲ ಮಾಡಿಕೊಡಬಹುದಷ್ಟೆ.



ಇನ್ನೊಂದೆಡೆಗೆ, ಜಿಲ್ಲಾ ಉಸ್ತುವಾರಿಯನ್ನು ಬೇರೆ ಜಿಲ್ಲೆಯವರಿಗೆ ಕೊಟ್ಟಿರುವುದು, ಜಿಲ್ಲೆಯವರಾದ ಬಸವರಾಜ್ ಬೊಮ್ಮಾಯಿಯನ್ನು ಬೇರೆ ಜಿಲ್ಲೆಗೆ ವರ್ಗಾಯಿಸಿರುವುದು, ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದು ನಾಲ್ಕು ತಿಂಗಳು ಕಳೆದಿದ್ದರೂ ನಿಗಮ-ಮಂಡಳಿಗಳ ಅಧ್ಯಕ್ಷರನ್ನು ನೇಮಿಸದಿರುವುದು, ಚುನಾವಣೆಯಲ್ಲಿ ಸ್ಥಾನ ತ್ಯಾಗ ಮಾಡಿದ ಎಂ.ಎಸ್.ಅಕ್ಕಿ, ಮಾಜಿ ಶಾಸಕರಾದ ಅಶೋಕ ಕಾಟವೆ, ರಾಜಶೇಖರ್ ಸಿಂಧೂರ, ಶಿವರಾಜ್ ಸಜ್ಜನ, ಕುಂದಗೋಳದ ಟಿಕೆಟ್ ವಂಚಿತ ಎಂ.ಆರ್.ಪಾಟೀಲ್, ಕಲಘಟಗಿಯಲ್ಲಿ ಸೋಲುಂಡ ಸಿ.ಎಂ.ನಿಂಬಣ್ಣನವರ, ಹಾವೇರಿಯ ಸೋಮಣ್ಣ ಬೇವಿನಮರದ, ಜಗದೀಶ್ ಶೆಟ್ಟರ್ ಅವರ ಸೋದರ ಪ್ರದೀಪ್ ಶೆಟ್ಟರ್, ರಮೇಶ್ ಭೂಷಣ, ಕೋ-ಜಾ ಸರ್ಕಾರದಲ್ಲಿ ಅಲ್ಪಕಾಲದ ಹೂಡಾ ಅಧ್ಯಕ್ಷಗಿರಿ ಅನುಭವಿಸಿದ ಲಿಂಗರಾಜ ಪಾಟೀಲ್ - ಹೀಗೆ ದೊಡ್ಡ ಹಿಂಡೇ ಟಿಕೆಟ್‌ಗಾಗಿ ಕ್ಯೂ ನಿಂತಿದೆ.


ಲಿಂಗರಾಜ್

ಇವರಲ್ಲಿ ಯಾರಿಗೆ ಟಿಕೆಟ್ ಕೊಡಬೇಕೆಂಬುದೇ ಯಡ್ಡಿಗೆ ದೊಡ್ಡ ತಲೆನೋವಾಗಿದೆ. ಮೊನ್ನೆ ಅವರು ಹುಬ್ಬಳ್ಳಿಗೆ ಬಂದಾಗ ಇಪ್ಪುದ್ದದ ಆಕಾಂಕ್ಷಿಗಳ ಪಟ್ಟಿ ನೋಡಿದ ಮೇಲಂತೂ ಒಬ್ಬರಿಗೆ ಕೊಟ್ಟರೆ ಮತ್ತೊಬ್ಬರನ್ನು ಎದುರು ಹಾಕಿಕೊಳ್ಳಬೇಕಾಗುತ್ತದೆ ಎಂಬುದು ಅರ್ಥವಾದಂತಿದೆ. ಹೀಗಾಗಿ ಆ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಟಿಕೆಟ್ ಹಂಚುವ ಕೆಲಸವನ್ನು ಬಸವರಾಜ್ ಬೊಮ್ಮಾಯಿ, ಸಿ.ಎಂ.ಉದಾಸಿ, ಜಗದೀಶ್ ಶೆಟ್ಟರ್, ಸಿ.ಸಿ.ಪಾಟೀಲ್, ಪ್ರಹ್ಲಾದ್ ಜೋಶಿಯಂಥವರ ಹೆಗಲಿಗೆ ಹಾಕಿ ಬೆಂಗಳೂರು ವಿಮಾನ ಹತ್ತಿದ್ದಾರೆ.


ಕಾಟವೇ

ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಧಾರವಾಡ, ಹಾವೇರಿ, ಗದಗ ಜಿಲ್ಲೆಯ ಒಟ್ಟು 7338 ಮತದಾರರಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ 2116, ಗದಗ ಜಿಲ್ಲೆಯಲ್ಲಿ 1916 ಮತ್ತು ಹಾವೇರಿ ಜಿಲ್ಲೆಯಲ್ಲಿ 3306 ಮತದಾರರಿದ್ದಾರೆ. ಹಾವೇರಿ ಜಿಲ್ಲೆಯೇ ಅತೀ ಹೆಚ್ಚು ಮತದಾರರನ್ನು ಹೊಂದಿರುವುದರಿಂದ ಈ ಜಿಲ್ಲೆಯ ಅಭ್ಯರ್ಥಿಗೇ ಟಿಕೆಟ್ ನೀಡಬೇಕೆಂದು ಸಿ.ಎಂ.ಉದಾಸಿ ಹಠ ಹಿಡಿದಿದ್ದಾರೆ. ಆದರೆ, ಇದಕ್ಕೆ ಬಸವರಾಜ್ ಬೊಮ್ಮಾಯಿ ಸಮ್ಮತಿಯಿಲ್ಲ. ತಮಗೆ ಶಿಗ್ಗಾಂವ್ ಕ್ಷೇತ್ರವನ್ನು ತ್ಯಾಗ ಮಾಡುವ ಮೂಲಕ ತಮ್ಮ ರಾಜಕೀಯ ಭವಿಷ್ಯಕ್ಕೆ ಬುನಾದಿ ಒದಗಿಸಿದ ಎಂ.ಎಸ್.ಅಕ್ಕಿಗೆ ಟಿಕೆಟ್ ನೀಡಬೇಕೆಂಬುದು ಅವರ ವಾದ.

ಎಸ್.ಐ.ಚಿಕ್ಕನಗೌಡ್ರ ಕಲಘಟಗಿಯಿಂದ ಕುಂದಗೋಳಕ್ಕೆ ಬಂದಾಗ ಅವರಿಗೆ ತಮ್ಮ ಸ್ಥಾನ ತ್ಯಾಗ ಮಾಡಿದವರು ಎಂ.ಆರ್.ಪಾಟೀಲ್. ಈಗ ಅವರನ್ನೇ ಚಿಕ್ಕನಗೌಡ್ರ ಮರೆತಿರುವಂತೆ ಕಾಣುತ್ತಿದೆ. ಇನ್ನೊಂದೆಡೆಗೆ ತನ್ನ ತಮ್ಮ ಪ್ರದೀಪ್ ಶೆಟ್ಟರ್‌ಗೆ ಟಿಕೆಟ್ ಕೊಡಿಸುವ ಹುನ್ನಾರದಲ್ಲಿರುವ ಜಗದೀಶ್ ಶೆಟ್ಟರ್ ಅದಕ್ಕೆ ಅಡ್ಡವಾಗಿ ನಿಂತಿರುವ, ಈ ಹಿಂದೆ ತನ್ನ ಭಂಟನಾಗಿದ್ದ ಹಾಗೂ ಕೋ-ಜಾ ಸರ್ಕಾರದಲ್ಲಿ ಹುಡಾ ಅಧ್ಯಕ್ಷಗಿರಿಯನ್ನು ಸವಿದ ಲಿಂಗರಾಜ್ ಪಾಟೀಲ್‌ನ ಮೂಗಿಗೆ ತುಪ್ಪ ಸವರಿ ತುಳಿಯುತ್ತಿದ್ದಾರೆ. ಮತ್ತೊಂದೆಡೆ ಬಿಜೆಪಿ ನಾಯಕರ ಎಲ್ಲಾ ಗುಂಡು ಪಾರ್ಟಿಗಳಿಗೆ ಹೆಂಡ-ಖಂಡಗಳನ್ನು ಸಪ್ಲೈ ಮಾಡುವ ಮೂಲಕ ಹಾಗೂ ಸಂಘಪರಿವಾರಿಗಳ ಸಭೆಸಮಾರಂಭಗಳನ್ನು ಸ್ಪಾನ್ಸರ್ ಮಾಡುವ ಮೂಲಕ ಲಕ್ಷಾಂತರ ದುಡ್ಡು ಕಳೆದುಕೊಂಡಿರುವ ರಮೇಶ್ ಭೂಷಣ ತನಗೆ ಟಿಕೆಟ್ ಸಿಗುವುದು ಕಷ್ಟ ಎಂದು ಗೊತ್ತಾದೊಡನೆ ಬಾಯಿ ಬಾಯಿ ಬಡಿದುಕೊಳ್ಳಲಾರಂಭಿಸಿದ್ದಾರೆ.

ಒಟ್ಟಿನಲ್ಲಿ, ಟಿಕೆಟ್ ಅಂತಿಮವಾಗಿ ಯಾರಿಗೇ ಸಿಗಲಿ, ಟಿಕೆಟ್ ವಂಚಿತರು ಮಾತ್ರ ಸುಮ್ಮನೆ ಕುಳಿತುಕೊಳ್ಳುವಂತೆ ಕಾಣುತ್ತಿಲ್ಲ. ಹೀಗಾಗಿ, ಈ ಚುನಾವಣೆ ಉತ್ತರ ಕರ್ನಾಟಕದ ಬಿಜೆಪಿಯಲ್ಲಿ ಒಂದಿಷ್ಟು ಒಡಕು ತರುವ ಮುನ್ಸೂಚನೆಗಳೇ ಕಾಣುತ್ತಿವೆ.

■ ಹುಬ್ಬಳ್ಳಿಯಾಂವ

ಸರ್ಕಾರಿ ಆಸ್ತಿ ನುಂಗಲು ಭ್ರಷ್ಟ ಹಿಂದೂ ವೀರರ ಕ್ಯೂ!

ಯಡ್ಡಿ, ಶೆಟ್ಟಿ, ಪಿ.ವಿ. ಭಟ್.....

ಇವರೆಲ್ಲಾ ಹಾಲಿ ಕರ್ನಾಟಕದಲ್ಲಿ ಹಿಂದೂ ಧರ್ಮವನ್ನು ರಕ್ಷಿಸಲು ಅವತಾರವೆತ್ತಿರುವ ಪುಣ್ಯ ಪುರುಷರು. ರಣಕಲಿಗಳು.

ಹಿಂದೂ ಧರ್ಮ ಆಪತ್ತಿನಲ್ಲಿದೆ ಎಂದು ದಿನಬೆಳಗಾದರೆ ಚಿಟ್ಟೆಂದು ಚೀರಿಕೊಳ್ಳುವ ಈ ಹಡಬೆಗಳೇ ಈಗ ಹಿಂದೂ ಧಾರ್ಮಿಕ ದತ್ತಿಗೆ ಸೇರಿದ 80 ಕೋಟಿಯ ಆಸ್ತಿ ಲಪಟಾಯಿಸಲು ನಿಂತುಬಿಟ್ಟಿದ್ದಾರೆ.

ಈ ಪಿ.ವಿ. ಭಟ್‌ನೆಂಬ ಹಿಂದೂ ಸಂಘಟನೆಯ ವೀರನಂತೂ "ಈ ಆಸ್ತಿ ಹೋಗೋದು ಹಿಂದೂಗಳಿಗೇ ತಾನೆ ಬಿಡ್ರಿ. ನಾವೆಲ್ಲಾ ಏನು ಪಾಕಿಸ್ತಾನದವರಾ" ಎಂದು ಪ್ರಶ್ನಿಸುವವರ ಬಾಯಿ ಮುಚ್ಚಿಸುತ್ತಿದ್ದಾನೆ.


ಎಂಥ ಭ್ರಷ್ಟ ಫಿಲಾಸಫಿ ಇವನದು! ಮಜಾ ಏನೆಂದರೆ ಸಚಿವ ಕೃಷ್ಣಯ್ಯ ಶೆಟ್ಟಿ ಸಮೀವುಲ್ಲಾ ಎಂಬ ಅಧಿಕಾರಿಯೊಂದಿಗೆ ಈಗಾಗಲೇ ರಾಯ ರಾಯ ಛತ್ರದ ಡೀಲು ಕುದುರಿಸಿದ್ದು ಆತನಿಂದ 30 ಕೋಟಿ ಅಡ್ವಾನ್ಸ್ ಕಿತ್ತಿದ್ದಾನೆ. ರಘೋತ್ತಮನ ಹೆಸರಿಗೆ ಈ ಆಸ್ತಿ ಅಕಸ್ಮಾತ್ ವರ್ಗಾ ಆದರೂ ಅದರ ಮುಂದಿನ ವ್ಯವಹಾರಗಳ ಕಂಟ್ರೋಲ್ ಕೃಷ್ಣಯ್ಯ ಶೆಟ್ಟಿ ಕೈಲಿರುವಂತೆ ಮಾತುಕತೆಯಾಗಿದೆ.

ಶೆಟ್ಟಿ ಪರವಾಗಿ ಪಿ.ವಿ. ಭಟ್‌ನೆಂಬ ಹಿಂದೂ ಈಗ ಗಿರಾಕಿಗಾಗಿ ಬೆಂಗಳೂರು, ಚೆನ್ನೈ, ಹೈದರಾಬಾದ್, ಬಾಂಬೆಯಲ್ಲಿ ಕೋಟ್ಯಾಧೀಶ ಉದ್ಯಮಪತಿಗಳು, ರಿಯಲ್ ಎಸ್ಟೇಟ್ ಕುಳಗಳನ್ನು ಹುಡುಕಿಕೊಂಡು ತಿರುಗುತ್ತಿದ್ದಾನೆ.

"ಇದು prime property ಸಿಟಿ ಒಳಗಿದೆ, ಲೀಗಲ್ ಪ್ರಾಬ್ಲಂಗ್‌ಳನ್ನೆಲ್ಲಾ ಶೆಟ್ಟರೇ ಬಗೆಹರಿಸಿಕೊಡುತ್ತಾರೆ" ಎಂದು ಗಾಳ ಹಾಕುತ್ತಿದ್ದಾನೆ. ಹಿಂದೂ ಧರ್ಮ ನಾಶವಾಗುತ್ತಿದೆ ಎಂದು ದಿನ ಬೆಳಗಾದರೆ ಬಾಯಿಬಾಯಿ ಬಡಿದುಕೊಳ್ಳುತ್ತಿರುವ ಸಂಘ ಪರಿವಾರಿಗಳಿಗೆ ನಮ್ಮದೊಂದು ಪ್ರಶ್ನೆ....

ಗೋಕರ್ಣ ನುಂಗಿದ್ದಾಯಿತು. ಈಗ ರಾಯ ರಾಯ ಛತ್ರ ಸ್ವಾಹ ಮಾಡಲು ಹೊರಟಿದ್ದೀರಲ್ಲಾ.....

ಹಿಂದೂ ಧರ್ಮೋದ್ಧಾರ ಅಂದರೆ ಇದೇನಾ?



ಗೋಕರ್ಣ ನಂ. 2

ಯಡ್ಡಿ-ಶೆಟ್ಟಿ 80 ಕೋಟಿ ಡೀಲ್

ರಾಯರಾಯ ಛತ್ರ ಸ್ವಾಹ

ಹಿಂದೂ ಧರ್ಮದ ಚಾಂಪಿಯನ್ ನಾಯಕ ಕರ್ನಾಟಕದ ಮುಖ್ಯಮಂತ್ರಿ ಯಡಿಯೂರಪ್ಪ ಒಂದೇ ಡೀಲಿನಲ್ಲಿ ಅನಾಮತ್ತು 80 ಕೋಟಿ ಬೆಲೆಯ ಸರ್ಕಾರಿ ಮುಜರಾಯಿ ಆಸ್ತಿ ಕಬಳಿಸಲು ನಿಂತಿರುವ ಹಗರಣ ಇದು.

ಮುಜರಾಯಿ ಮಂತ್ರಿ ಹಗಲು ದರೋಡೆಕೋರ ಕೃಷ್ಣಯ್ಯ ಶೆಟ್ಟಿಯೂ ಇದರಲ್ಲಿ ಶಾಮೀಲಾಗಿದ್ದು ಫಿಫ್ಟಿ-ಫಿಫ್ಟಿ ಬೇಸಿಸ್ ಮೇಲೆ ಈ ಡೀಲ್ ಕುದುರಿಸಲಾಗುತ್ತಿದೆ. ಬೆಂಗಳೂರಿನ ಕೆ.ಆರ್. ರಸ್ತೆಯ ಒಕ್ಕಲಿಗರ ಸಂಘದ ಎದಿರಿರುವ, ಗಾಯನ ಸಮಾಜದ ಪಕ್ಕದ ರಾಯ ರಾಯ ಕೊಲ್ಲಂ ವೆಂಕಟರಾವ್ ಛತ್ರವೆಂಬ ಎರಡೂ ಮುಕ್ಕಾಲು ಎಕರೆಯ prime property ಯ ಮೇಲೆಯೇ ಈಗ ಯಡ್ಡಿ ಗ್ಯಾಂಗ್ ಕಣ್ಣು ಹಾಕಿರುವುದು.

ಒಟ್ಟು 1 ಲಕ್ಷ ಚಿಲ್ಲರೆ ಚದರಡಿಯ ಈ ಜಾಗದ ಇವತ್ತಿನ ಮಾರ್ಕೆಟ್ ರೇಟ್ ಏನಿಲ್ಲವೆಂದರೂ 80 ಕೋಟಿ ರೂಪಾಯಿಗಳು.

ಕರ್ನಾಟಕ ಸರ್ಕಾರದ ಮುಜರಾಯಿ ಇಲಾಖೆಗೆ ಸೇರಿರುವ ಈ ಬೆಲೆಬಾಳುವ ಆಸ್ತಿಯನ್ನು ಮುಜರಾಯಿಯಿಂದ ಕಿತ್ತು ರಘೋತ್ತಮ ರಾವ್ ಎಂಬುವನಿಗೆ ದಾಟಿಸಿಬಿಡಲು ಯಡ್ಡಿ ಸರ್ಕಾರ ವ್ಯವಸ್ಥಿತ ಪಿತೂರಿ ನಡೆಸುತ್ತಿದೆ.


ಈ ರಘೋತ್ತಮ ರಾವ್ ಎಂಬಾತ ತಾನು ರಾಯ ರಾಯ ಕೊಲ್ಲಂ ವೆಂಕಟರಾವ್ ವಂಶದ ಉತ್ತರಾಧಿಕಾರಿ ಎಂದು ಹೇಳಿಕೊಂಡು ಈ ಸರ್ಕಾರಿ ಆಸ್ತಿ ಮೇಲೆ ಹಕ್ಕು ಸಾಧಿಸಲು ನೋಡುತ್ತಿದ್ದಾನೆ. ವಿಪರ್ಯಾಸ ಏನೆಂದರೆ ಈ ಸರ್ಕಾರಿ ಆಸ್ತಿಯನ್ನು ಉಳಿಸಿಕೊಳ್ಳಲು ಪ್ರಯತ್ನಿಸಬೇಕಿದ್ದ ಮುಜರಾಯಿ ಇಲಾಖೆ ಅಧಿಕಾರಿಗಳು ಎಂಜಲು ಕಾಸು ತಿಂದು ಖಾಸಗಿ ವ್ಯಕ್ತಿಗಳೊಂದಿಗೇ ಶಾಮೀಲಾಗಿದ್ದಾರೆ.

ಮುಜರಾಯಿ ಮಂತ್ರಿ ಕೃಷ್ಣಯ್ಯ ಶೆಟ್ಟಿ ಹಾಗೂ ರಘೋತ್ತಮ ರಾವ್ ಈಗಾಗಲೇ 'ಆ ಭೂಮಿ ತಮ್ಮದೇ' ಎಂಬಂತೆ ಖರೀದಿದಾರರನ್ನು ಹುಡುಕಿಸುತ್ತಿದ್ದಾರೆ.

ಸದ್ಯಕ್ಕೆ ಬೆಂಗಳೂರಿನ ಟಾಪ್ ಲೆವೆಲ್ ರಿಯಲ್ ಎಸ್ಟೇಟ್ ದಂಧೆಕೋರರು "ಕೆ.ಆರ್. ರೋಡಲ್ಲಿ ಮೂರೆಕರೆ ಒಳ್ಳೆ ಪ್ರಾಪರ್ಟಿ ಇದೆ... ನೋಡ್ತೀರಾ" ಎನ್ನುತ್ತಿದ್ದಾರೆ.

ಈ ಸುದ್ದಿಯ ಸುಳಿವು ಹಿಡಿದು ತನಿಖೆ ನಡೆಸಿದ 'ಲಂಕೇಶ್' ಪತ್ತೆಹಚ್ಚಿದ ಸತ್ಯ ಸಂಗತಿ ಇಲ್ಲಿದೆ.

ಗೋಕರ್ಣ ನಂಬರ್ ಟೂ ಎನ್ನಬಹುದಾದ ಹಗರಣ ಇದು.




Therefore in view of the Government notification dated 03-04-1933 and 23-03-1937, the applicant is at liberty to approach the Government for issue of No Objection Certificate for deletion/removal of the word-Management by Department of Muzrai in the revenue records of city corporation and for delivery of possession of chatram and its property.

ಕೊಲ್ಲಂ ಛತ್ರ ಪರಬಾರೆಗೆ ಶ್ಯಾಂ ಭಟ್ ಆದೇಶ

ರಾಯ ರಾಯ ಛತ್ರ ಮುಜರಾಯಿ ಆಸ್ತಿ ಆಗಿದ್ದು

ರಾಯ ರಾಯ ಕೊಲ್ಲಂ ವೆಂಕಟರಾವ್ ಎಂಬ ಕೇರಳ ಕಡೆಯ ಬ್ರಾಹ್ಮಣನೊಬ್ಬ 1834-38 ಹಾಗೂ 1840-43 ರಲ್ಲಿ ಬೆಂಗಳೂರು ನಗರದ ಶಿರಸ್ತೇದಾರ್ ಆಗಿದ್ದ. ಮೈಸೂರಿನ ಒಡೆಯರ್ ಆಡಳಿತವಿದ್ದ ಕಾಲ ಅದು. ಈ ಕೊಲ್ಲಂ ವೆಂಕಟರಾವ್ ಈಗಿನ ಸಿಟಿ ಮಾರ್ಕೆಟ್ ಪ್ರದೇಶದ ಗುಂಡೋಪಂತಲು ಬೀದಿಯಲ್ಲಿ ಒಂದು ಛತ್ರ ಕಟ್ಟಿಸಿರುತ್ತಾನೆ. ನಂತರ ಒಡೆಯರ್ ಇಲ್ಲಿ ಕೆ.ಆರ್. ಮಾರ್ಕೆಟ್ ಕಟ್ಟಿಸಿದಾಗ ಆ ಜಾಗ ಸ್ವಾಧೀನ ಪಡಿಸಿಕೊಂಡು ಅದರ ಪರಿಹಾರವಾಗಿ ಈಗಿನ ನ್ಯಾಷನಲ್ ಕಾಲೇಜ್ ಪಕ್ಕದ ಚಿಕ್ಕಣ್ಣ ಗಾರ್ಡನ್‌ನಲ್ಲಿ 2.36 ಎಕರೆ ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ ಮಾತ್ರ ಬಳಸುವಂತೆ ಆದೇಶಿಸಿ 1910 ರಲ್ಲಿ ಕೊಡಿಸಿದ್ದರು. ಅದರ ಬಾಬ್ತು ಭೂಸ್ವಾಧೀನ ಪ್ರಕ್ರಿಯೆಯ ಖರ್ಚಾಗಿ 3392 ರೂಪಾಯಿ ಹನ್ನೆರಡು ಆಣೆಯನ್ನು ಸರ್ಕಾರವೇ ಭರಿಸಿತ್ತು. ನಂತರ ರಾಯ ಕೊಲ್ಲಂ ಕುಟುಂಬ ಸಾರ್ವಜನಿಕರ ಹಣ ಬಳಸಿ ಈ ಜಾಗದಲ್ಲಿ ರಾಯ ರಾಯ ಕೊಲ್ಲಂ ವೆಂಕಟರಾವ್ ಛತ್ರ ನಿರ್ಮಿಸಿತ್ತು. ಈ ಛತ್ರದ ಆಡಳಿತ ಹಾಗೂ ಹಣಕಾಸು ನಿರ್ವಹಣೆಗೆ ಆಗಿನ ಮೈಸೂರು ಸರ್ಕಾರವೇ ಒಂದು ಧರ್ಮದರ್ಶಿಗಳ ಮಂಡಳಿಯನ್ನು ನೇಮಿಸಿತ್ತು. ಕೊಲ್ಲಂ ಕುಟುಂಬದ ಶ್ರೀನಿವಾಸ ರಾವ್ ಇದರ ಮ್ಯಾನೇಜರ್ ಆಗಿದ್ದ. ಈತ ಸತ್ತ ಮೇಲೆ ವಾಸುದೇವ ರಾವ್ ಎಂಬುವನು ಮ್ಯಾನೇಜರ್ ಆಗಿ ಬಂದ.





ಕೃಷ್ಣಯ್ಯಶೆಟ್ಟಿ

ಆದರೆ ಈ ವಾಸುದೇವ ರಾವ್ ರಾಯ ಕೊಲ್ಲಂ ಛತ್ರದ ಹಣಕಾಸು ವ್ಯವಹಾರ ಸರಿಯಾಗಿ ನಿರ್ವಹಿಸದೆ ಸಾಕಷ್ಟು ಹಣ ಗುಳುಂ ಮಾಡಿದ ಕಾರಣ ಆಗಿನ ಸರ್ಕಾರ ಅವನನ್ನು ಓಡಿಸಿ ಛತ್ರವನ್ನು ತಾನೇ ವಶಪಡಿಸಿಕೊಂಡಿತ್ತು.

ಈ ಸಂಬಂಧ 3.4.1933 ರಲ್ಲಿ ಒಂದು ಆದೇಶ ಹೊರಡಿಸಿದ ಸರ್ಕಾರ ಸಾರ್ವಜನಿಕ ಉದ್ದೇಶಕ್ಕಾಗಿ ದಾನವಾಗಿ ನೀಡಿದ್ದ ರಾಯ ಕೊಲ್ಲಂ ಛತ್ರವನ್ನು ಮುಜರಾಯಿ ಇಲಾಖೆಯ ವಶಕ್ಕೆ ಪಡೆದಿತ್ತು. ಇದು 1927 ರ ಹಿಂದೂ ಧಾರ್ಮಿಕ ದತ್ತಿ ಕಾಯ್ದೆಯ ನಿಯಮಾನುಸಾರ ತೆಗೆದುಕೊಂಡ ಕಾನೂನು ಕ್ರಮವಾಗಿತ್ತು.



ಶ್ಯಾಂ ಭಟ್

ಅಲ್ಲಿಂದಾಚೆಗೆ ರಾಯ ರಾಯ ಛತ್ರದ ಆಸ್ತಿ ನಿರ್ವಹಣೆ, ತೆರಿಗೆ ಪಾವತಿ, ದಾಖಲೆಗಳೆಲ್ಲರದಲ್ಲೂ ಮುಜರಾಯಿ ಇಲಾಖೆಯ ಹೆಸರೇ ಇದೆ. ಮತ್ತೊಂದೆಡೆ ಈ ಆಸ್ತಿಯ ಮೇಲೆ ಯಾವ ಹಕ್ಕೂ ಇರದಿದ್ದ ಕೊಲ್ಲಂ ಕುಟುಂಬದವರು ತಮಿಳುನಾಡಿನ ಕುಂಭಕೋಣಂ ಹಾಗೂ ಕೇರಳದ ಕ್ವಿಲಾನ್‌ನಲ್ಲಿ ತಮ್ಮ ಪಾಡಿಗೆ ತಾವು ಜೀವನ ನಡೆಸಿಕೊಂಡಿದ್ದರು.

ಈ ಕುಟುಂಬದ ರಘೋತ್ತಮ ರಾವ್ ಎಂಬ ಐನಾತಿ ಕುಳ ಸೀನ್‌ಗೆ ಬರುವವರೆಗೂ ಈ ಅಮೂಲ್ಯ ಸರ್ಕಾರಿ ಆಸ್ತಿ ಬಗ್ಗೆ ಯಾವುದೇ ವಿವಾದ ಇರಲಿಲ್ಲ.

ಆದರೆ 2001 ರ ಸುಮಾರಿಗೆ ಈ ಆಸ್ತಿ ಕೈವಶ ಮಾಡಿಕೊಳ್ಳುವ ವ್ಯವಸ್ಥಿತ ಪಿತೂರಿ ಶುರುವಾಯಿತು.

ಕೋರ್ಟ್‌ನಲ್ಲಿ ವಿವಾದ

ಹಾಲಿ ಬೆಂಗಳೂರಿನ ಸದಾಶಿವನಗರದ ನಂ. 101, 8 ನೇ ಕ್ರಾಸ್, 9 ನೇ ಮೈನ್ ಎಂಬ ವಿಳಾಸದಲ್ಲಿರುವ ಆರ್. ರಘೋತ್ತಮ ರಾವ್ S/o ಮಾಧವ ರಾವ್ ಎಂಬ ವ್ಯಕ್ತಿ ಕರ್ನಾಟಕ ಹೈಕೋರ್ಟಿನಲ್ಲಿ ಒಂದು ರಿಟ್ ಅರ್ಜಿ ಸಲ್ಲಿಸಿ (ಸಂಖ್ಯೆ 35011/2001) ರಾಯ ರಾಯ ಛತ್ರಕ್ಕೆ ತಾನೇ ಹಕ್ಕುದಾರನೆಂದು ಹೇಳಿಕೊಂಡ. ಆದರೆ ಸಿಂಗಲ್ ಬೆಂಚ್ ಆತನ ಅರ್ಜಿಯನ್ನು ವಜಾ ಮಾಡಿತು. ಈ ಮಧ್ಯೆ ಮುಜರಾಯಿ ಇಲಾಖೆಗೂ ಅರ್ಜಿ ಕೊಟ್ಟ ರಘೋತ್ತಮ ರಾವ್ ರಾಯ ಕೊಲ್ಲಂ ಛತ್ರ ತನ್ನ ಕುಟುಂಬದೆಂದು ಹೇಳಿ ಬಿಟ್ಟುಕೊಡಲು ಕೇಳಿದ್ದ. ಯಾವ್ಯಾವುದೋ ಹಳೆ ಪತ್ರ, ವಂಶವೃಕ್ಷಗಳನ್ನು ಪೂರಕ ದಾಖಲೆಯಾಗಿ ಸಲ್ಲಿಸಿದ್ದ. ಆದರೆ ಇಲಾಖೆ ಇದನ್ನು ಕೇರ್ ಮಾಡದೆ ಸುಮ್ಮನಿತ್ತು. ನಂತರ ಹೈಕೋರ್ಟಿನ ಡಿವಿಜನಲ್ ಬೆಂಚ್‌ಗೆ ಹೋದ ರಘೋತ್ತಮ್ ಇನ್ನೊಂದು ರಿಟ್ ಹಾಕಿಕೊಂಡ. (ಸಂಖ್ಯೆ 3262/2005)

ಅದರಲ್ಲಿ 'ಮುಜರಾಯಿ ಇಲಾಖೆಗೆ ನನ್ನ ಅರ್ಜಿ ತೆಗೆದುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಆದೇಶಿಸಿ' ಅಂತ ಕೇಳಿಕೊಂಡ. ಅದಕ್ಕೆ ಕೋರ್ಟ್ ಅಸ್ತು ಎಂದಿತು. ಇದರರ್ಥ ಅವನ ಅಹವಾಲು ಕೇಳಿ ಎಂಬುದಾಗಿತ್ತೇ ವಿನಃ ಇಡೀ ರಾಯ ಕೊಲ್ಲಂ ಛತ್ರವನ್ನೇ ಧಾರೆ ಎರೆದುಕೊಡಿ ಎಂದಾಗಿರಲಿಲ್ಲ. ಆದರೇನು ಡೀಲು ಕುದುರಿಸಿಕೊಳ್ಳಲು ಆಗಲೇ ತಯಾರಾಗಿದ್ದ ಮುಜರಾಯಿ ಇಲಾಖೆ ಅಧಿಕಾರಿಗಳು ವಿಶೇಷ ಆಸಕ್ತಿ ವಹಿಸಿ ಈ ಕೇಸ್ ಕೈಗೆತ್ತಿಕೊಂಡರು.

ಮುಜರಾಯಿ ಇಲಾಖೆಯಲ್ಲಿಯೇ ಇಂಥ ಪ್ರಸ್ತಣಗಳ ವಿಚಾರಣೆಗೆ ವಿಶೇಷ ಕೋರ್ಟ್ ಇದ್ದು ಮುಜರಾಯಿ ಕಮೀಷನರ್ ಇದರ ನ್ಯಾಯಾಧೀಶರಾಗಿರುತ್ತಾರೆ. ಅದರಂತೆ ಈ ಪ್ರಕರಣವೂ ಕೇಸ್ ನಂಬರ್ ADM 7 PTN 22/2005-06 ಎಂದು ದಾಖಲಾಗಿ ವಿಚಾರಣೆ ಶುರುವಾಯಿತು.

ಆಗ ಮುಜರಾಯಿ ಕಮಿಷನರ್ ಆಗಿದ್ದವರು ಶ್ಯಾಂ ಭಟ್.

ಶ್ಯಾಂ ಭಟ್-ಕೃಷ್ಣಯ್ಯ ಶೆಟ್ಟಿ ಶಾಮೀಲು

ಏನೇ ಎಳೆದಾಡಿದರೂ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಈ ಸರ್ಕಾರಿ ಆಸ್ತಿಯನ್ನು ಬೇರೆ ಯಾರೋ ಖಾಸಗಿ ವ್ಯಕ್ತಿಗೆ ಧಾರೆಯೆರೆದು ಕೊಡಲು ಮನಸ್ಸು ಮಾಡಿರಲಿಲ್ಲ, ಆದರೆ ಯಾವಾಗ 2008 ರ ಮೇ 30 ರಂದು ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಕೃಷ್ಣಯ್ಯ ಶೆಟ್ಟಿ ಮುಜರಾಯಿ ಮಂತ್ರಿಯಾದನೋ ಈ ಡೀಲಿಗೆ ಒಂದು ವೇಗ ಬಂದುಬಿಟ್ಟಿತು. ಈ ರಘೋತ್ತಮ ರಾವ್ ಆರ್‌ಎಸ್‌ಎಸ್ ನಾಯಕ ಪಿ.ವಿ. ಭಟ್ ಎಂಬ ಹಿಂದೂ ಧರ್ಮೋದ್ಧಾರಕನನ್ನು ಹಿಡಿದುಕೊಂಡ. ಈ ಭಟ್ಟ ನೇರ ಕೃಷ್ಣಯ್ಯ ಶೆಟ್ಟಿ ಹತ್ತಿರ ಹೋಗಿ 'ಈತರಕ್ಕೀತರ ಎಂದು ಕೋಟಿಗಟ್ಟಲೆ ಲಂಚದ ಆಸೆ ತೋರಿಸಿದೇಟಿಗೆ ಶೆಟ್ಟಿ ಸರ್ಕಾರಕ್ಕೆ ತಿರುಪತಿ ನಾಮ ಹಾಕಲು ರೆಡಿಯಾದ. ಶೆಟ್ಟಿ ಮುಜರಾಯಿ ಮಂತ್ರಿಯಾದ ಕೇವಲ ಎಂಟೇ ದಿನದಲ್ಲಿ ಈ ಪ್ರಕರಣದ ವಿಚಾರಣೆಯನ್ನು ತರಾತುರಿಯಲ್ಲಿ ಮುಗಿಸಿದ ಶ್ಯಾಂ ಭಟ್ ದಿನಾಂಕ 7.6.2008 ರಲ್ಲಿ ಒಂದು ಆದೇಶ ನೀಡಿದರು.

ಅದರಲ್ಲಿ ರಾಯ ರಾಯ ಕೊಲ್ಲಂ ಛತ್ರದ ಎರಡೂ ಮುಕ್ಕಾಲೆಕರೆ ಜಾಗ ಸೇರಿದಂತೆ ಸಮಸ್ತ ಆಸ್ತಿಯನ್ನು ಮುಜರಾಯಿ ಇಲಾಖೆಯ ಆಸ್ತಿ ಪಟ್ಟಿಯಿಂದ ಕೈಬಿಡುವ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಬಹುದೆಂತಲೂ, ಈ ಆಸ್ತಿಗೆ ಕೊಲ್ಲಂ ಕುಟುಂಬದವರೇ ನೈಜ ವಾರಸುದಾರರೆಂತಲೂ ಷರಾ ಬರೆದಿಟ್ಟು ಜಾಗ ಖಾಲಿ ಮಾಡಿಬಿಟ್ಟರು. ಕೃಷ್ಣಯ್ಯ ಶೆಟ್ಟಿ ಕಾಯುತ್ತಿದ್ದದ್ದೂ ಇವನ್ನೇ. ಕಂಡವರ ಆಸ್ತಿ, ಜಮೀನು ಮಾರಿ ಮಾರಿಯೇ ಕುಬೇರನಾಗಿರುವ ರಿಯಲ್ ಎಸ್ಟೇಟ್ ಕಳ್ಳ ಕೃಷ್ಣಯ್ಯ ಶೆಟ್ಟಿ ರಘೋತ್ತಮನೊಂದಿಗೆ ಈಗ ಡೀಲು ಕುದುರಿಸಿಕೊಂಡಿದ್ದಾನೆ.

ಕಳೆದ 75 ವರ್ಷಗಳಿಂದಲೂ ಮುಜರಾಯಿ ಇಲಾಖೆಯ ನೇರ ವಶದಲ್ಲಿರುವ, ಒಂದು ನೂರು ವರ್ಷಗಳ ಹಿಂದೆ ಸರ್ಕಾರವೇ ನೀಡಿದ ಭೂಮಿಯಲ್ಲಿರುವ ರಾಯ ರಾಯ ಕೊಲ್ಲಂ ಛತ್ರವನ್ನು ಪರಭಾರೆ ಮಾಡಿಬಿಡಲು ಈಗ ಯಡ್ಡಿ-ಶೆಟ್ಟಿ ಗ್ಯಾಂಗ್ ರೆಡಿಯಾಗಿದೆ. ಮುಜರಾಯಿ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯ, ಶಾಮಿಲುದಾರಿಕೆ ಹಾಗೂ ಸಚಿವ ಕೃಷ್ಣಯ್ಯ ಶೆಟ್ಟಿಯ ಲೋಭಗಳೆಲ್ಲಾ ಸೇರಿ 80 ಕೋಟಿ ಬೆಲೆಯ ಸರ್ಕಾರಿ ಆಸ್ತಿ ಈಗ ಕೈಬಿಟ್ಟು ಹೋಗುವ ಹಂತಕ್ಕೆ ಬಂದಿದೆ.

ಹಿಂದೂ ಧರ್ಮೋದ್ಧಾರಕ ಯಡಿಯೂರಪ್ಪನ ಆಶೀರ್ವಾದವೂ ಇದಕ್ಕಿದೆ.

ಮುಜರಾಯಿಗೆ ಸೇರಿದ್ದ ಗೋಕರ್ಣ ದೇವಸ್ಥಾನವನ್ನೇ ರಾಘವೇಶ್ವರ ಸ್ವಾಮಿಗೆ ಧಾರೆ ಎರೆದು ಕೊಟ್ಟ ಯಡ್ಡಿ 'ಮಠ ಮಂದಿರಗಳಿಗೆ ದಾನ, ಅನುದಾನ ಕೊಟ್ಟರೆ ತಪ್ಪೇನು' ಎಂದು ಪ್ರಶ್ನಿಸುತ್ತಿದ್ದಾರೆ.

ಬಹುಶಃ ರಾಯ ರಾಯ ಛತ್ರ ನುಂಗುವಾಗ

"ಹಿಂದೂ ಮುಜರಾಯಿ ಆಸ್ತೀನ ಹಿಂದೂವಾದ ನಾನು ಸ್ವಾಹ ಮಾಡಿದರೆ ತಪ್ಪೇನು" ಎಂತಲೂ ಕೇಳಬಹುದು.

ಒಟ್ಟನಲ್ಲಿ

ಯಡ್ಡಿ-ಶೆಟ್ಟಿ ಧನದಾಹ.....!


ರಾಯ ರಾಯ ಛತ್ರ ಸ್ವಾಹ....!!



ಡೀಕೆ-ಕುಮಾರ್ ದುಷ್ಮನಿ ಖತಂ?

ಆಜನ್ಮ ಶತ್ರುಗಳಂತಿದ್ದ ಕುಮಾರಸ್ವಾಮಿ ಮತ್ತು ಡೀಕೆ ಮಧ್ಯೆ ನಿಗೂಢ ಸಂಧಾನವೇರ್ಪಟ್ಟಿದೆಯೇ? ಜೆಡಿಎಸ್-ಕಾಂಗ್ರೆಸ್ ಮೈತ್ರಿ ವಿರುದ್ಧ ಮೊದಲ ಕೊಳ್ಳಿ ಇಡಬೇಕಿದ್ದ ಡೀಕೆ ಇದ್ದಕ್ಕಿದ್ದಂತೆ ಗಪ್‌ಚುಪ್ಪಾಗಿದ್ದಕ್ಕೆ ಇದೇ ಕಾರಣವೆ?

ಸಿದ್ದರಾಮಯ್ಯನವರ ಹತಾಶೆ, ಆದಿಚುಂಚನಗಿರಿ ಮಠದಲ್ಲಿ 'ಹೊಗೆಯಾಡುತ್ತಿರುವ' ಗುಮಾನಿ ಮತ್ತು ಮುಂಬರುವ ಉಪಚುನಾವಣೆಯ ತಯಾರಿ ಇತ್ಯಾದಿಗಳನ್ನು ಸೂಕ್ಷ್ಮವಾಗಿ ಗಮನಿಸುವ ಯಾರಿಗಾದರೂ ಇಂಥಾದ್ದೊಂದು ವಾಸನೆ ಹತ್ತಲೇಬೇಕು. ಇಂಟಲಿಜೆನ್ಸ್ ಮೂಲಗಳ ಪ್ರಕಾರ ಇಬ್ಬರೂ ತಿಂಗಳ ಹಿಂದೆ ಕುಂಬಳಗೋಡಿನ ಆದಿಚುಂಚನಗಿರಿ ಮಠದಲ್ಲಿ ಡೀಕೆ ಮತ್ತು ಕುಮಾರಸ್ವಾಮಿ ಕೈಕೈ ಮಿಲಾಯಿಸಿದ್ದಾರೆ!



ಹದಗೆಟ್ಟ ಆರೋಗ್ಯದ ವಿಷಮಗಳಿಗೆಯಲ್ಲೂ ಬಾಲಗಂಗಾಧರನಾಥ ಸ್ವಾಮೀಜಿಯೇ ಆಸಕ್ತಿ ವಹಿಸಿ ಡೀಕೆಗೂ ಕುಮಾರಸ್ವಾಮಿಗೂ ರಾಜಿ ಮಾಡಿಸಿದ್ದಾರಂತೆ. ಅದು ಕೂಡ ಶೇಖರ್ ಸ್ವಾಮಿಯ ಪೌರೋಹಿತ್ಯದಲ್ಲೇ ಏರ್ಪಟ್ಟ ರಾಜಿಯಂತೆ. ಹಾಗೊಮ್ಮೆ ತಾನೇ ಕೆಪಿಸಿಸಿಗೆ ಅಧ್ಯಕ್ಷನಾಗುವುದಾದರೆ ಅದಕ್ಕೆ ದೇವೇಗೌಡರು ಅಡ್ಡಗಾಲಿಡಬಾರದೆಂಬ ಧಾವಂತಕ್ಕೆ ಬಿದ್ದೇ ಡೀಕೆ ರಾಜಿಗೆ ಮುಂದಾದರೆ, ಡೀಕೆ ಕೆಪಿಸಿಸಿಗೆ ಅಧ್ಯಕ್ಷನಾದರೆ ತನಗೇನೂ ಅಭ್ಯಂತರವಿಲ್ಲವೆಂದು ದೇವೇಗೌಡರೇ ಧರಂಸಿಂಗ್ ಕಿವಿ ಕಚ್ಚಿದರಂತೆ.

ಆರೆಸ್ಸೆಸ್ ಸಖ್ಯವಿದ್ದಾಗ್ಯೂ ಬಾಲಗಂಗಾಧರಸ್ವಾಮಿಗೆ ಯಡ್ಡಿಯ ಜಾತಿಬುದ್ಧಿ ಕೊನೆಗಾದರೂ ಗೊತ್ತಾಯಿತಲ್ಲ?

ಗೋಕರ್ಣ: ರಾಘವೇಶನ ಗೂಂಡಾಗಿರಿ ಪ್ರಾರಂಭ!

ರಾಜ್ಯದ ಪ್ರಜ್ಞಾವಂತ ಜನತೆಯೊಡ್ಡಿದ ಪ್ರತಿರೋಧ ದಾಗಿ ಅಮೂಲ್ಯ ಸಂಪತ್ತಿನ ಅಮೃತಮಹಲ್ ಕಾವಲ್ ಮಚಂದ್ರಾಪುರದ ರಾಘವೇಶ ಎಂಬ ಸಗಣಿಗಳ್ಳನ ಪಾಗುವುದು ತಪ್ಪಿಹೋಯಿತು. ಕೈಗೆ ಬಂದ ತುತ್ತು ಯಿಗೆ ಬರಲಿಲ್ಲವಲ್ಲ ಎಂದು ರಾಘವೇಶ ಮೈಕೈ ಚಿಕೊಂಡದ್ದೂ ಆಯಿತು. ಆಮೇಲೆ, ಚಿನ್ನದ ಮೊಟ್ಟೆ ಡುವ ಗೋಕರ್ಣವನ್ನಾದರೂ ಪಡೆದೇ ತೀರುತ್ತೇನೆಂಬ ತತೊಟ್ಟು ಅದನ್ನು ರಾಮಚಂದ್ರಾಪುರ ಮಠಕ್ಕಲ್ಲದೇ ಸ್ವಂತಕ್ಕೆ ಬರೆಸಿಕೊಂಡದ್ದೂ ಆಯಿತು. ಆದರೂ ಘವೇಶನಿಗೆ ಸರಿಯಾಗಿ ನಿದ್ರೆ ಬರುತ್ತಿಲ್ಲ. ದಾಖಲೆ ಗಳಲ್ಲಿ ಗೋಕರ್ಣವನ್ನು ಗುಳುಂ ಮಾಡಿದ್ದಾನಾದರೂ ಸ್ತವದಲ್ಲಿ ಗೋಕರ್ಣ ದೇವಳದ ಗರ್ಭಗುಡಿಯಿಂದ ದು ರಾಮಚಂದ್ರಾಪುರ ಮಠದ ತನಕ ಇದಕ್ಕೆ ವೀ ಪ್ರತಿರೋಧ ಎದುರಾಗುತ್ತಿರುವುದೇ ಇದಕ್ಕೆ ಕಾರಣ. ಪಕ್ಕಾ ಸಗಣಿಗಳ್ಳನಾಗಿರುವ ರಾಘವೇಶ ಇಂಥ ರೋಧಗಳನ್ನು ಮಟ್ಟ ಹಾಕುವುದಕ್ಕೆ ಅನುಸರಿಸುತ್ತಿರುವ ತಂತ್ರಗಳನ್ನು, ಗೂಂಡಾಗಿರಿಯನ್ನು ನೋಡಿದರೆ ಈತ ಠದಲ್ಲಿ ಪೂಜೆಪುನಸ್ಕಾರ ಮಾಡುವ ಸ್ವಾಮಿಯೋ ವ ರಿಯಲ್ ಎಸ್ಟೇಟ್ ದಂಧೆ ಮಾಡೋ ನೆಲಗಳ್ಳನೋ, ಪಕ್ಷೀಯದ ಪುಢಾರಿಯೋ ಅಥವ ಮಚ್ಚುಲಾಂಗ್ ದು ಬೀದಿ ಕಾಳಗ ನಡೆಸುವ ಅಂಡರ್‌ವರ್ಲ್ಡ್‌ನ ಪಿಯೋ ಎಂಬ ಅನುಮಾನ ಬಾರದಿರದು. ಗೋಕರ್ಣ ಗುಲವನ್ನು ರಾಘವೇಶನ ಸ್ವಂತಕ್ಕೆ ಕೊಟ್ಟಿರುವುದರ ರುದ್ಧ ಪ್ರತಿಭಟಿಸುತ್ತಿರುವವರ ಮೇಲೆ, ಈ ಪ್ರತಿಭಟನೆ ಲ್ಲಿ ಮುಂಚೂಣಿಯಲ್ಲಿರುವವರ ಮೇಲೆ ಪೊಲೀಸರನ್ನು ಬಿಟ್ಟು, ಸುಳ್ಳು ಕೇಸು ಹಾಕಿಸಿ ಒಳದಬ್ಬುವ ತಂತ್ರವನ್ನವನು ಅನುಸರಿಸುತ್ತಿದ್ದಾನೆ. ಮೊನ್ನೆ ನಡೆದ ದು ಘಟನೆಯನ್ನೇ ನೋಡಿ. ಮಠದ ಕಾರ್ಯಕರ್ತ ಬ್ಬರ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಲು ತ್ನಿಸಿದ್ದಾರೆ ಎಂದು ಪೊಲೀಸರಿಗೆ ಸುಳ್ಳು ದೂರು ಡಿ, ತನ್ನ ವಿರುದ್ಧ ಹೋರಾಟ ನಡೆಸುತ್ತಿದ್ದ ಗೋಕರ್ಣ ಕ್ಷಣಾ ಸಮಿತಿಯ ಕಾರ್ಯಾಧ್ಯಕ್ಷ ಹಾಗೂ ಜಿಲ್ಲಾ ಾಗ್ರೆಸ್‌ನ ಯುವ ಮೋರ್ಚಾ ಘಟಕದ ಅಧ್ಯಕ್ಷ ರಾಜು ಡಿಯವರನ್ನು ಜೈಲಿಗಟ್ಟಿದ್ದಾನೆ. ಈ ಮೂಲಕ ತನ್ನನ್ನು ರೋಧಿಸುವವರಿಗೆ ಇದೇ ಗತಿ ಬರುತ್ತದೆ ಎಂಬ ಚ್ಚರಿಕೆಯ ಸಂದೇಶ ರವಾನಿಸಿದ್ದಾನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನೀಡಿರುವ ದೂರಿನಲ್ಲಿ ಷ್ಟು ಜನರನ್ನು ಬಂಧಿಸಲು ಅವಕಾಶ ಮಾಡಿಕೊಂಡಿರುವ ದಕಾಯಿತ, ಯಾರ್ಯಾರು ಮಠದ ವಿರೋಧಿ ವಳಿಯಲ್ಲಿ ಮುಂಚೂಣಿಯಲ್ಲಿದ್ದಾರೆ, ಯಾರನ್ನು ಈ ಕರಣದಲ್ಲಿ ಫಿಟ್ ಮಾಡಿದರೆ ಅನುಕೂಲವಾಗುತ್ತದೆ ಬ ಲೆಕ್ಕಾಚಾರದಲ್ಲಿ ನಿರತನಾಗಿದ್ದಾನೆ. ಒಟ್ಟಾರೆಯಾಗಿ ಬೆಂಬಲಕ್ಕೆ ನಿಂತಿರುವ ಪೊಲೀಸರನ್ನು ಬಳಸಿಕೊಂಡು ಠ ವಿರೋಧಿಗಳನ್ನು 'ಮಠಾಷ್' ಮಾಡುವ ಹುನ್ನಾರ ನ್ನು ಸ್ವಾಮೀಜಿ ನಡೆಸಿದ್ದಾರೆಂಬುದು ಈಗ ಗೋಕರ್ಣದ ಜತೆಗೆ ಅರಿವಾಗದ ವಿಚಾರವೇನಲ್ಲ. ಆದ್ದರಿಂದ ಸ್ವಾಮಿ ಪಕ್ಷದಲ್ಲಿರುವ ಈ ಪುಂಡ ರಾಜಕಾರಣಿಯ ವಿರುದ್ಧ ಗೂ ಈತನನ್ನು ಇಲ್ಲಿಗೆ ತಂದು ಕೂರಿಸುವ ಮೂಲಕ ೋಕರ್ಣವನ್ನು ಮಲಿನ ಮಾಡಿರುವ ಮುಖ್ಯಮಂತ್ರಿ ಡ್ಡಿಯ ವಿರುದ್ಧ ಜನರ ಕೋಪ ಮಡುಗಟ್ಟುತ್ತಿದೆ. ೋಕರ್ಣದಲ್ಲಿ ದಿನದಿಂದ ದಿನಕ್ಕೆ ತನ್ನ ವಿರುದ್ಧ ಯುತ್ತಿರುವ ಪ್ರತಿಭಟನೆ ಬಲಗೊಳ್ಳುತ್ತಿರುವುದರಿಂದ ಮೀಜಿ ಎಷ್ಟು ತಲೆಕೆಡಿಸಿಕೊಂಡಿದ್ದಾನೆ ಎಂಬುದಕ್ಕೆ ಯದಶಮಿಯಂದು ದೇವರಭಾವಿಯಲ್ಲಿ ಅವನು ಡಿದ 'ಆಶೀರ್ವಚನ'ವೇ ಸಾಕ್ಷಿ. ಮಠದ ವಿರುದ್ಧ ದನಿ ತ್ತಿದವರನ್ನು ಮಟ್ಟ ಹಾಕಲು ಅತ್ಯಾಚಾರಕ್ಕೂ ದ್ಧವಾಗುವಂತೆ ಆತ ತನ್ನ ಶಿಷ್ಯರಿಗೆ ಕರೆ ನೀಡಿದ್ದಾನೆ. ಈ ಚೋದನಾಕಾರಿ ಭಾಷಣವನ್ನು ಸ್ಥಳೀಯ ಪತ್ರಿಕೆಗಳೆಲ್ಲಾ ದಿ ಮಾಡಿವೆ.

ರಾಘವೇಶನಿಗೆ ಬಿಪಿ ಏರಿದ್ದೇಕೆ?

ಗೋಕರ್ಣದಲ್ಲಿ ಸಿಕ್ಕಿದ್ದನ್ನೆಲ್ಲಾ ತನ್ನ ಹೆಸರಿಗೆ ಡಿಸಿಕೊಂಡು, ಅಲ್ಲಿನ್ನ ಕಾಣಿಕೆ ಹುಂಡಿ, ಚಿನ್ನವನ್ನೆಲ್ಲಾ ಡು ಮಾಡಿದ ಈ ದಕಾಯಿತ ಸ್ವಾಮೀಜಿಯ ಕಣ್ಣು ಬಿದ್ದಿದ್ದು ಇದನ್ನೆಲ್ಲಾ ನೋಡಿಕೊಂಡು ನಿಂತಿದ್ದ ಉಪಾಧಿವಂತರುಗಳ ಮೇಲೆ. ಇವರನ್ನು ಹೀಗೆಯೇ ಬಿಟ್ಟರೆ ತಮ್ಮ ಅವ್ಯವಹಾರವನ್ನೆಲ್ಲಾ ಎಲ್ಲಿ ಬಯಲು ಮಾಡುತ್ತಾರೋ ಎಂದು ಹೆದರಿದ ರಾಘವೇಶ ಅವರಿಗೆಲ್ಲ ಒಂದು ನೋಟಿಸ್ ನೀಡಿದ. ಗೋಕರ್ಣದಲ್ಲಿ ನೀವು ಉಪಾಧಿವಂತರಾಗಿ (ದೇವಾಲಯಕ್ಕೆ ಸಂಬಂಧಿಸಿದ ಕೆಲಸ ಮಾಡಿಕೊಂಡಿರುವವರು) ಕೆಲಸ ಮಾಡುತ್ತಿದ್ದೀರಿ ಎಂಬುದಕ್ಕೆ ಸಂಬಂಧಿಸಿದಂತೆ ನಿಮ್ಮಲ್ಲಿರುವ ದಾಖಲೆಯನ್ನು ಮಠದ ಕಚೇರಿಗೆ ತಂದೊಪ್ಪಿಸಿ ಎಂಬುದು ಈ ನೋಟಿಸ್‌ನ ಸಾರವಾಗಿತ್ತು.

ಈ ಬಹುತೇಕ ಉಪಾಧಿವಂತರಲ್ಲಿ ದಾಖಲೆ ಇಲ್ಲವೆಂದೂ ಹಾಗೂ ಇದೇ ನೆಪದಲ್ಲಿ ಅವರನ್ನೆಲ್ಲಾ ಮೊದಲು ಒದ್ದೋಡಿಸಬಹುದೆಂದೂ ರಾಘವೇಶ ಲೆಕ್ಕಹಾಕಿದ್ದ. ಆದರೆ ಸುಮಾರು 158 ಉಪಾಧಿವಂತರು ಮಠಕ್ಕೆ ದಾಖಲೆಯನ್ನು ತಂದೊಪ್ಪಿಸುವ ಮೂಲಕ ರಾಘವೇಶನ ಲೆಕ್ಕಾಚಾರವನ್ನು ತಲೆಕೆಳಗು ಮಾಡಿದರು.

ಇದರಿಂದ ಇಂಗು ತಿಂದ ಮಂಗಗಳಂತಾದ ಮಠದ ಅಧಿಕಾರಿಗಳು, ದಾಖಲೆ ನೀಡಿದ್ದಕ್ಕೆ ಯಾವುದೇ ರಶೀದಿ ನೀಡುವುದಿಲ್ಲವೆಂದು ಮತ್ತೊಂದು ರಗಳೆ ತೆಗೆದರು. ದಾಖಲೆ ಕೊಟ್ಟ ಮೇಲೆ ಅದನ್ನು ಕೊಟ್ಟೇ ಇಲ್ಲ ಎಂದು ಈ ದಕಾಯಿತ ಸ್ವಾಮಿಯ ಭಕ್ತರು ತಿರುಗಿ ಬಿದ್ದರೇನು ಮಾಡುವುದು ಎಂದು ಹೆದರಿದ ಅರ್ಚಕರು, ಮತ್ತಿತರ ಉಪಾಧಿವಂತರು ಮಠದ ಕಚೇರಿಯ ಮುಂದೆಯೇ ಧರಣಿ ಕುಳಿತರು. ಕಳೆದ ಬುಧವಾರ ಬೆಳಗ್ಗೆ 10 ಗಂಟೆಗೆ ಆರಂಭವಾದ ಈ ಧರಣಿ ಮಾರನೆಯ ದಿನ ಮುಂಜಾನೆ ಮೂರು ಗಂಟೆಯವರೆಗೂ ಮುಂದುವರೆದಿತ್ತು. ಅರ್ಚಕರೆಲ್ಲಾ ಮುಷ್ಕರದಲ್ಲಿ ಭಾಗಿಯಾಗಿದ್ದರಿಂದ ಹೆದರಿದ ರಾಘವೇಶ ಕೊನೆಗೆ ತನ್ನ ಖಾಸಗಿ ಸೆಕ್ರೆಟರಿ ಮೋಹನ ಹೆಗಡೆಯನ್ನು ಕಳುಹಿಸಿ 158 ಮಂದಿಯ ದಾಖಲೆ ನಮ್ಮ ಬಳಿ ಇದೆ ಎಂದು ಕಾಗದದಲ್ಲಿ ಬರೆದು ಕೊಟ್ಟು ಬಚಾವಾಗಿದ್ದರು. ಈ ಪತ್ರಕ್ಕೆ ಮಠದ ಆಡಳಿತಾಧಿಕಾರಿ ಸಹಿ ಮಾಡಿಲ್ಲ, ಬದಲಾಗಿ ಮೋಹನ ಹೆಗಡೆ ಸಹಿ ಮಾಡಿದ್ದಾನೆ.

ಈ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದವರು ಗೋಕರ್ಣ ರಕ್ಷಣಾ ಸಮಿತಿಯ ಪ್ರಮುಖರು. ಈ ಬೆಳವಣಿಗೆಯಿಂದ ತನಗೆ ಅವಮಾನವಾಯಿತೆಂದು ಭಾವಿಸಿರುವ ರಾಘವೇಶ ಸರ್ಕಾರದ ಅಧಿಕಾರಿಗಳು, ಪೊಲೀಸರು ಮತ್ತು ರಾಜಕಾರಣಿಗಳನ್ನು ಬಳಸಿಕೊಂಡು ಮಠದ ವಿರೋಧಿಗಳನ್ನು ಮಟ್ಟಹಾಕಿ ಎಂದು ತನ್ನ ಚೇಲಾಗಳಿಗೆ ಆಜ್ಞೆ ಮಾಡಿದ್ದಾನೆ.

ಸುಳ್ಳು ಕೇಸು ಹಾಕಿಸಿದರು!

ಇಂತಹದ್ದೊಂದು ಆಜ್ಞೆಗಾಗಿಯೇ ಕಾಯುತ್ತಿದ್ದ ಆತನ ಪುಂಡ ಶಿಷ್ಯರು ಉಪಾಧಿವಂತರ ಪ್ರತಿಭಟನೆ ನಡೆದು ಮೂರು ದಿನಗಳಾಗುವುದರೊಳಗೆ ಪೊಲೀಸರನ್ನು ಬಳಸಿಕೊಂಡು ತಮ್ಮ ವಿರೋಧಿಗಳನ್ನು ಮಟ್ಟ ಹಾಕುವ ಕೆಲಸ ಆರಂಭಿಸಿದ್ದಾರೆ.

ಗೋಕರ್ಣ ರಕ್ಷಣಾ ಸಮಿತಿಯ ಕಾರ್ಯಾಧ್ಯಕ್ಷ, ಪತ್ರಕರ್ತ ರಾಜು ಅಡಿ ಅವರ ಸಹೋದರ ರವಿ ಅಡಿ ಗುರುವಾರ ಬೆಳಿಗ್ಗೆ ತಮ್ಮ ಗಾಡಿಯ ಪೆಟ್ರೋಲ್ ಖಾಲಿಯಾಗಿದ್ದರಿಂದ ಕ್ಯಾನ್‌ನಲ್ಲಿ ಪೆಟ್ರೋಲ್ ತುಂಬಿಸಿಕೊಂಡು ಬರುತ್ತಿದ್ದರು. ಅವರು ಗೋಕರ್ಣ ಭದ್ರಕಾಳಿ ದೇವಸ್ಥಾನದ ಬಳಿ ಬರುತ್ತಿದ್ದಾಗ ಮಠದ ಕಾರ್ಯಕರ್ತ ಗುರುಮೂರ್ತಿ ಭಟ್, ಮಠದ ಪರವಾಗಿರುವ ಗ್ರಾ.ಪಂ. ಸದಸ್ಯ ಶೇಖರನಾಯ್ಕ ರವಿ ಅಡಿಯನ್ನು ಕಾಲುಕೆರೆದು ಜಗಳಕ್ಕೆ ಕರೆದಿದ್ದರು. ಈ ಸಂದರ್ಭದಲ್ಲಿ ಮಾತಿನ ಚಕಮಕಿ ನಡೆದಿದೆ. ಆಗ ಸ್ಥಳದಲ್ಲಿ ರಾಜು ಅಡಿಯವರೇನೂ ಇರಲಿಲ್ಲ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮಠ ಮಧ್ಯಾಹ್ನ ಒಂದು ಗಂಟೆ ಸುಮಾರಿಗೆ ಪೊಲೀಸರಿಗೆ ದೂರು ನೀಡಿದ್ದು (ಘಟನೆ ನಡೆದ ಕೂಡಲೇ ಅಲ್ಲ, ಸುಮಾರು ಮೂರು ಗಂಟೆ ಬಿಟ್ಟು ದೂರು ನೀಡಲಾಗಿದೆ, ಅದೂ ಸ್ವಾಮಿಗಳ ಸೂಚನೆ ಮೇರೆಗೆ) ದೂರಿನಲ್ಲಿ ಮಠದ ಕಾರ್ಯಕರ್ತ ಗುರುಮೂರ್ತಿ ಭಟ್ ಅವರ ಬೈಕನ್ನು ತಡೆದಿರುವ ರಾಜು ಅಡಿ, (ಗಮನಿಸಿ: ರವಿ ಅಡಿ ಅಲ್ಲ, ಅವರ ಸಹೋದರ ರಾಜು ಅಡಿ) ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರಲ್ಲದೆ ಅವರ ಮೇಲೆ ಪೆಟ್ರೋಲ್ ಸುರಿದಿದ್ದಾರೆ. ಈ ಸಂದರ್ಭದಲ್ಲಿ ಸಂಧಾನಕ್ಕೆ ಬಂದ ಗ್ರಾ.ಪಂ.ಸದಸ್ಯ ಶೇಖರ ನಾಯ್ಕ ಅವರ ಮೇಲೂ ಹಲ್ಲೆ ನಡೆಸಲಾಗಿದೆ ಎಂದು ವಿವರಿಸಲಾಗಿದೆ.

ಈ ದೂರಿನ ಬಗ್ಗೆ ವಿಚಾರಿಸಲು ಸಂಜೆ ಪೊಲೀಸ್ ಠಾಣೆಗೆ ಹೋದ ರಾಜು ಅಡಿ ಅವರನ್ನು, 'ನಿಮ್ಮ ವಿರುದ್ಧ 307 ಪ್ರಕರಣ ದಾಖಲಾಗಿದೆ' ಎಂದು ಹೇಳಿದ ಪೊಲೀಸರು ಅವರನ್ನು ವಶಕ್ಕೆ ತೆಗೆದುಕೊಂಡು, ಜೈಲಿಗೆ ಕಳುಹಿಸಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜು ಅಡಿ, ಅವರ ಸಹೋದರ ರವಿ ಅಡಿ, ಮನೋಹರ ನಾವುಡ ಮತ್ತು ಎಂಟು ಜನ ಇತರರ ವಿರುದ್ಧ ದೂರು ದಾಖಲಿಸಿಕೊಳ್ಳಲಾಗಿದೆ. ಎಂಟು ಮಂದಿಯ ಹೆಸರನ್ನು ಹೇಳಲಾಗಿಲ್ಲ, ಮುಂದೆ ಬೇಕಾದವರ ಹೆಸರು ಕೊಡುತ್ತೇವೆ, ನೀವು ಆಗ ಸೇರಿಸಿಕೊಳ್ಳಿ ಎಂಬ ಸೂಚನೆಯನ್ನು ಪೊಲೀಸರಿಗೆ ನೀಡಲಾಗಿದೆ. ಈಗ ಯಾರ್ಯಾರು ಹೋರಾಟದ ಮುಂಚೂಣಿಯಲ್ಲಿದ್ದಾರೆ ಎಂದು ಮಠದ ಅಧಿಕಾರಿಗಳು ನೋಡುತ್ತಿದ್ದು; ಹೋರಾಟದಲ್ಲಿ ಕ್ರಿಯಾಶೀಲವಾಗಿರುವ ಪ್ರಸನ್ನ ಜೋಗ್ ಭಟ್, ಗಜಾನನ ಹಿರಿ, ಗೋಪಾಲ ಗಾಯಿತ್ರಿ, ಅಮಿತ್ ನಾಡಕರ್ಣಿ, ಶಿವರಾಮ ಅಡಿ ಮತ್ತಿತರರ ಮೇಲೆ ಕಣ್ಣಿದೆಯಂತೆ. ಅವರನ್ನೂ ಈ ಪ್ರಕರಣದಲ್ಲಿ ಸಿಕ್ಕಿಸುವ ತಂತ್ರ ನಡೆದಿದೆ.

ಹೋರಾಟ ಸಮಿತಿಯ ನೇತೃತ್ವ ವಹಿಸಿದ್ದವರನ್ನು ಜೈಲಿಗೆ ಅಟ್ಟುವಲ್ಲಿ ಕಳ್ಳ ಸ್ವಾಮಿ ಕೊನೆಗೂ ಯಶಸ್ವಿಯಾಗಿ ಬೀಗುತ್ತಿದ್ದಾನೆ. ಉಳಿದ ನಾಯಕರನ್ನು ಬೆದರಿಸುವ ತಂತ್ರ ನಡೆಯುತ್ತಿದೆ. ಗೋಕರ್ಣ ಠಾಣೆಯ ಸಿಪಿಐ ರಘುಪತಿ ಮತ್ತು ಪ್ರಮೋದ್‌ರಾವ್ ಸ್ವಾಮಿಯ ಚೇಲಾಗಳಂತೆ ವರ್ತಿಸುತ್ತಿದ್ದು, ಈ ಸುಳ್ಳು ಕೇಸ್ ಹಾಕುವುದರಲ್ಲಿ ಅವರದ್ದೇ ಪ್ರಮುಖ ಪಾತ್ರ ಎಂಬುದರಲ್ಲಿ ಅನುಮಾನ ವಿಲ್ಲ. ಇವರಿಗೆ ಸಗಣಿ ಸ್ವಾಮಿಯ ಬಗ್ಗೆ ಅದೆಷ್ಟು ಭಕ್ತಿಯಿದೆಯೆಂದರೆ ಒಂಚೂರೂ ತನಿಖೆ ನಡೆಸದೇ, ಮಾಹಿತಿ ಸಂಗ್ರಹಿಸದೇ ಅವಸರವಸರವಾಗಿ 307 ಕೇಸ್ ಬುಕ್ ಮಾಡಿದ್ದಾರೆ.

ಹೋರಾಟದ ನೇತೃತ್ವ ವಹಿಸಿರುವವರ ಬೆನ್ನು ಬಿದ್ದು ಅವರು ಏನು ಮಾಡುತ್ತಾರೆ, ಯಾರೊಂದಿಗೆ ಮಾತನಾಡುತ್ತಾರೆ ಎಂಬ ಮಾಹಿತಿ ಸಂಗ್ರಹಿಸಿ ಅದಕ್ಕೆ ಪ್ರತಿತಂತ್ರ ರೂಪಿಸುವ ಕೆಲಸವನ್ನು ರಾಘವೇಶನ ಪುಂಡ ಶಿಷ್ಯರು ಈಗ ಮಾಡುತ್ತಿದ್ದಾರೆ.

ಈಗ ಹೇಳಿ ಇವನಿಗೆ ಸ್ವಾಮಿಯೆನ್ನಬೇಕೋ ಅಥವ ಬೇರೇನಾದರೂ ಹೆಸರಿಡಬೇಕೋ?


ಹೋರಾಟವನ್ನು ಒಡೆಯುವ ತಂತ್ರ!

ಗೋಕರ್ಣದಲ್ಲಿ ತನ್ನ ವಿರುದ್ಧ ಎದ್ದಿರುವ ಪ್ರತಿರೋಧವನ್ನು ದಮನಿಸುವುದಕ್ಕೆ ರಾಘವೇಶ ಎರಡು ಪ್ರಮುಖ ತಂತ್ರಗಳನ್ನು ಅನುಸರಿಸುತ್ತಿದ್ದಾನೆ. ಮೊದಲನೆಯದು ಈಗಾಗಲೇ ವಿವರಿಸಿರುವಂತೆ ಹೋರಾಟದ ಮುಂಚೂಣಿಯಲ್ಲಿರುವ ವ್ಯಕ್ತಿಗಳನ್ನು ಸುಳ್ಳು ಕೇಸ್‌ಗಳಡಿಯಲ್ಲಿ ಬುಕ್ ಮಾಡಿ ಜೈಲಿಗಟ್ಟುವುದು. ಇನ್ನು ಎರಡನೆಯದು ಹೋರಾಟನಿರತರಲ್ಲೇ ಬಿರುಕು ಮೂಡಿಸಿ ಒಳಗಿನಿಂದಲೇ ಹೋರಾಟ ಶಮನವಾಗುವಂತೆ ನೋಡಿಕೊಳ್ಳುವುದು. ಗೋಕರ್ಣದಲ್ಲಿಯೇ 'ಸಾವಿರ ಗೋದಾನ' ಎಂಬಂತಹ ಚಡ್ಡಿ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದು ಎರಡನೇ ತಂತ್ರಕ್ಕೆ ಉದಾಹರಣೆ.

ಈ ಎರಡನೇ ತಂತ್ರದ ಭಾಗವಾಗಿಯೇ, ಗೋಕರ್ಣದ ಸುತ್ತಮುತ್ತ ಅಲ್ಲಲ್ಲಿ ಸಭೆ ನಡೆಸಿ, ಯುವಕ ಸಂಘ, ದೇವಸ್ಥಾನಗಳ ಜೀರ್ಣೋದ್ಧಾರಕ್ಕೆಂದು ಸಾವಿರಾರು ರೂ.ಗಳನ್ನು 'ದಾನ' ಮಾಡಿ, ತಮ್ಮ ಪರವಾಗಿ ಅವರನ್ನೆಲ್ಲಾ ಒಲಿಸಿಕೊಳ್ಳುವ ಪ್ರಯತ್ನವನ್ನು ರಾಘವೇಶ ನಡೆಸಿದ್ದಾನೆ. ಅಂದರೆ, ಕೋಟ್ಯಂತರ ರೂಪಾಯಿಗಳನ್ನು ಲೂಟಿ ಹೊಡೆದು ಸಾವಿರಾರು ರೂಪಾಯಿಗಳನ್ನು ನಾಯಿಗೆ ಬಿಸ್ಕೆಟ್ ಹಾಕುವಂತೆ ಎಸೆದು ಸ್ಥಳೀಯ ಜನರನ್ನು ತನ್ನೆಡೆ ಸೆಳೆದುಕೊಳ್ಳುವ ಪ್ರಯತ್ನ ನಡೆಸಿದ್ದಾನೆ. ಹಿರೇಗುತ್ತಿಯಲ್ಲಿ ಈತ ಮಾಡಿದ ದಾನ ಇದಕ್ಕೊಂದು ಸ್ಪಷ್ಟ ಉದಾಹರಣೆ.

ರಾಘವೇಶನಿಂದ ಗೋಕರ್ಣದ ಜನರನ್ನು ಆ ಮಹಬಲೇಶ್ವರನೇ ಕಾಪಾಡಬೇಕು!

■ ಕುಮಾರ್ ಬುರಡಿಕಟ್ಟಿ



ದೇಶಪಾಂಡೆಗೂ ಡೀಲು!




ಈಗ ಜೈಲು ಸೇರಿರುವ ರಾಜುಅಡಿ ಜಿಲ್ಲಾ ಯುವ ಕಾಂಗ್ರೆಸ್‌ನ ಅಧ್ಯಕ್ಷ. ಅವರ ವಿರುದ್ಧ ಮಠ ದೌರ್ಜನ್ಯ ನಡೆಸುತ್ತಿದ್ದರೂ ಸತ್ತಂತಿರುವ ಜಿಲ್ಲಾ ಕಾಂಗ್ರೆಸ್ ನಾಯಕರು ಮಾತನಾಡುತ್ತಿಲ್ಲ. ಕೆಪಿಸಿಸಿ ಅಧ್ಯಕ್ಷರಾಗಿರುವ ಆರ್.ವಿ.ದೇಶಪಾಂಡೆ ತಮ್ಮ ನೇಮಕಾತಿ ಆದೇಶ ಹೊರಬೀಳುತ್ತಿದ್ದಂತೆಯೇ ಸ್ವಾಮೀಜಿ ಕಾಲಿಗೆ ಎರಗಿ ಬಿದ್ದಿದ್ದಾರೆ. ಗೋಕರ್ಣವನ್ನು ಮಠಕ್ಕೆ ಹಸ್ತಾಂತರಿಸಿದ್ದು ಒಳ್ಳೆಯದ್ದೇ ಆಗಿದೆ. ಇನ್ನಾದರೂ ಗೋಕರ್ಣ ಉದ್ಧಾರವಾಗಬಹುದು ಎಂದು ಭಾಷಣ ಕೂಡ ಬಿಗಿದಿದ್ದಾರೆ. ತಮ್ಮದೇ ಪಕ್ಷದ ಕಾರ್ಯಕರ್ತನೊಬ್ಬನನ್ನು ಇದೇ ರಾಘವೇಶ ಸುಳ್ಳು ಕೇಸು ಜಡಿದು ಜೈಲಿಗಟ್ಟಿದರೆ ಈ ದೇಶಪಾಂಡೆ ಅದೇ ರಾಘವೇಶನ ಕಾಲಿಗೆ ಬಿದ್ದು ಬರುತ್ತಾರೆಂದರೆ ಅವರು ನಿಷ್ಠರಾಗಿರುವುದು ಕಾಂಗ್ರೆಸ್‌ಗೋ ಅಥವ ರಾಘವೇಶನಿಗೋ ಎಂದು ಈಗ ಕಾರ್ಯಕರ್ತರೇ ಪ್ರಶ್ನಿಸುತ್ತಿದ್ದಾರೆ.

ಅಸಲಿಗೆ ಜಿಲ್ಲಾ ಕಾಂಗ್ರೆಸ್‌ನಲ್ಲಿ ಎರಡು ಬಣಗಳಿವೆ. ಒಂದಕ್ಕೆ ದೇಶಪಾಂಡೆ ನಾಯಕರಾದರೆ ಇನ್ನೊಂದಕ್ಕೆ ಮಾರ್ಗರೇಟ್ ಆಳ್ವ ನಾಯಕಿ. ದೇಶಪಾಂಡೆ ಬಣ ಕಳ್ಳಸ್ವಾಮಿಯ ಪರವಾಗಿದ್ದರೆ, ಮಾರ್ಗರೇಟ್ ಆಳ್ವ ವಿರೋಧವಾಗಿದ್ದು ಗೋಕರ್ಣ ಹಸ್ತಾಂತರವನ್ನು ವಿರೋಧಿಸುತ್ತಿದೆ. ಹೀಗಾಗಿ ಕಾಂಗ್ರೆಸ್ ನಾಯಕರು ದಿನಕ್ಕೊಂದು ರೀತಿಯ ಹೇಳಿಕೆ ನೀಡುತ್ತಾ ಪಕ್ಷದ ಕಾರ್ಯಕರ್ತರಲ್ಲಿ ಗೊಂದಲ ಮೂಡಿಸುತ್ತಿದ್ದಾರೆ. ಮಠ ಸಂಪೂರ್ಣವಾಗಿ ಬಿಜೆಪಿ ಕೆಲಸ ಮಾಡುತ್ತಿರುವಾಗ, ನಾವೇಕೆ ಅದನ್ನು ಬೆಂಬಲಿಸಬೇಕೆಂಬ ಕಾಂಗ್ರೆಸ್ಸಿಗರ ಪ್ರಶ್ನೆಗಾದರೂ ದೇಶಪಾಂಡೆ ಉತ್ತರ ನೀಡಬೇಕು.

ಇನ್ನು ಆರ್.ವಿ.ದೇಶಪಾಂಡೆ ತಮ್ಮನ್ನು ಭೇಟಿಯಾದಾಗ ಈ ಕಳ್ಳ ಸ್ವಾಮಿ ಅವರ ಬಳಿಯೂ ಡೀಲೊಂದನ್ನು ಕುದುರಿಸಿದ್ದಾನೆ. ಗೋಕರ್ಣದ ಸಿಆರ್‌ಝಡ್ ವಲಯದಲ್ಲಿ ರಾಘವೇಶ ಒಂದು ಕಟ್ಟಡ ಕಟ್ಟಬೇಕಿದೆ. ಆದರೆ, ಸಿಆರ್‌ಝಡ್‌ನವರು ಇದಕ್ಕೆ ಸುತಾರಾಂ ಒಪ್ಪುತ್ತಿಲ್ಲ. ಅವರನ್ನು ಒಪ್ಪಿಸುವ ಕೆಲಸವನ್ನು ಸ್ವಾಮಿಯು ದೇಶಪಾಂಡೆಗೆ ವಹಿಸಿದ್ದಾರೆ. ಕಾನೂನನ್ನು ಬದಿಗಿಟ್ಟಾದರೂ ಸರಿ ಸಿಆರ್‌ಝಡ್ ಕಟ್ಟಡ ನಿರ್ಮಾಣಕ್ಕೆ ಅನುಮತಿ ಸಿಗುವಂತೆ ಮಾಡುತ್ತೇನೆ ಎಂಬ ಭರವಸೆಯನ್ನು ದೇಶಪಾಂಡೆ ನೀಡಿ ಬಂದಿದ್ದಾರೆ. ಇದು ದೇಶಪಾಂಡೆ ಕೆಪಿಸಿಸಿ ಅಧ್ಯಕ್ಷರಾಗಿ ಮಾಡಿದ ಮೊದಲ ಕೆಲಸ. ಅದೂ ಕಾಂಗ್ರೆಸ್‌ನ ಬದ್ಧ ವಿರೋಧಿ ಬಿಜೆಪಿ ಪರವಾದ ಕೆಲಸ.

ಈ ಕಾಂಗ್ರೆಸ್ಸನ್ನು ಆ ಬಿಜೆಪಿಯೇ ರಕ್ಷಿಸಬೇಕು!

ಜಗ್ಗೇಶ್ ಕೇಡುಗಾಲಕ್ಕೆ ಡ್ರೈವರ್‌ನೇ ಕಂಟಕ



ಅವನನ್ನು ಕೋರ್ಟಿಗೆ ಎಳೀದೇ ಬಿಡ್ತೀನಾ? ನಾನ್ಯಾಕೆ ಅವನ ಮೇಲೆ ರೌಡಿಗಳನ್ನ ಬಿಡ್ಲಿ? ಬೇಕಿದ್ರೆ ನಾನೇ ಹಿಡಕ್ಕೊಂಡು ನಾಲ್ಕು ಬಾರಿಸ್ತೀನಿ. ಕುಡುಕ್ಕೊಂಡು ಕೆಲಸಕ್ಕೆ ಬರಬೇಡಾ ಅಂತ ಹೇಳಿದ್ದೇ ತಪ್ಪಾ? ಕುಡಿದದ್ದು ಎಂ.ಟಿ. ಕೃಷ್ಣಪ್ಪನ ಬಾರಲ್ಲಿ. ಅವನ ಕಡೆ ಹುಡುಗರು ಇರೋ ಜಾಗದಲ್ಲಿ ಹೋಗಿ ಕಂಠಮಟ್ಟ ಕುಡಿದರೆ ಇನ್ನೇನಾಗುತ್ತೆ?

ಇದು ತನ್ನ ಡ್ರೈವರ್ ಪದ್ಮನಾಭನ ಮೇಲೆ ತಾನೇ ರೌಡಿಗಳನ್ನು ಬಿಟ್ಟು ಹೊಡೆಸಿದ್ದೇನೆಂಬ ಆರೋಪಕ್ಕೆ ನಟ ಜಗ್ಗೇಶ್ ಬಾಯಿಂದ ಹೊರಬಿದ್ದ ಆಣಿಮುತ್ತು!

ಜಗ್ಗೇಶ್ ಹಿನ್ನೆಲೆ, ಆತನ ಪಕ್ಕಾ ಶ್ರೀರಾಂಪುರ ಶೈಲಿಯ ವ್ಯಕ್ತಿತ್ವ, ಯೌವನದ ವಯಸ್ಸಲ್ಲಿ ಆತ ಹುಟ್ಟ ಫಜೀತಿ ಇತ್ಯಾದಿಗಳನ್ನೆಲ್ಲ ಗಮನಿಸಿದವರಿಗೆ ತನ್ನ ಡ್ರೈವರ್‌ನ ಮೇಲೆ ಆತ ಪೋರ್ಕಿಗಳನ್ನು ಛೂಬಿಟ್ಟಿರಲಿಕ್ಕೂ ಸಾಕು ಎಂಬುದು ಖಚಿತವಾಗಿ ತೋಚುವುದು. ಆದರೆ ಡ್ರೈವರ್ ಪದ್ಮನಾಭನ ಒಂದಷ್ಟು ಜಾತಕ ಕೆದಕುತ್ತಿದ್ದಂತೆ ಚಿತ್ರವಿಚಿತ್ರ ಸಂಗತಿಗಳು ಬಯಲಾಗುತ್ತವೆ.

ಮೂಲತಃ ತಮಿಳುನಾಡಿನವನಾದ ಡ್ರೈವರ್ ಪದ್ಮನಾಭ ಜಗ್ಗೇಶ್ ತಮ್ಮ ಕೋಮಲ್‌ನ ಸಹಪಾಠಿಯಾಗಿದ್ದ. ತುಂಬಿದ ಯಡವಟ್ಟನಾಗಿ ಇದ್ದ ಮನೆಯನ್ನೂ ಕಳಕೊಂಡ. ಸಂಜೆಯಾದರೆ ಒಂದಲ್ಲಾ ಒಂದು ಬಾರ್ ಹೊಕ್ಕನೆಂದರೆ ಹೊರಬೀಳುವುದು ನಡುರಾತ್ರಿಗೇ. ಹಾಗಂತ ಈ ಒಂದೇ ಕಾರಣಕ್ಕೆ ಜಗ್ಗೇಶ್ ಸಿಟ್ಟಾ ಎಂದಲ್ಲ. ಕುಡಿದನೆಂದರೆ ಅಕ್ಕಪಕ್ಕದ ಟೇಬಲ್ಲಿನಲ್ಲಿ ಕೂತ ಯಾರ ಮೇಲಾದರೂ ಕ್ಯಾತೆ ತೆಗೆದು ಫೈಟಿಂಗ್ ಮಾಡುವುದು ಡ್ರೈವರ್ ಪದ್ದನ ಖಯಾಲಿ. ಇಲ್ಲಿಗೆ ತಿಂಗಳ ಹಿಂದೆ ಶ್ರೀರಾಂಪುರದ ಬಾರ್ ಒಂದರಲ್ಲಿ ಕುಡಿದು ಮುಖಾಮೂತಿ ಚಚ್ಚಿಸಿಕೊಂಡಿದ್ದ. ಇದಕ್ಕೂ ಎರಡು ತಿಂಗಳ ಹಿಂದೆ ಲಗ್ಗೆರೆಯ ತನ್ನ ಮನೆ ಪಕ್ಕದ ಬಾರ್ ಒಂದರಲ್ಲೂ ಒದೆ ತಿಂದಿದ್ದ. ಪದೇಪದೇ ಬಾರಲ್ಲಿ ಕುಡಿದು ಒದೆ ತಿನ್ನುವುದು ಆತನಿಗೆ ಹೊಸದೇನಲ್ಲ.

ಆದರೆ ಇದಕ್ಕಿಂತಲೂ ದೊಡ್ಡ ಅನಾಹುತವೊಂದಕ್ಕೆ ಪದ್ದ ವರ್ಷದ ಹಿಂದೆಯೇ ಕೈಯಿಟ್ಟಿದ್ದ. ನವ್ಯ (ಹೆಸರು ಬದಲಿಸಿದೆ) ಎನ್ನುವ ಹೇರ್ ಡ್ರೆಸರ್ ಒಬ್ಬಳನ್ನು ಶೂಟಿಂಗ್ ಮಧ್ಯೆಯೇ ಪಟಾಯಿಸಿ ಪದೇಪದೇ ಆಕೆಯ ಮನೆಗೆ ಹೋಗಿಬರುತ್ತಿದ್ದ. ಹೇಳಿಕೇಳಿ ಆಕೆ ಪೊಲೀಸನ ಹೆಂಡತಿ. ಇವನೊಬ್ಬನೇ ಅಲ್ಲದೇ ಶ್ರೀರಾಂಪುರದ ದೋಬಿ ಹುಡುಗನೊಬ್ಬನು ಮತ್ತು ಮಹಾಲಕ್ಷ್ಮಿ ಲೇಔಟಿನ ಮತ್ತೊಬ್ಬ ಹೆಂಗಸನ್ನು ಪದ್ದ ಓಡಾಡಿಸುತ್ತಿದ್ದ. ಜಗ್ಗೇಶ್ ಆತನನ್ನು ಕೆಲಸದಿಂದ ಕಿತ್ತಾಕುವುದಕ್ಕೂ ತಿಂಗಳು ಮೊದಲೇ ಪೊಲೀಸಪ್ಪನ ಪತ್ನಿಯ ಜೊತೆ ಕಾರಲ್ಲಿ ಕೋರಮಂಗಲ ಪೊಲೀಸರಿಗೆ ಸಿಕ್ಕಿಬಿದ್ದ!


ಇದು ಡ್ರೈವರ್ ಪದ್ದನ ಬುದ್ಧಿಯ ಸಂಕ್ಷಿಪ್ತ ರೂಪ. ಹಾಗೇ ಕೋರಮಂಗಲ ಪೊಲೀಸರಿಗೆ ಹೆಂಗಸೊಬ್ಬಳ ಜೊತೆ ಸಿಕ್ಕಿಬಿದ್ದ ಪದ್ದ ಅವತ್ತು ಬಚಾವಾಗಲು ಬಳಸಿದ್ದು ಧಣಿ ಜಗ್ಗೇಶ್ ಹೆಸರನ್ನೇ. ಇದು ಗೊತ್ತಾಗಿದ್ದೇ ಥಂಡಾ ಹೊಡೆದ ಜಗ್ಗೇಶ್ ಆತನನ್ನು ಬಿಡಿಸುವ ಗೊಡವೆಗೇ ಕೈಹಾಕಿರಲಿಲ್ಲ. ಆತನನ್ನು ದುಡ್ಡು ಕೊಟ್ಟು ಬಿಡಿಸಿ ತಂದದ್ದು ಸುಧೀಂದ್ರ ಅನ್ನೋ ಜಗ್ಗೇಶ್‌ರ ಮತ್ತೊಬ್ಬ ಸ್ನೇಹಿತ. ಬಹುಶಃ ಈ ಕಾರಣಕ್ಕೇ ಆತನ ಮೇಲೆ ದಾಳಿಯಾಯಿತಾ? ಅಥವಾ ಪುಟಿನಿತ್ಯ ಪೀಡಿಸುತ್ತಿದ್ದ ಪದ್ದನಿಂದ ಬಚಾವಾಗಲು ಪೊಲೀಸನ ಹೆಂಡತಿಯೇ ಸ್ಕೆಚ್ ಇಟ್ಟಿದ್ದಳಾ? ಅಥವಾ ಕುಡಿದು ಬಾರಲ್ಲಿ ಯಾರಿಂದಲೋ ಒದೆ ತಿಂದು ಕತೆ ಕಟ್ಟುತ್ತಿದ್ದಾನಾ?

ರಾಜಗೋಪಾಲನಗರ ಇನ್ಸ್‌ಪೆಕ್ಟರ್ ಚಂದ್ರು ಪ್ರಕಾರ ಕೊನೆಯ ಸಾಧ್ಯತೆಯೇ ಹೆಚ್ಚಂತೆ. ಹಾಗೊಮ್ಮೆ ಜಗ್ಗೇಶ್ ಮೇಲೆ ಗುಮಾನಿಯಿದ್ದಿದ್ದರೆ ದೂರು ಕೊಡುವಾಗಲೇ ಬಾಯಿಬಿಡಬೇಕಿತ್ತಲ್ಲವೆ? ಇದು ಪೊಲೀಸರ ಪ್ರಶ್ನೆ.

ಬಿಜೆಪಿಯಂಥ ಜನವಿರೋಧಿ ಧರ್ಮಾಂಧ ಪಕ್ಷಕ್ಕೆ ಸೇರುತ್ತಿದ್ದಂತೆ ಜಗ್ಗೇಶ್ ಪಾಲಿಗೆ ಹೀಗೆ ಕೇಡುಗಾಲ ವಕ್ಕರಿಸಿದೆಯೆಂಬುದಕ್ಕೆ ಇದಕ್ಕಿಂತ ಬೇಕೆ? ■

ಜ್ವಾಲಾಮುಖಿ ಸಿದ್ದರಾಮಯ್ಯ

■ಬಳಿದಾಳೆ ಪಾರ್ವತೀಶ



ಕರ್ನಾಟಕ ಕಾಂಗ್ರೆಸ್‌ನ ಏಕೈಕ ಮಾಸ್ ಲೀಡರ್ ಸಿದ್ದರಾಮಯ್ಯ ಪ್ರಕ್ಷುಬ್ಧ ಮನಃಸ್ಥಿತಿಯಲ್ಲಿದ್ದಾರೆ.

ಈಗ ಸಿಟ್ಟು, ಆಕ್ರೋಶಗಳಿಂದ ತುಂಬಿರುವ ಸಿದ್ದರಾಮಯ್ಯ ಸ್ಫೋಟಿಸಿದರೆ ಅದರಿಂದ ಕಾಂಗ್ರೆಸ್ ಚಿಂದಿಯಾಗುವುದು ಖಚಿತ. ಆಕಸ್ಮಾತ್ ಸಿದ್ದು ಸಿಟ್ಟು ಹತಾಶೆಗೆ ತಿರುಗಿ ಅವರು ನಿಷ್ಕ್ರಿಯರಾದರೇ ಆಗಲೂ ಹೊಡೆತ ಬೀಳುವುದು ಕಾಂಗ್ರೆಸ್‌ಗೇನೆ!

ಸಿದ್ದು ಜ್ವಾಲಾಮುಖಿಯಂತಾಗಿದ್ದಾರೆ ಎನ್ನಲು ಅವರ ಆಪ್ತ ಬಳಗದಿಂದ ಎದ್ದೇಳುತ್ತಿರುವ ಅಸಮಾಧಾನದ ಹೊಗೆಯೇ ಸಾಕ್ಷಿ. ಬಹುತೇಕ ಅಹಿಂದ ಬಳಗದ ಒಂದು ಬಲಿಷ್ಠ ಕಮಿಟೆಡ್ ಗುಂಪು ಸಿದ್ದರಾಮಯ್ಯ ಜೊತೆಗಿದೆ. ಕಾಂಗ್ರೆಸ್ ಹೈಕಮಾಂಡ್ ಕಳೆದ ಎರಡೂವರೆ ವರ್ಷಗಳಿಂದ ಸಿದ್ದರಾಮಯ್ಯನವರನ್ನು ಕಡೆಗಣಿಸುತ್ತಲೇ ಬರುತ್ತಿರುವುದನ್ನು ನೋಡಿನೋಡಿ ಕುದ್ದು ಹೋಗಿರುವ ಈ ಬಣ ಈಗ ಕಾಂಗ್ರೆಸ್ ವಿರುದ್ಧವೇ ನೇರ ಯುದ್ಧ ಘೋಷಣೆಗೆ ಸಜ್ಜಾಗುತ್ತಿದೆ.


ಅದರ ಮೊದಲ ಹೆಜ್ಜೆಯಾಗಿ ಬರುವ ನವೆಂಬರ್ ಕೊನೆಯ ವಾರದಲ್ಲಿ 5 ಲಕ್ಷ ಜನರ ಬೃಹತ್ ಅಹಿಂದ ಸಮಾವೇಶವೊಂದನ್ನು ದಾವಣಗೆರೆಯಲ್ಲಿ ನಡೆಸಲು ಇವರು ತಯಾರಾಗುತ್ತಿದ್ದಾರೆ.

ಈ ರ್‍ಯಾಲಿಗೆ ಆಂಧ್ರದ ಸೂಪರ್ ಸ್ಟಾರ್, ಹೊಸ 'ಪ್ರಜಾರಾಜ್ಯಂ' ಪಕ್ಷದ ನಾಯಕ ಚಿರಂಜೀವಿ, ಆರ್‌ಜೆಡಿ ಅಧ್ಯಕ್ಷ ಲಾಲೂ, ಮಹಾರಾಷ್ಟ್ರದ ನಾಯಕ ಶರದ್ ಪವಾರ್‌ರನ್ನು ಕರೆಸುವ ಪ್ರಯತ್ನಗಳು ನಡೆದಿವೆ.

ಈ ಬೆಳವಣಿಗೆಗಳನ್ನು ಗಮನಿಸಿದರೆ ಇದರಿಂದ ಕಾಂಗ್ರೆಸ್‌ಗಂತೂ ಒಳ್ಳೆಯ ದಾಗುವುದಿಲ್ಲ ಎನ್ನಬಹುದು. ಆದರೆ ಇದಕ್ಕೆ ಸಿದ್ದರಾಮಯ್ಯ ಹೊಣೆಗಾರರಲ್ಲ, ಏಕೆಂದರೆ 2006 ರ ಜುಲೈ 23 ರಂದು ತಮ್ಮ ಎಬಿಪಿಜೆಡಿ ಪಕ್ಷವನ್ನು ಕಾಂಗ್ರೆಸ್‌ನಲ್ಲಿ ವಿಲೀನಗೊಳಿಸಿ ಕೆಲ ಉತ್ತಮ ಲೀಡರ್‌ಗಳೊಂದಿಗೆ ಸಿದ್ದು ಕಾಂಗ್ರೆಸ್ ಸೇರಿಕೊಂಡರಾದರೂ ಕಳೆದ 27 ತಿಂಗಳುಗಳಿಂದಲೂ ಪಕ್ಷದಲ್ಲಿ ಅವರನ್ನು ನಿರ್ಲಕ್ಷಿಸುತ್ತಲೇ ಬರಲಾಗಿದೆ.

'ನೀವು ಕೆಪಿಸಿಸಿ ಪ್ರೆಸಿಡೆಂಟಾಗಿ' ಅಂತ ಸ್ವತಃ ಸೋನಿಯಾ ಗಾಂಧಿಯೇ ಕರೆಸಿ ಹೇಳಿದ್ದರಾದರೂ ಆ ಜವಾಬ್ದಾರಿಯ ಹುದ್ದೆ ಕೊನೆಗೂ ಸಿದ್ದರಾಮಯ್ಯಗೆ ಸಿಗಲಿಲ್ಲ, ನಂತರ ಪ್ರತಿಪಕ್ಷ ನಾಯಕ ಸ್ಥಾನವೂ ಸಿದ್ದು ಕೈತಪ್ಪಿತು. ಈಗ ಸರಿಯಾಗಿ ಹೇಳಬೇಕೆಂದರೆ ಸಿದ್ದರಾಮಯ್ಯರಂತ ದೊಡ್ಡ ಲೀಡರ್‌ಗೆ ಅವರ ಲೆವೆಲ್‌ಗೆ ಹೊಂದುವ ಯಾವ ಸ್ಥಾನಗಳೂ ಕರ್ನಾಟಕ ಕಾಂಗ್ರೆಸ್‌ನಲ್ಲಿ ಖಾಲಿ ಉಳಿದಿಲ್ಲ, ಈ ಸ್ಥಾನಮಾನದ ವಿಚಾರ ಬದಿಗಿಟ್ಟು ಹೇಳಬೇಕೆಂದರೂ ಸಿದ್ದು ಬಗ್ಗೆ ರಾಜ್ಯ ಹಾಗೂ ಹೈಕಮಾಂಡ್‌ನ ಕಾಂಗ್ರೆಸ್ ನಾಯಕರು ಬೇಕೆಂತಲೇ ನಿರ್ಲಕ್ಷ್ಯ ಹಾಗೂ ಉದಾಸೀನ ತೋರಿರುವುದಕ್ಕೆ ನೂರೆಂಟು ಸಾಕ್ಷಿಗಳಿವೆ. ಈಗಿನ ಪ್ರಶ್ನೆ ಏನೆಂದರೆ ಕಾಂಗ್ರೆಸ್ ಯಾಕೆ ಹೀಗೆ ತನ್ನ ಕಾಲಮೇಲೆ ತಾನೇ ಕಲ್ಲು ಎತ್ತಿ ಹಾಕಿಕೊಳ್ಳುತ್ತಿದೆ ಎಂಬುದು?

ಕಾಂಗ್ರೆಸ್‌ಗಳ ಥರ್ಡ್‌ಕ್ಲಾಸ್ ರಾಜಕೀಯ





ಕಾಂಗ್ರೆಸ್ ವರ್ಕಿಂಗ್ ಪ್ರೆಸಿಡೆಂಟಾಗಿ ಡಿ.ಕೆ. ಶಿವಕುಮಾರ್ ನೇಮಕವಾಗಿದ್ದರ ಬಗ್ಗೆ ಪಕ್ಷದೊಳಗೆ ಬಹುತೇಕರಿಗೆ ಬೇಸರವಿಲ್ಲ, ಆದರೆ ಹುಟ್ಟಾ ಭ್ರಷ್ಟ, ಖದೀಮ ಗುಣದ, ಅರೆಬೆಡ್ಡಿ ಆರ್.ವಿ. ದೇಶಪಾಂಡೆಯನ್ನು ಕೆಪಿಸಿಸಿ ಅಧ್ಯಕ್ಷರಾಗಿಸಿದ ಹೈಕಮಾಂಡಿಗೆ ಸಿದ್ದು ಯಾಕೆ ಬೇಡವಾದರೆಂಬುದು ಯಾರಿಗೂ ಅರ್ಥವಾಗುತ್ತಿಲ್ಲ.

ಜನಬೆಂಬಲ, ಪಕ್ಷ ಕಟ್ಟುವ ತಾಕತ್ತು, ಸೆಕ್ಯುಲರ್ ಇಮೇಜ್... ಈ ಯಾವ ಮಾನದಂಡವಿಟ್ಟು ನೋಡಿದರೂ ದೇಶಪಾಂಡೆ ಸಿದ್ದರಾಮಯ್ಯನವರ ಕಾಲ ಬುಡಕ್ಕೂ ಬರಲಾರರು.

"ಕೆಪಿಸಿಸಿ ಅಧ್ಯಕ್ಷರಾಗುವಂತೆ ಸಿದ್ದರಾಮಯ್ಯನವರನ್ನು ಎರಡೆರಡು ಸಾರಿ ಕೇಳಿಕೊಂಡರೂ ಅವರೇ ಒಪ್ಪಲಿಲ್ಲ, ಜೊತೆಗೆ ದೇಶಪಾಂಡೇನ ಮಾಡಿದರೆ ನನ್ನ ಆಕ್ಷೇಪವಿಲ್ಲ ಅಂತ ಅವರೇ ಹೇಳಿದರು" ಎಂದು ಹೈಕಮಾಂಡಿಗೆ ಹತ್ತಿರವಿರುವ ಕೆಲ ಕಾಂಗ್ರೆಸ್‌ಗಳೇ ಈಗ ಹೇಳುತ್ತಿದ್ದಾರಾದರೂ ವಿಷಯ ಅಷ್ಟು ಸರಳವಾಗಿಲ್ಲ.

ಕೆಪಿಸಿಸಿ ಅಧ್ಯಕ್ಷಗಾದಿಗೆ ಸಿದ್ದು ಹೆಸರು ಕೇಳಿಬರುತ್ತಿದ್ದಂತೆಯೇ ತಲೆ ಕೆಟ್ಟಂತಾಗಿದ ಧರಂಸಿಂಗ್, ಖರ್ಗೆ ಮತ್ತಿತರರು ದೆಹಲಿಗೆ ಓಡಿಹೋಗಿ ಅಡ್ಡಗಾಲಾಕಿದ್ದೂ ನಿಜ. 'ಚಾಮುಂಡೇಶ್ವರಿ ಉಪಚುನಾವಣೆ[...] ಸಿದ್ದು ಬರೀ ಇನ್ನೂರು ಓಟಿನಿಂದ ಗೆದ್ದಿದ್ದಾರೆ. ಕಾಂಗ್ರೆಸ್ ಬೆಂಬ[...] ಸಿಕ್ಕರೂ ಅವರ ಶಕ್ತಿ ಇಷ್ಟೇನೆ, ಜೊತೆಗೆ ಅವರು ಪಾರ್ಟಿಗೆ ಹೊಸಬ[...] ಮೂಲ ಕಾಂಗ್ರೆಸ್ಸಿಗರನ್ನು ನಿರ್ಲಕ್ಷಿಸಕೂಡದೆಂದು' ಚಾಡಿ ಹೇಳಿಬಂ[...] ಈ ನಾಯಕರು ಅದರಿಂದ ಯಾವ ಪುರುಷಾರ್ಥ ಸಾಧಿಸಿದರು[...] ಹೇಳುವವರ್‍ಯಾರು?

ಇಷ್ಟು ಸಾಲದೆಂಬಂತೆ 'ಸಿದ್ದು ಗೋವಾದಲ್ಲಿ ರಹಸ್ಯ ಸ[...] ಮಾಡಿದ್ದಾರೆ. ಚರ್ಚ್‌ಗಳ ಮೇಲೆ ದಾಳಿ ಆಗುತ್ತಿದ್ದಾಗ ಅದರ ಬ[...] ಮಾತಾಡದೆ ಕುರುಬ ಅಧಿಕಾರಿಗಳ ಜಾತಿ ಪತ್ರ ದುರುಪಯೋ[...] ಪ್ರಕರಣವೇ ದೊಡ್ಡದೆಂಬಂತೆ ಹೇಳಿಕೆ ಕೊಡುತ್ತಿದ್ದಾರೆ. ಇದು ನಾಯಕ[...] ಲಕ್ಷಣ ಅಲ್ಲ' ಎಂಬ ದೂರುಗಳು ಹೈಕಮಾಂಡಿಗೆ ತಲುಪಿದ್ದ[...] ಆಗ ಇವೆಲ್ಲ ಕ್ಷುಲ್ಲಕ ವಿಚಾರ ಅಂತಲೂ ಹೇಳದೆ ಸಿದ್ದು ಮುಗ[...] ಆಗಿ ಸುಮ್ಮನಾಗಿದ್ದರು. ಆದರೆ ಕಾಂಗ್ರೆಸ್ ಪಕ್ಷದಲ್ಲಿ ಚಾಡಿ ಸಂಸ[...] ಮೂಲಭೂತ ಗುಣ ಅಲ್ಲವೆ? ಹಾಗಾಗಿ ಸಿದ್ದು ಬಗ್ಗೆ ಪೃಥ್ವಿರಾ[...] ಚೌಹಾಣ್, ಅಹ್ಮದ್ ಪಟೇಲ್ ಅನುಮಾನ ಬೆಳೆಸಿಕೊಂಡರು. [...] ನಡುವೆ ಇದೇ ಚೌಹಾಣ್ ಸಿದ್ದು ಮನೆಗೇ ಬಂದು ಕೆ[...]

▶▶▶

ಅರೇ ಚೆಡ್ಡಿ ದೇಶಪಾಂಡೆ



ಕೋಮುವಾದಿ ರವಿಶಂಕರ್‌ನೊಂದಿಗೆ ದೇಶಪಾಂಡೆ

ಕೆಪಿಸಿಸಿ ಅಧ್ಯಕ್ಷನಾದ ಮೇಲೆ ಈ ದೇಶಪಾಂಡೆ ಯಾರ್‍ಯಾರನ್ನು ಭೇಟಿ ಮಾಡಿದ್ದಾರೆ ಎಂದು ಗಮನಿಸಿದರೆ ಈತನೇನು ಕಾಂಗ್ರೆಸ್ ನಾಯಕನಾ ಇಲ್ಲಾ ಬಿಜೆಪಿ ಕಾರ್ಯಕರ್ತನಾ ಎಂಬ ಅನುಮಾನ ಬರುವುದು ಗ್ಯಾರಂಟಿ.

ಬಿಜೆಪಿಗಳ ಅಖಂಡ ಬೆಂಬಲಿಗ ರಾಘವೇಶ್ವರ ಸ್ವಾಮಿಯ ದೇವಸ್ಥಾನಗಳ ಕಳ್ಳತನ, ಕೋಮುವಾದಿ ನಿಲುವು ಗೊತ್ತಿದ್ದರೂ ಆತನ ಭೇಟಿ ಮಾಡಿ ಹೋಗಿ ಬಂದಿದ್ದಾರೆ ದೇಶಪಾಂಡೆ. ನಂತರ ಹುಬ್ಬಳ್ಳಿಗೆ ಹೋಗಿ ಗಂಗೂಬಾಯಿ ಹಾನಗಲ್ ಆಶೀರ್ವಾದ ಪಡೆದು ಬಂದಿದ್ದೂ ಆಯಿತು. ಈ ವಿಶ್ವ ಮನಸ್ಸಿನ ಗಾಯಕಿ ಹುಬ್ಬಳ್ಳಿ ಈದ್ಗಾ ಮೈದಾನ ವಿವಾದದಲ್ಲಿ



ಉಮಾಭಾರತಿಯಂತಹ ಸಮಾಜದ್ರೋಹಿಗಳಿಗೆ ಆಶ್ರಯ ನೀಡಿ ದೊಂಬಿಗೆ ಕಾರಣವಾಗಿದ್ದಾಕೆ. ಮೇಲಾಗಿ ಈಗಲೂ ಚೆಡ್ಡಿಗಳ ಬೆಂಬಲಿಗರು. ಅಂತ ಚಲ್ಲರೆ ವ್ಯಕ್ತಿ ಭೇಟಿಗೆ ದೇಶಪಾಂಡೆ ಹೋಗಬೇಕಿರಲಿಲ್ಲ.

ತೀರಾ ಇತ್ತೀಚೆಗೆ ಆರ್ಟ್ ಆಫ್ ಲಿವಿಂಗ್‌ನ ವಂಚಕ ರವಿಶಂಕರ್‌ನನ್ನು ಕಂಡುಬಂದಿದ್ದಾರೆ ದೇಶಪಾಂಡೆ.

ಕಾಂಗ್ರೆಸ್ ಪಕ್ಷವನ್ನು ಬಲಪಡಿಸುವುದಕ್ಕೂ ಈ ಮಹಾಬ್ರಾಹ್ಮಣರ ಭೇಟಿಗೂ ಯಾವ ಸಂಬಂಧ?

ದೇಶಪಾಂಡೆ ಎಂಥ ಅವಿವೇಕಿಯೆಂದರೆ ಕಾಂಗ್ರೆಸ್‌ನಂತಹ ದೊಡ್ಡ ಪಕ್ಷದ ನಾಯಕನಾಗಿ ತನ್ನ ಜವಾಬ್ದಾರಿ ಏನೆಂಬುದೇ ಗೊತ್ತಿಲ್ಲ. ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರ ಬಗ್ಗೆ, ವಿದ್ಯುತ್ ಕೊರತೆ ಬಗ್ಗೆ, ಯಡ್ಡಿ ಸರ್ಕಾರದ ಭ್ರಷ್ಟಾಚಾರ, ವರ್ಗಾ ದಂಧೆಗಳ ಬಗ್ಗೆ ಮಾತನಾಡುವ ಬದಲಾಗಿ ವಂಚಕ ಸ್ವಾಮೀಜಿಗಳನ್ನು ಹುಡುಕಿಕೊಂಡು ಆರ್‌ಎಸ್‌ಎಸ್ ಹೈದನಂತೆ ಊರೂರು ಅಲೆಯುತ್ತಿದ್ದಾರೆ. ಸಂಘ ಪರಿವಾರಿಗಳಿಂದ ದಾಳಿಗೊಳಗಾದ ಮುಸ್ಲಿಮರು, ಕ್ರಿಶ್ಚಿಯನ್ನರ ಭೇಟಿ ಈತನಿಗೆ ಯಾಕೆ ಮುಖ್ಯ ಅನ್ನಿಸಲಿಲ್ಲ?

ಈ ಅರೇ ಕೋಮುವಾದಿ ದೇಶಪಾಂಡೆಯನ್ನು ನಂಬಿಕೊಂಡರೆ ಕಾಂಗ್ರೆಸ್ ಉದ್ಧಾರವಾಗುತ್ತಾ?


ಸಿದ್ದು ಬೆನ್ನ ಹಿಂದೆ ಇವರಿದ್ದಾರೆ

ಸಿದ್ದರಾಮಯ್ಯ ಮತ್ತವರ ಬೆಂಬಲಿಗರು ರೋಸಿ ಹೋಗುವಂತೆ ವರ್ತಿಸುತ್ತಾ ಅವರನ್ನು ತುಳಿದು ಮೂಲೆಗುಂಪು ಮಾಡುವ ಯತ್ನದಲ್ಲಿರುವ ರಾಜ್ಯ ಕಾಂಗ್ರೆಸ್ ನಾಯಕರ ಬುಡಕ್ಕೇ ಈಗ ಬಿಸಿನೀರು ಕಾಯಿಸುವ ತಯಾರಿ ನಡೆದಿದೆ.



ಗೋಪಾಲ್

ದಾವಣಗೆರೆಯ ಅಹಿಂದ ಸಮಾವೇಶ ಅವರ ಮುನ್ನುಡಿಯಾಗಲಿದೆ. ಸತೀಶ್ ಜಾರಕಿಹೊಳಿ, ಬಿ.ಎಸ್. ಶಿವಣ್ಣ ಶಿರಾ ಮಾಜಿ ಶಾಸಕ ಮೂಲಿಂಗಯ್ಯ, ಎಚ್.ಸಿ. ಮಹಾದೇವಪ್ಪ, ಮುಕುಡಪ್ಪ ಮತ್ತಿತರ ಪಡೆ ಇದಕ್ಕೆ ಸಜ್ಜಾಗುತ್ತಿದೆ. ಇವರ ಜೊತೆಗೆ ರಾಜ್ಯ ಗಂಗಾ ಮತಸ್ಥರ ಸಂಘಟನೆ ಅಧ್ಯಕ್ಷ ಜೆ. ಶ್ರೀನಿವಾಸ್ ಹಾಗೂ ಮಡಿವಾಳರ ಸಂಘದ ಜಿ.ಡಿ. ಗೋಪಾಲ್ ದಾವಣಗೆರೆಯ ಸೈಪುಲ್ಲಾ ಸಹ ಕೈಗೂಡಿಸುತ್ತಿದ್ದಾರೆ.




ಶ್ರೀನಿವಾಸ್

ಅಸೆಂಬ್ಲಿ ಎಲೆಕ್ಷನ್ ನಡೆದಾಗ ಧರಂಸಿಂಗ್-ಖರ್ಗೆ ಜೋಡಿ ಪಾರ್ಟಿ ಟಿಕೆಟ್‌ಗಳನ್ನೇ ಮಾರಿ ಹಣ ಮಾಡಿಕೊಂಡಿದ್ದಾರೆ. ಸಿದ್ದು ಮೂಲ ಕಾಂಗ್ರೆಸ್ಸಿಗರಲ್ಲ ಎಂದು ಮೂಲೆಗುಂಪು ಮಾಡುತ್ತಿದ್ದಾರೆಂಬ ಅಸಹನೆ ಇವರದು.

ಆ ಆರೋಪದಲ್ಲಿ ಸುಳ್ಳೇನಿದೆ ಹೇಳಿ?

ಖರ್ಗೆಯನ್ನು ಸಿಎಲ್‌ಪಿ ಲೀಡರ್ ಮಾಡಿ, ದೇಶಪಾಂಡೆಗೆ ಕೆಪಿಸಿಸಿ ಚೇರ್ಮನ್‌ಗಿರಿ ನೀಡಿ, ಉಗ್ರಪ್ಪನಿಗೆ ಮೇಲ್ಮನೆ ವಿರೋಧಿ ನಾಯಕ ಪಟ್ಟ ನೀಡಿ, ವೀರಣ್ಣ ಮತ್ತಿಕಟ್ಟಿಗೆ ಮೇಲ್ಮನೆ ಸಭಾಪತಿ ಸ್ಥಾನ ಕೊಡಿಸಿ ಅನಿಲ್ ಲಾಡ್‌ಗೆ ರಾಜ್ಯಸಭಾ ಸದಸ್ಯತ್ವ ಸ್ಥಾನ ಮಾರಿಕೊಂಡು, ವೃದ್ಧ ಎಂ.ವಿ. ರಾಜಶೇಖರನ್‌ಗೆ ಎಂಎಲ್‌ಸಿ ಸ್ಥಾನ ಕೊಡಿಸಿ ಪುಣ್ಯ ಕಟ್ಟಿಕೊಂಡಿರುವ ರಾಜ್ಯ ಕಾಂಗ್ರೆಸ್ ನಾಯಕರಿಗೆ ಒಬ್ಬ ಸಿದ್ದರಾಮಯ್ಯ, ಕೋದಂಡರಾಮಯ್ಯ ತರದ ನೈಜ ತೂಕದ ನಾಯಕರಿಗೆ ಯಾಕೆ ಸೂಕ್ತ ಸ್ಥಾನಮಾನ ನೀಡಲಾಗಲಿಲ್ಲ?

ಈ ಪ್ರಶ್ನೆಗೆ ಉತ್ತರ ಕೊಡುವವರ್‍ಯಾರು.




ಶಿವಣ್ಣ

▶▶

...ಅಧ್ಯಕ್ಷಗಿರಿ ಬಗ್ಗೆ ಮಾತಾಡಿದಾಗ ಸಿದ್ದರಾಮಯ್ಯ ಹಿಂದೆಮುಂದೆ ...ಯೋಚಿಸದೆ 'ನನಗೆ ಬೇಡ' ಅಂದರೆಂಬ ಸುದ್ದಿಯೂ ಇದೆ. ಈಗ ...ಹುದ್ದೆ ಒಪ್ಪಿಕೊಂಡರೆ ಮುಂದೆ ಬರಲಿರುವ ನಗರಪಾಲಿಕೆ, ...ಪಾರ್ಲಿಮೆಂಟ್ ಹಾಗೂ ವಿಧಾನಸಭಾ ಉಪಚುನಾವಣೆ ಜವಾಬ್ದಾರಿ, ...ಹಣ ಸಂಗ್ರಹದ ಹೊಣೆ ತಾನು ನಿಭಾಯಿಸಲಾರೆ ಎಂದು ಆಪ್ತರ ...ಬಳಿ ಹೇಳಿಕೊಂಡರೆಂಬ ಸುದ್ದಿಗಳೂ ಇವೆ. ಒಟ್ಟಿನಲ್ಲಿ ನಿಜವೊ ...ಸುಳ್ಳೋ ಇವೆಲ್ಲಾ ಅಂಶಗಳು ಸೇರಿ ಸಿದ್ದರಾಮಯ್ಯಗೆ ಕೆಪಿಸಿಸಿ ...ಹುದ್ದೆ ತಪ್ಪಿಸಿದವು.


ಈ ನಡುವೆ ದೇಶಪಾಂಡೆ ಪರವಾಗಿ ಪ್ರಫುಲ್ ಪಟೇಲ್ ...ಮಾತ್ರವಲ್ಲದೆ ರಿಲಿಯನ್ಸ್‌ನ ಅಂಬಾನಿಗಳು ಮತ್ತಿತರ ದೊಡ್ಡ ...ಉದ್ಯಮಪತಿಗಳೂ ಲಾಬಿ ನಡೆಸಿದ್ದರಂತೆ. ಅಹ್ಮದ್ ಪಟೇಲ್ ಹಾಗೂ ...ಚವಾಣ್‌ಗೂ ಈ ದೇಶಪಾಂಡೆ ಭಾರಿ ಹಣ ನೀಡಿ ಅಧ್ಯಕ್ಷಗಿರಿ ...ಗಿಟ್ಟಿಸಿದನೆಂದೂ ಹೇಳಲಾಗುತ್ತಿದೆ.



ಕೋದಂಡರಾಮಯ್ಯ

ಹೀಗೆ ಪರಿಸ್ಥಿತಿ ಕೈಮೀರಿದ ಮೇಲೆ ಸಿದ್ದು ಕೆಪಿಸಿಸಿ ಅಧ್ಯಕ್ಷಗಿರಿ ...ಗ್ಗೆ ಮನಸ್ಸು ಬದಲಾಯಿಸಿ 'ಆಗಲಿ' ಎಂದುಕೊಂಡರಾದರೂ ...ಷ್ಟರಲ್ಲಿ ಪರಿಸ್ಥಿತಿ ಅವರ ನಿಯಂತ್ರಣ ಮೀರಿತ್ತು. ನಂತರ ವಿರೋಧ ...ಪಕ್ಷದ ನಾಯಕನ ಸ್ಥಾನಕ್ಕೆ ತಾವೂ ಆಕಾಂಕ್ಷಿ ಎಂದು ಸಿದ್ದು ...ಬಹಿರಂಗವಾಗೇ ಹೇಳಿಕೊಂಡರಾದರೂ ಅದಕ್ಕೆ ತಕ್ಕಷ್ಟು ಶಾಸಕರ ...ಬೆಂಬಲ ಸಿಗದೇ ಹೋಯಿತು. ಖರ್ಗೆಗೆ ಆ ಸ್ಥಾನ ದಕ್ಕಿತು.

ಸರಿಯಾದ ಸಮಯದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳದೆ ...ಸಿದ್ದರಾಮಯ್ಯ ಮಾಡಿದ ಸ್ವಯಂಕೃತ ತಪ್ಪುಗಳಿವು.



ಚಿರಂಜೀವಿ

ಇಷ್ಟಾದ ಮೇಲೂ ಕಾಂಗ್ರೆಸ್‌ನ ಇವತ್ತಿನ ವಾಸ್ತವ ಪರಿಸ್ಥಿತಿ ...ಏನೆಂದರೆ ಅವರಲ್ಲಿ ಈಗಿರುವ ಯಾವ ನಾಯಕರೂ ಮಾಸ್ ...ಲೀಡರ್‌ಗಳಲ್ಲ, ಹಗರಣಗಳಿಂದ ಹೊರತಾದ ವರಲ್ಲ, ಒಂದು ಇಮೇಜ್, vision, ಪ್ರಭಾವವಿರುವವರಿಲ್ಲ. ಮತ್ತೊಂದೆಡೆ ಸಿದ್ದ ರಾಮಯ್ಯಗೆ ಇವೆಲ್ಲಾ ಕ್ವಾಲಿಟಿಗಳಿದ್ದವು. ಆದರೂ ಅವರು ರಾಜ್ಯ ಕಾಂಗ್ರೆಸ್ಸಿಗರಿಗೆ ಬೇಡವಾಗಿದ್ದು ಈ ಅವಿವೇಕಿಗಳ ಸಣ್ಣತನ, ಸ್ವಾರ್ಥ ಹಾಗೂ ದೂರದೃಷ್ಟಿಯ ಕೊರತೆಗಳಿಂದ.

ಸಿದ್ದರಾಮಯ್ಯ ಈ ಎಲ್ಲಾ ಕಹಿ ಘಟನೆ ಗಳಿಂದ ರೋಸಿಹೋಗಿದ್ದಾರಾದರೂ ಈ ತಕ್ಷಣಕ್ಕೆ ಬಹಿರಂಗವಾಗಿ ಏನನ್ನೂ ಹೇಳುತ್ತಿಲ್ಲ. 'ಪಾರ್ಲಿಮೆಂಟ್ ಎಲೆಕ್ಷನ್ ಆಗುವವರೆಗೂ ಸುಮ್ಮನಿರಿ. ನಂತರ ಏನಾದರೂ ಮಾಡೋಣ' ಎಂದು ಹೈಕಮಾಂಡ್ ಸೂಚಿಸಿದೆ ಎಂಬ ಮಾತು ಕೇಳಿಬರುತ್ತಿದೆಯಾದರೂ, ಸಿದ್ದು ಬೆಂಬಲಿಗರು ಅದನ್ನು ನಂಬಲು ಈಗ ತಯಾರಿಲ್ಲ. ನವೆಂಬರ್ ಕೊನೆಯ ವಾರ ದಾವಣಗೆರೆಯಲ್ಲಿ ಅಹಿಂದ ಸಮಾವೇಶ ನಡೆಸಲೇಬೇಕೆಂದು ಬೆಂಬಲಿಗರ ಹಠ.

ಒಂದು ವೇಳೆ ಈ ಸಮಾವೇಶ ನಡೆದದ್ದೇ ಆದರೆ ಅದು ಮುಂದೆ ಹೊಸ ರಾಜಕೀಯ ಪಕ್ಷವೊಂದರ ಉದಯಕ್ಕೆ ನಾಂದಿ ಹಾಡುವುದು ಖಚಿತ.

ಈ ಬಗ್ಗೆ ಸುಳಿವು ಹಿಡಿದ ದೇಶಪಾಂಡೆ ಮೊನ್ನೆ ದೆಹಲಿಗೆ ಹೋಗಿ ಸಿದ್ದು ಬಗ್ಗೆ ಸೋನಿಯಾ ಹತ್ತಿರ ಚರ್ಚಿಸಿ ಬಂದಿದ್ದಾರೆ. ಅಕ್ಟೋಬರ್ ಮೂರನೇ ವಾರದಲ್ಲಿ ಸಿದ್ದು-ಸೋನಿಯಾ ಮತ್ತೆ ಭೇಟಿಯಾದರೂ ಆಶ್ಚರ್ಯವಿಲ್ಲ.

ಈ ಭೇಟಿ ನಡೆಯದೇ ಹೋದರೆ ಸಿದ್ದು ಎಂಬ ಜ್ವಾಲಾಮುಖಿ ಸ್ಫೋಟಿಸುವುದು ಖಚಿತ! ■

...ಮೂಲ ಕಾಂಗ್ರೆಸ್ಸಂತೆ... ಮೂಲ ಕಾಂಗ್ರೆಸ್!

ಕಾರಣ ಏನೇ ಇರಬಹುದು ಕಳೆದ ಒಂದೆರಡು ವರ್ಷಗಳಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್‌ಗೆ ಅನ್ಯ ಪಕ್ಷಗಳಿಂದ ಹಲವಾರು ನಾಯಕರು, ಕಾರ್ಯಕರ್ತರು ಬಂದು ಸೇರಿಕೊಂಡಿದ್ದಾರೆ.

ಅಂತವರಿಗೆ ಕಾಂಗ್ರೆಸ್ ಯಾವ ರೀತಿ ಆತಿಥ್ಯ ನೀಡಿದೆ, ಬಿಜೆಪಿಗಳು ಹೇಗೆ ಉಪಚರಿಸಿದ್ದಾರೆಂಬುದನ್ನು ಒಮ್ಮೆ ಹೋಲಿಸಿ ನೋಡಿ.

ದೊಡ್ಡಬಳ್ಳಾಪುರದ ಕಾಂಗ್ರೆಸ್ ಶಾಸಕ ನರಸಿಂಹಸ್ವಾಮಿ ಬಿಜೆಪಿಗೆ ಹೋದ ತಕ್ಷಣ ಅವರನ್ನು ಸ್ಲಂ ಬೋರ್ಡ್ ಚೇರ್ಮನ್ ಮಾಡಲಾಯಿತು. ಜೆಡಿಎಸ್ ಬಿಟ್ಟು ಬಂದ ಬಾಲಚಂದ್ರ ಜಾರಕಿಹೊಳಿ, ಉಮೇಶ್ ಕತ್ತಿ, ಶಿವನೇಗೌಡ ನಾಯಕ್‌ರಿಗೆ ಕೂಡಲೇ ಸಚಿವ ಸ್ಥಾನ ನೀಡಲಾಯಿತು. ಎಲೆಕ್ಷನ್ ಸೋತಿದ್ದರೂ ಜಿ.ಟಿ. ದೇವೇಗೌಡ ವಸತಿ ನಿಗಮದ ಅಧ್ಯಕ್ಷರಾದರು. ಜಗ್ಗೇಶ್ ಕೆಎಸ್‌ಆರ್‌ಟಿಸಿ ಉಪಾಧ್ಯಕ್ಷನಾದ. ಮಂಡ್ಯಾದ ವಿದ್ಯಾ ನಾಗೇಂದ್ರಗೆ ಮೂಡಾ ಅಧ್ಯಕ್ಷಗಿರಿ ಸಿಕ್ಕಿತು.

ಇತ್ತ ಕಾಂಗ್ರೆಸ್‌ನಲ್ಲಿ ಏನಾಗಿದೆ ನೋಡಿ. ಕರ್ನಾಟಕದ ಅತೀ ಜನಪ್ರಿಯ ಲೀಡರ್ ಆಗಿದ್ದರೂ ಕಳೆದ ಎರಡೂವರೆ ವರ್ಷದಿಂದ ಸಿದ್ದರಾಮಯ್ಯಗೆ ಅಧಿಕಾರವಿರಲಿ ಕೂರಲು ಸಿಂಗಲ್ ಕುರ್ಚಿಯೂ ಕಾಂಗ್ರೆಸ್ ಆಫೀಸಿನಲ್ಲಿ ಕೊಡಲಿಲ್ಲ. ಸಮಾಜವಾದಿ ಆಶಯಗಳ ಪಾಪ್ಯುಲರ್ ನಾಯಕ ಎಂ.ಪಿ. ಪ್ರಕಾಶ್ ಕಾಂಗ್ರೆಸ್ ಸಮುದ್ರದಲ್ಲಿ ಈಗ ಏನಾಗಿದ್ದಾರೆಂಬುದೇ ಯಾರಿಗೂ ಗೊತ್ತಿಲ್ಲ. ಇನ್ನು ಕೋದಂಡರಾಮಯ್ಯ, ಬಿ.ಆರ್. ಪಾಟೀಲ್, ಡಾ. ಎಚ್.ಸಿ. ಮಹಾದೇವಪ್ಪ, ವೈಜನಾಥ, ಸುಭಾಶ್‌ಚಂದ್ರ, ಮುಕುಡಪ್ಪ, ಸತೀಶ್ ಜಾರಕಿಹೊಳಿ ಮುಂತಾದ ಮಾಸ್ ಲೀಡರ್‌ಗಳಿಗೂ ಕಾಂಗ್ರೆಸ್‌ನಲ್ಲಿ ಯಾವ ಸ್ಥಾನಮಾನವೂ ಸಿಕ್ಕಿಲ್ಲ.

ಮಾತೆತ್ತಿದರೆ ಮೂಲ ಕಾಂಗ್ರೆಸ್ಸಿಗರು, ವಲಸಿಗರು, ಹೊಸಬರು ಎಂದು ಕೊಂಕು ಮಾತಾಡುವ ಕಾಂಗ್ರೆಸ್ಸಿಗರು ಇಲ್ಲಿ ನಿಜಕ್ಕೂ ಪಕ್ಷ ಕಟ್ಟುತ್ತಾರ? ಹೋಗಲಿ ನಿತ್ರಾಣಗೊಂಡಿರುವ ಪಕ್ಷವನ್ನು ಬಲಪಡಿಸುವ ಹುಟ್ಟಾ ಇದು?

ಮೂಲ ಕಾಂಗ್ರೆಸ್ ಮೂಲ ಕಾಂಗ್ರೆಸ್ ಎಂದು ಬಡಬಡಿಸುತ್ತಿರುವ ಸ್ವಾರ್ಥಿಗಳು ಕಾಂಗ್ರೆಸ್ ಪಾಲಿಗೆ ಮೂಲವ್ಯಾಧಿಯಾಗುವ ಸೂಚನೆ ಇದು.

ಕಾಂಗ್ರೆಸ್ ಬಿಟ್ಟು ಹೋದವರ ವಿರುದ್ಧ ಕತ್ತಿ ಮಸೆಯುವುದು, ಅದೇ ವೇಳೆ ಕಾಂಗ್ರೆಸ್‌ಗೆ ಬಂದು ಸೇರಿರುವವರ ಬೆನ್ನಿಗೆ ಚೂರಿ ಹಾಕುವುದು... ಇವೆರಡೇ ಈಗ ರಾಜ್ಯ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ವಿದ್ಯಮಾನಗಳು.

ಇಂಥ ಅಸಹ್ಯಕರ ಹತಾಶ ಪರಿಸ್ಥಿತಿಯಲ್ಲಿ ಸಿದ್ದರಾಮಯ್ಯ ಆಗಲಿ ಅಥವಾ ಅವರ ಬೆಂಬಲಿಗರಾಗಲಿ ಬೇರೆ ದಾರಿ ಹುಡುಕಿಕೊಳ್ಳದೆ ಮತ್ತೇನು ಮಾಡಲು ಸಾಧ್ಯ? ■

ಈ ರಾಜ್ಯದಲ್ಲಿ ಬಹುಸಂಖ್ಯಾತರು ಬದುಕೋದೇ ಕಷ್ಟ!

ನಮ್ಮ ಯಡವಟ್ ಎಡೂರಿ "ಮಠಮಾನ್ಯಗಳಿಗೆ ನಾನು ಹಣ ಕೊಟ್ಟೇ ಕೊಡುತ್ತೇನೆ. ಇದರಲ್ಲಿ ಏನು ತಪ್ಪಿದೆ" ಎಂದು ಉಡುಪಿಯಲ್ಲಿ ಘರುಪ್ರಶ್ನಿಸಿದರಂತಲ್ಲಾ, ಇದರಿಂದ ಉಡುಪಿ ಮಠದ ಭೋಜನಪ್ರಿಯರು ಸಂತೃಪ್ತರಾಗಿ "ಇಂತಹ ಮಠಪ್ರಿಯ ಮುಖ್ಯಮಂತ್ರಿ ಕಾಣಲು ಇಷ್ಟು ದಿನ ಬೇಕಾಯ್ತಲ್ಲಾ" ಎಂದು ಕನಕನ ಭಕ್ತಿಯಲ್ಲಿ ಎಡೂರಿ ದರ್ಶನ ಮಾಡುತ್ತಿದ್ದರೆ, ಅತ್ತ ರಥಬೀದಿ ಗೆಳೆಯರು "ಇಂತಹ ಮೂರ್ಖ ಮುಖ್ಯಮಂತ್ರಿಗೆ ಏನು ಬುದ್ಧಿ ಹೇಳುವುದು. ಈತ ಹುಟ್ಟಿನಿಂದಲೇ ವಕ್ರ ಮನುಷ್ಯನಾದ್ದರಿಂದ ಅದನ್ನು ಕಡೆಯವರೆಗೂ ಬಿಡಲಾರ. ಆದ್ದರಿಂದ ಸರ್ಕಾರದ ಹಣವನ್ನು ಮಠಕ್ಕಾದರೂ, ಕೊಡು ಮಸಾಣಕ್ಕಾದರೂ ಕೊಡು" ಎಂದು ಸುಮ್ಮನಾದರಂತಲ್ಲಾ, ಥೂತ್ತೇರಿ!

* * * * * *

ತಾನು ಹೋಗುವಾಗ ಯಾವ ಮಠವೂ ರಕ್ಷಿಸಲಾರವು ಎಂಬುದನ್ನರಿಯದ ಎಡೂರಿ, ಅತ್ತ ಕನಕದಾಸರ ಪೀಠಕ್ಕೆ ಒಂದು ಕೋಟಿ ಕೊಟ್ಟಿದ್ದಲ್ಲದೆ ಕನಕ ಜಯಂತಿಗೂ ರಜೆ ಘೋಷಿಸಿದ್ದಾರಂತಲ್ಲಾ, ಇದರಿಂದ ಪುಲಕಿತರಾದ ಕುರುಬರು "ಈ ಸಿದ್ದರಾಮಯ್ಯ ಈಶ್ವರಿಯಿಂದ ಏನೂ ಪ್ರಯೋಜನವಿಲ್ಲ, ಮುಂದೆ ನಾವೂ ಕೂಡ ಭಜರಂಗದ ಮೂಲಕ ಆರೆಸೆಸ್ ಸೇರಿ, ನಂತರ ಬಿಜೆಪಿಗೆ ಹೋಗುವ ತಯಾರಿ ನಡೆಸಬೇಕು" ಎಂಬ ಆಲೋಚನೆ ಮಾಡಿದರಂತಲ್ಲಾ.

ಥೂತ್ತೇರಿ

ಯಾಹೂ

ಇದು ನಿಜವಾದರೆ ಗತಿಯೇನು ಎಂದು ಅದೇ ರಥಬೀದಿ ಗೆಳೆಯರು ಶಾನೆ ಚಿಂತಾಕ್ರಾಂತರಾದರಂತಲ್ಲಾ. ಏಕೆಂದರೆ ಒಬ್ಬ ಬ್ರಾಹ್ಮಣ ಆರೆಸೆಸ್ ಆಗುವುದಕ್ಕೂ, ಒಬ್ಬ ಕುರುಬ ಅಥವಾ ಒಕ್ಕಲಿಗ ಆಗುವುದಕ್ಕೂ ವ್ಯತ್ಯಾಸವಿದೆ. ಅಂದರೆ ಭಜರಂಗಿ ಮತ್ತು ಆರೆಸೆಸ್ ನಡುವಿನಷ್ಟೇ ಅಂತರವಿದೆ ಎಂದು ಹೆದರಿದರಂತಲ್ಲಾ, ಥೂತ್ತೇರಿ!

* * * * * *

"ಆಸ್ನೋಟಿಕರ್ ಎಂಬ ಅಮಾಯಕ ಆಸ್ತಿ ವಿವರ ಕೊಡುವಾಗ ಮೂರು ಪ್ರಾಪರ್ಟಿಯನ್ನು ಬಿಟ್ಟು ದಾಖಲು ಮಾಡಿರುವುದು, ದಿಲೀಪ್ ಎಂಬ ಯುವಕ ಕೊಲೆಯಾದಾಗ ಅದರಲ್ಲಿ ಆಕಸ್ಮಿಕ ಭಾಗಿಯಾಗಿರುವುದು ಒಂದು ಮಹಾ ಪ್ರಮಾದವೆನ್ನುವಂತೆ ಕಾಂಗ್ರೆಸ್ಸಿಗರು ಬೊಬ್ಬೆ ಹೊಡೆಯುವುದು ಸರಿಯಲ್ಲ" ಎಂದು ಚೆಡ್ಡಿಗಳು ಬೊಬ್ಬೆಹಾಕುವೆಯಂತಲ್ಲಾ, ಅವುಗಳು "ಚುನಾವಣೆ ಸಮಯದಲ್ಲಿ ನಿಮ್ಮ ದೇಶಪಾಂಡೆ ಕೊಟ್ಟ ಆಸ್ತಿ ವಿವರ ನೆಟ್ಟಗಿದೆಯಾ? ನಿಮ್ಮ ಅವಧಿಯಲ್ಲಿ ಕೊಲೆಗಳಾಗಿಲ್ಲವೆ? ಸ್ಲಂ ರಮೇಶ್ ಮೇಲೆ ಕೊಲೆ ಆರೋಪ ಇರಲಿಲ್ಲವೆ?" ಎಂದು ವಿತಂಡವಾದ ಎತ್ತಿವೆಯಂತಲ್ಲಾ, "ಹಾಗಿದ್ದರೆ ನೀವು ಕಾಂಗ್ರೆಸ್ಸಿಗಳಂತಾದಿರಲ್ಲಾ?" ಎಂದರೆ ಚೆಡ್ಡಿಗಳು ಚೋಣಚಿ ಹುಡುಕುತ್ತಾ ಯಾವ ಉತ್ತರವನ್ನು ಕೊಡಲಿಲ್ಲವಂತಲ್ಲಾ, ಥೂತ್ತೇರಿ!!

* * * * * *



"ಈ ರಾಜ್ಯದಲ್ಲಿ ಬಹುಸಂಖ್ಯಾತರಿಗೆ ಉಳಿಗಾಲವಿಲ್ಲ, ಅವರಿಗೆ ಯಾವ ರಕ್ಷಣೆಯೂ ಇಲ್ಲ, ಅವರು ತಮ್ಮನ್ನ ತಾವು ರಕ್ಷಿಸಿಕೊಳ್ಳುವ ಸಲುವಾಗಿ ಅಲ್ಪಸಂಖ್ಯಾತರ ಮೇಲೆ ಕಲ್ಲು ಹೊಗೆದರೆ, ಅವರ ಮನೆಗಳಿಗೆ ಬೆಂಕಿ ಹಚ್ಚಿದರೆ ಅದನ್ನೆ ದೊಡ್ಡ ರಂಪ ಮಾಡುತ್ತಾರೆ. ಹೀಗಾದರೆ ಬಹುಸಂಖ್ಯಾತರು ಬಾಳುವುದು ಹೇಗೆ ಹೇಳಿ?" ಈ ಮಾತನ್ನು ಚಿ.ಮೂ. ಎಂಬ ಚೆಡ್ಡಿ ಗಿರಾಕಿ ಆಡಿದ್ದಲ್ಲ, ಅಥವಾ ಭಜರಂಗದ ಮಾಜಿ ಆಡಿದ್ದೂ ಅಲ್ಲ, ಈ ರಾಜ್ಯ ಕಂಡ ಅಪರೂಪದ ಮುಖ್ಯಮಂತ್ರಿ ಎಡೂರಪ್ಪನವರು ತುಂಬಾ ಭಯದಿಂದ ಆಡಿರುವ ಮಾತು. ಕನ್ನಡಾಂಬೆಯ ಕುವರನ ಈ ಮಾತಿನಿಂದ ಬೆಚ್ಚಿಬಿದ್ದ ಕ್ರಿಶ್ಚಿಯನ್ನರು "ಇನ್ನು ಮುಂದೆ ಉಸಿರೆತ್ತದೆ ಇನ್ನೊಂದು ಕೆನ್ನೆಯನ್ನು ತೋರೋಣ" ಎಂದು ತೀರ್ಮಾನಿಸಿದರಂತಲ್ಲಾ, ಥೂತ್ತೇರಿ!!!

* * * * * *

ಇತ್ತ ಚಿಕ್ಕಮಗಳೂರಿನ ಮೂಲವ್ಯಾಧಿಯಾದ ದತ್ತಪೀಠದ ದತ್ತು ಭಕ್ತರು "ಕುಸಿದು ಹೋಗಿರುವ ಬಾಬಾಬುಡನ್ ಗುಹೆಯಲ್ಲೇ ನುಸುಳಿ ದರ್ಗಾದರ್ಶನ ಮಾಡುತ್ತೇವೆ" ಎಂದು ಹಠ ಹಿಡಿದಿವೆಯಂತಲ್ಲಾ, ಇದಕ್ಕೆ ಒಪ್ಪದ ಜಿಲ್ಲಾಧಿಕಾರಿ, "ಅಲ್ಲಿ ದತ್ತನ ಪಾದುಕೆಯಿಲ್ಲ, ಅಲ್ಲೇಕೆ ಹೋಗಿ ದರ್ಗಾ ದರ್ಶನ ಮಾಡುತ್ತೀರಿ, ನಾನೇ ಒಂದು ಗಣಪತಿ ಕೊಡುತ್ತೇನೆ. ಅದನ್ನೆ ಪೂಜೆ ಮಾಡಿಕೊಂಡು ಹೋಗಿ" ಎಂದರಂತಲ್ಲಾ, ಇದನ್ನು ಒಪ್ಪದ ಶ್ರೀರಾಮಸೇನೆ "ಕೂಡದು. ನಾವು ದತ್ತನ ಪಾದುಕೆ ಬಿಟ್ಟು ಇನ್ನೇನು ಪೂಜಿಸುವುದಿಲ್ಲ" ಎಂದವಂತಲ್ಲಾ, ಶ್ರೀರಾಮಚಂದ್ರನ ಕಟಿಸೈನ್ಯ, ಶ್ರೀರಾಮಪಾದುಕೆ ನಿಷ್ಠೆ ಬದಲಿಸಿ, ದತ್ತ ಪಾದುಕಾ ನಿಷ್ಠರಾದದ್ದು ಯಾವಾಗ ಎಂಬುದು ಜನದನಿ ಸಂಘದ ಚರ್ಚೆಯಾಗಿದೆಯಂತಲ್ಲಾ, ಥೂತ್ತೇರಿ!!! ■



ನಟ ವಿನೋದ್ ಎಂಬ ಚಿನ್ನದ ಹೈದ

ಚಿಕ್ಕಬಳ್ಳಾಪುರದಿಂದ ಬರ್ತಾ ಇದ್ವಿ. ರಾತ್ರಿ ಎಂಟು ಗಂಟೆ ಹೊತ್ತಿಗೆ ಗೋವರ್ಧನ್ ಫೋನ್ ಮಾಡಿದ್ದೇ 'ಬಾ ಗುರೂ ಊಟ ಮಾಡಾಣಾ' ಎಂದ. ಹೀಗೆ ಮಾಡ್ತಾನೆ ಅಂತ ನಮಗೆ ಎಲ್ಲಿ ಗೊತ್ತಾಗಬೇಕು? ಜೊತೆಗೆ ವಿನು ಕೂಡ ಇದ್ದನಲ್ಲ, ನಡೀ ಅಂದೆ. ನಾವು ಎಲ್.ಜಿ. ರೋಸ್ ಹೆರಿಟೇಜ್‌ಗೆ ಬರೋ ಹೊತ್ತಿಗೆ ರಾತ್ರಿ ಹತ್ತಾಗಿತ್ತು. ಆ ಹೊತ್ತಿಗಾಗಲೇ ಗೋವರ್ಧನ್ ಟೈಟಾಗಿ ಬಿಟ್ಟಿದ್ದ. ಅಲ್ಲಿ ಲಂಗಡಾ ಬಾಬು, ರೌಡಿ ದೀನಾ, ರಾಜೇಶ ಇತ್ಯಾದಿ ಹತ್ತಕ್ಕೂ ಹೆಚ್ಚು ಹುಡುಗರ ಗ್ಯಾಂಗಿತ್ತು. ಅದೇನೋ ಹೇಳೋಕ್ಕೆ ಅಂತ ಬಂದ ಗೋವರ್ಧನನನ್ನು ನನ್ನ ಜೊತೆಗಿದ್ದ ರಮೇಶ್ ತಡೆದು ಹಾಗಲ್ಲ ಹೀಗೆ ಅಂತ ಹೇಳಲು ಹೋಗಿದ್ದೇ ಯಡವಟ್ಟಾಯಿತು.

ಇದ್ದಕ್ಕಿದ್ದಂತೆ ರಮೇಶ್ ಮೇಲೆ ಎಗರಿಬಿದ್ದ ದೀನಾ 'ಏನೋ ನಮ್ಮ ಬಾಸ್‌ಗೇ ಉಲ್ಟಾ ಮಾತಾಡ್ತೀಯಾ' ಎಂದುಬಿಟ್ಟ. ಇಬ್ಬರನ್ನೂ ಎಬ್ಬಿಸಿದ್ದೇ ನಾನೇ ಹೊರಕ್ಕೆ ಕಳಿಸಿದೆ. ಆದರೆ ಹೊರಗಡೆಯೂ ಅವರಿಬ್ಬರೂ ಕಿತ್ತಾಡ್ತಾನೇ ಇದ್ರು. ಅದೇನಾಯ್ತೋ, ಅಷ್ಟೊತ್ತಿಗೇ ಟೈಟಾಗಿಬಿಟ್ಟಿದ್ದ ತ್ರಿಪಾಟ ಅನ್ನೋ ಗನ್‌ಮ್ಯಾನ್ ತನ್ನ ರಿವಾಲ್ವರ್‌ನಿಂದ ಸುಮ್ಮಸುಮ್ಮನೇ ಆಕಾಶಕ್ಕೆ ಫೈರ್ ಮಾಡಲಾರಂಭಿಸಿದ. ಅದು ಗೊತ್ತಾಗಿದ್ದೇ ಆಚೆಗೆ ಓಡಿದ ಗೋವರ್ಧನ್ ಜೊತೆ ಜಗಳ ಬಿಡಿಸೋಕ್ಕೆ ಅಂತ ವಿನು ಕೂಡ ಹೋದ. ಅದೇ ಆತನ ಪಾಲಿಗೆ ಮುಳುವಾಗಿತ್ತು. ಫೈರ್ ಮಾಡೋದು ಹಾಗಲ್ಲ ಕಣೋ ರ್‍ಯಾಸ್ಕಲ್ ಅಂದಿದ್ದೇ ತನ್ನ ಜೇಬಿನಿಂದ ರಿವಾಲ್ವರ್ ಹೊರತೆಗೆದ ಗೋವರ್ಧನ್ ವಿನು ಹೊಟ್ಟೆಗೇ ಗುರಿಯಿಟ್ಟು ಎರಡು ಬಾರಿ ಫೈರ್ ಮಾಡಿಬಿಟ್ಟ. ವಿನು ನೆಲಕ್ಕೆ ಬಿದ್ದು ಚೀರಾಡುತ್ತಿದ್ದ. ಇದನ್ನು ನೋಡಿದ್ದೇ ಐವರ್ ಬಾಬು ಮತ್ತು ಗೋವರ್ಧನನ ಡ್ರೈವರ್ ಶ್ರೀನಿವಾಸ್ ಕಿರುಚಾಡಿಬಿಟ್ಟರು. ನಾನು ಓಡಿ ಬಂದಿದ್ದೇ ಸೂ... ಮಗನೇ ಅನ್ಯಾಯವಾಗಿ ಕೊಂದುಬಿಟ್ಟೆಯಲ್ಲೋ ಎಂದು ಕೂಗಾಡಿಬಿಟ್ಟೆ. ಗೋವರ್ಧನ್ 'ಬುದ್ಧಿ, ಹೆಂಗಾಯ್ತೊ ಗೊತ್ತಿಲ್ಲ, ತಪ್ಪಾಯ್ತು ಬುದ್ಧೀ....!' ಎಂದು ನನ್ನ ಕಾಲಿಗೆ ಬೀಳಲು ಬಂದ.

ಏನ್ ಸಾರ್ ಮಾಡೋದು? ಹತ್ತೇ ನಿಮಿಷಕ್ಕೆ ನನ್ನ ಕಾರಲ್ಲೇ ವಿನೂನ್ನ ಬಾಣಸವಾಡಿ ರಸ್ತೆಯ ಸತ್ಯಸಾಯಿ ಆಸ್ಪತ್ರೆಗೆ ತಂದರೆ ಅಲ್ಲಿ ಆಗೋಲ್ಲ ಅಂದುಬಿಟ್ರು. ಅಲ್ಲಿಂದ ಮಣಿಪಾಲ್ ಆಸ್ಪತ್ರೆಗೆ ತರುವ ಹೊತ್ತಿಗೆ ಕಾಲ ಮಿಂಚಿಹೋಗಿತ್ತು, ಬೆಳಿಗ್ಗೆ 8 ರ ಹೊತ್ತಿಗೆ ವಿನು ತೀರಿಕೊಂಡ ಅಂತ ಸುದ್ದಿ ಬಂತು....

ಇದು ನಟ ವಿನೋದ್‌ನ ಪರಮಾಪ್ತ ಶಂಕರ್‌ರೆಡ್ಡಿಯ ಮಾತು. ವಿನು ಅಲಿಯಾಸ್ ವಿನೋದ್ ಶಂಕರ್‌ರೆಡ್ಡಿಯ ಸಹಪಾಠಿ. ಇಬ್ಬರೂ ಓದಿದ್ದು ಕಾಕ್ಸ್‌ಟೌನ್‌ನ ಮಾಡರ್ನ್ ಇಂಗ್ಲಿಷ್ ಕಾನ್ವೆಂಟಿನಲ್ಲಿ. ಶಂಕರ್‌ರೆಡ್ಡಿ ಮತ್ತು ಶಂಕರೇಗೌಡ ಸೇರಿಕೊಂಡು ಓಂಪ್ರಕಾಶ್ ನಿರ್ದೇಶನದಲ್ಲಿ ತಮಿಳು ಚಿತ್ರವೊಂದನ್ನು ನಿರ್ಮಿಸುವ ಹೊತ್ತಿಗಾಗಲೇ ವಿನು 'ಮರುಭೂಮಿ' ಮತ್ತು 'ಗುಲಾಮ' ಎಂಬ ಎರಡು ಚಿತ್ರಗಳಲ್ಲಿ ಎರಡನೇ ಹೀರೋ ಆಗಿ ನಟಿಸಿದ್ದ. ಮಿತಭಾಷಿ, ಯಾವತ್ತೂ ಸಜ್ಜನಿಕೆ ಬಿಟ್ಟವನಲ್ಲ, ರಾಮಸ್ವಾಮಿಪಾಳ್ಯದ ವೆಂಕಟೇಶಪ್ಪ ಎಂಬ ಬಿಟಿಎಸ್ ಡ್ರೈವರ್‌ನ ಇಬ್ಬರು ಮಕ್ಕಳ ಪೈಕಿ ವಿನೋದ್ ದೊಡ್ಡವನು. ಬಾಲ್ಯದಿಂದಲೂ ಪ್ರೀತಿಸುತ್ತಿದ್ದ ಗೆಳತಿಯ ಜೊತೆ ಇನ್ನೊಂದು ತಿಂಗಳಲ್ಲಿ ನಿಶ್ಚಿತಾರ್ಥವಿತ್ತು, ಕುಡಿತದ ಚಟವಿರಲಿಲ್ಲ, ದುಶ್ಚಟ ಅಂತ ಏನೇನೂ ಇರಲಿಲ್ಲ, ಶಂಕರ್‌ರೆಡ್ಡಿಯ ಶಿಫಾರ್ಸಿನ ಮೇರೆಗೆ ಆತನನ್ನು ತನ್ನ 'ಮರುಭೂಮಿ' ಚಿತ್ರದಲ್ಲಿ ಎರಡನೇ ಹೀರೋ ಪಾತ್ರ ಕೊಟ್ಟಿದ್ದ ನಿರ್ದೇಶಕ 'ಮಹೇ' ತನ್ನ ಮುಂದಿನ ಚಿತ್ರಕ್ಕೆ ವಿನೋದ್‌ನನ್ನೇ ಹೀರೋ ಮಾಡುತ್ತೇನೆಂದು ಮಾತು ಕೊಟ್ಟಿದ್ದ.

ಅದೇನು ಕಾಕತಾಳೀಯವೋ. 'ಮರುಭೂಮಿ' ಚಿತ್ರದಲ್ಲಿ ವಿನೋದ್‌ನದ್ದು ಕೊಲೆಯಾಗುವ ಪಾತ್ರ. ಗೋವರ್ಧನಮೂರ್ತಿಯನ್ನೇ ಹೋಲುವ ಪೋಕರಿಯೊಬ್ಬನ ಕೈಯಲ್ಲಿ ವಿನೋದ್ ಕೊಲೆಯಾಗುವಾಗ ಆತನ ಕಾರಿನ ಬೆನ್ನಿಗೆ 'This is my last journey' ಎಂಬ ಬರಹವೊಂದು ಕಾಣಿಸುತ್ತದೆ. ಇದು ವಿನೋದ್‌ನ ಮೊದಲ ಚಿತ್ರದ ದೃಶ್ಯ. ಅನಂತರ 'ಗುಲಾಮ' ಚಿತ್ರದಲ್ಲಿ ನಟಿಸಿದ ವಿನೋದ್ ತನ್ನ ಸಜ್ಜನಿಕೆಯ ಕಾರಣಕ್ಕೇ ಪ್ರಜ್ವಲ್, ತರುಣ್, ವಿಜಯ್ ರಾಘವೇಂದ್ರರಂಥವರಿಗೆ ಪರಮಾಪ್ತನಾದ. ಗೋವರ್ಧನಮೂರ್ತಿಗೂ ಆತನಿಗೂ ಸ್ನೇಹವಾಗಲಿ, ದುಶ್ಮನಿಯಾಗಲಿ ಇರಲೇ ಇಲ್ಲ. ಕೊಲೆಯಾಗುವಂಥ ಸ್ವಭಾವದವನೂ ಅಲ್ಲ, ಆದರೂ ವಿನಾಕಾರಣ ಸಾವೇ ಬೆನ್ನಟ್ಟಿ ಬಂತು. ಅದೂ ಗೋವರ್ಧನನ ರೂಪದಲ್ಲಿ. ತನ್ನ ಮೊದಲ ಚಿತ್ರ 'ಮರುಭೂಮಿ'ಯಲ್ಲಿ ಯಾವ ಸನ್ನಿವೇಶದಲ್ಲಿ ನಟಿಸಿದ್ದನೋ ಹಾಗೇ ಕೊಲೆಯಾದ ವಿನೋದ್ ಅನ್ಯಾಯವಾಗಿ ಬಲಿಯಾದ.



ಸೈಕೋ ಗೋವರ್ಧನ

ತನ್ನ ಎಲ್.ಜಿ. ರೋಸ್ ಹೆರಿಟೇಜ್ ಎಂಬ ಫಾರ್ಮ್ ಹೌಸ್ ಅನ್ನೋ ತನ್ನೆಲ್ಲಾ ದುರಾಚಾರದ ಕಾರಸ್ಥಾನವನ್ನಾಗಿ ಮಾಡಿಕೊಂಡ ಸೈಕೋ ಗೋವರ್ಧನನ ಪಾಪದ ಕೊಡ ತುಂಬಿಬಂದಿತ್ತೋ ಅಥವಾ ನಟ ವಿನೋದ್‌ನ ಗ್ರಹಚಾರ ಕೆಟ್ಟಿತ್ತೋ ಗೊತ್ತಿಲ್ಲ. ಅಕ್ಟೋಬರ್ 6 ರ ಸೋಮವಾರ ರಾತ್ರಿ ಅನ್ಯಾಯವಾಗಿ ವಿನೋದ್‌ನನ್ನು ಗುಂಡಿಟ್ಟು ಕೊಂದ ಗೋವರ್ಧನ ಲ್ಯಾಂಡ್ ಡೀಲರುಗಳೆಂಬ 'ನಿಯೋರಿಚ್' ಪುಂಡರ ಅಟ್ಟಹಾಸಕ್ಕೊಂದು ತಾಜಾ ಉದಾಹರಣೆಯಷ್ಟೇ.

ರಾ. ಸೋಮನಾಥ್

ಅಲ್ಪನಿಗೆ ಐಶ್ವರ್ಯ ಒಲಿದರೆ ಬೇರೆ ಏನು ತಾನೇ ಆಗಲು ಸಾಧ್ಯ?

ಇದು 'ಮಾದೇಶ' ನಿರ್ಮಾಪಕ ಗೋವರ್ಧನಮೂರ್ತಿಯನ್ನು ಕೇರಳದಿಂದ ಹಿಡಿದು ತಂದ ಕ್ರೈಂ ಪೇದೆಯೊಬ್ಬನ ಬಾಯಿಂದ ಬಂದ ಮಾತು. ಸದ್ಯ ಬಾಗಲೂರು ಎಸಿಪಿ ರಾಮಚಂದ್ರಪ್ಪನವರ ಮುಂದೆ ಕೈಗೆ ಬೇಡಿ ತೊಡಿಸಿಕೊಂಡು ಚಿಕ್ಕಳಮಕ್ಕಳ ಕೂತ ಗೋವರ್ಧನಮೂರ್ತಿ ಕಂಡಕಂಡ ಪೊಲೀಸ್ ಪೇದೆಗಳ ಕಾಲಿಗೆ ಬೀಳುತ್ತಿದ್ದಾನೆ. ಮಾತುಮಾತಿಗೆ ಎದೆಬಡಿದುಕೊಂಡು ಅಳುತ್ತಾನೆ. 'ಏನೋ ಕುಡಿದ ಗ್ಯಾನದಲ್ಲಿ ತಪ್ಪು ಮಾಡಿಬಿಟ್ಟೆ, ಕೈ ಮುಗಿತೀನಿ ಸಾರ್ ಏನಾದ್ರೂ ಮಾಡಿ ನನ್ನನ್ನ ಉಳಿಸಿ ಸಾರ್' ಎಂದು ಗೋಗರೆಯುತ್ತಿರುವ ಆತನ ದುರ್ಗತಿ 'ಮಾದೇಶ' ಚಿತ್ರದ ಪೊಲೀಸ್ ಠಾಣೆಯ ದೃಶ್ಯಾವಳಿಯಂತೆಯೇ ಇದೆ.

ಇನ್ನೊಂದೆಡೆ ಗುಂಡಿಗೆ ಬಲಿಯಾದ ನಟ ವಿನೋದ್‌ನ ಮನೆಯ ದೃಶ್ಯಾವಳಿ ಇನ್ನೂ ಭಯಂಕರ. ಮಂಗನ ಕೈಗೆ ರಿವಾಲ್ವರ್ ಬಂತೆಂದರೆ ಪ್ರಾಣ ಯಾರದಾದರೇನು? ಕತ್ತಲಾಗುತ್ತಿದ್ದಂತೆ ಕುಡಿಯಲೇಬೇಕು, ಕುಡಿದ ನಂತರ ಬ್ರ್ಯಾಂಡ್ ಹುಡುಗಿಯರಿರಲೇಬೇಕು. ನಡುರಾತ್ರಿ ಕಳೆದು ಬೆಳಗಾಗುವ ತನಕ ಪಾರ್ಟಿಯ ಮೋಜು. ಜೊತೆಗೆ ರೌಡಿಗಳು. ಬೇಕಾಬಿಟ್ಟಿ ದುಡ್ಡಿದೆ. ಒಂದು ಕ್ಷಣ ಮಾತಾಡಿದ್ದನ್ನು ಮರುಕ್ಷಣವೇ ಮರೆಯುತ್ತಾನೆ. ಪ್ರತಿ ಬೆರಳಿಗೂ ಚಿನ್ನದ ಉಂಗುರ. ಅಂಗೈಗೆ ಬ್ರೇಸ್‌ಲೆಟ್. ಕತ್ತಿನುದ್ದಕ್ಕೂ ಚಿನ್ನದ ಚೈನುಗಳು. ತಾನು ಯಾರೊಂದಿಗೆ ಮಾತಾಡುತ್ತಿದ್ದೇನೆ? ಏನು ಮಾತಾಡಬೇಕು? ಇತ್ಯಾದಿ ಯಾವುದಕ್ಕೂ ಒಂದು ಲೆಕ್ಕಾಚಾರ ಅಂತಿಲ್ಲ.



ಇದು 'ಮಾದೇಶ' ಪ್ರೊಡ್ಯೂಸರ್ ಕಂ ಲ್ಯಾಂಡ್ ಡೀಲರ್ ಗೋವರ್ಧನಮೂರ್ತಿಯ ಸಂಕ್ಷಿಪ್ತ ಪರಿಚಯ. ಇಲ್ಲಿಗೆ ತಿಂಗಳ ಹಿಂದೆ ಮಾದೇಶನ ಬಿಡುಗಡೆ ಪ್ರಯುಕ್ತ ಮೆಜೆಸ್ಟಿಕ್‌ನ ಬೆಲ್ ಹೋಟೆಲಿನಲ್ಲಿ ಪತ್ರಕರ್ತರಿಗೆಂದು ಪಾರ್ಟಿ ಇಟ್ಟುಕೊಂಡಿದ್ದ ಗೋವರ್ಧನ ತನ್ನ ಸುತ್ತ ಕಮ್ಮಿಯೆಂದರೂ ಇಪ್ಪತ್ತು ಮಂದಿ ಛಪ್ಪರ್‌ಗಳನ್ನು ಕರೆತಂದಿದ್ದ. ಬರುವಾಗಲೇ ಕುಡಿದು ತೂರಾಡುತ್ತಿದ್ದ. ಪತ್ರಕರ್ತರಿರುತ್ತಾರೆ ಎಂಬ ಕನಿಷ್ಠ ಪ್ರಜ್ಞೆ ಕೂಡ ಆತನಿಗಿರಲಿಲ್ಲ. ಜೊತೆಗಿದ್ದವರಿಗೂ ಅಷ್ಟೇ: 'ಅಮ್ಮನ್ ಅಕ್ಕನ್' ಹೊರತಾಗಿ ಬೇರೆ ಭಾಷೆ ಬರುತ್ತಿರಲಿಲ್ಲ!

ಇದು ಒಂದು ದೃಶ್ಯವಾದರೆ ಇದಾಗಿ ವಾರಕ್ಕೇ ತನ್ನ ಅಡ್ಡೆಯ ಮೇಲೆ ರೇಡು ಬಿದ್ದ ಇನ್‌ಕಂ ಟ್ಯಾಕ್ಸ್ ಅಧಿಕಾರಿಗಳನ್ನು ಹಿಡಿದು ಬಡಿದಿದ್ದ. ಇಲ್ಲಿಗೆ ವರ್ಷದ ಹಿಂದೆ ಮಾದೇಶ ಚಿತ್ರದ ಮುಹೂರ್ತಕ್ಕೆಂದು ಟೆಕ್ಕಿನ ಕಣ್ ರಾಜೇಂದ್ರನ ಹಂತಕರಾದ ಒಂಟಿ, ಮಾರ್ಕೆಟ್ ವೇದಿ, ಪೀಸಿ, ಪೀಟ ಸಂತೋಷ ಇತ್ಯಾದಿ ಎರಡು ಡಜನ್ ರೌಡಿಗಳನ್ನೇ ಪತ್ರಕರ್ತರೆದುರು ನಿಲ್ಲಿಸಿ ಪೋಜು ಕೊಟ್ಟಿದ್ದ. ದುಡ್ಡಿನ ಕಾರಣಕ್ಕಾದರೂ ತೋರಬೇಕಿದ್ದ ದೊಡ್ಡಸ್ಥಿಕೆ ಆತನ ರಕ್ತದಲ್ಲೇ ಇರಲಿಲ್ಲ.

ಅಷ್ಟಕ್ಕೂ ಆತ ಬೆಳೆದ ಪರಿಸರ, ಮನೆಯ ವಾತಾವರಣ, ಸಿಕ್ಕ ಸಹವಾಸ, ತೀರ ಚಿಕ್ಕವಯಸ್ಸಿನಲ್ಲೇ ಕೈಗೂಡಿದ ಶ್ರೀಮಂತಿಕೆ ಎಲ್ಲವೂ ಆತನ ವಿನಾಶಕ್ಕೆ ಕೊಡುಗೆ ಸಲ್ಲಿಸಿದ್ದವು. ಹೆಣ್ಣೂರು ರಿಂಗ್ ರೋಡ್ ಪಾಸಲೆಯ ಬಳಿ ಶಿವಾಲೆಯ ಮುದ್ದಣ್ಣನ ಅರ್ಧ ಡಜನ್ ಮಕ್ಕಳ ಪೈಕಿ ಹಿರೀಕನಾದ ಚನ್ನಕೇಶವ ಆ ಭಾಗದ ಖ್ಯಾತ ಲ್ಯಾಂಡ್ ಡೀಲರ

▶▶▶

ಯುವನೇ ಗೋವರ್ಧನಮೂರ್ತಿ. ಸಂಪಂಗಿ ಸುಂದರೇಶ್ ಎಂಬಿಬ್ಬರು ತಮ್ಮಂದಿದ್ದಾರೆ. ಅಕ್ಕಂದಿರಿಗೂ ಮದುವೆಯಾಗಿದೆ.



ಆರ್. ವೃತ್ತದ ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಕಾಪಿ ಹೊಡೆದು ಆದ ಗೋವರ್ಧನ ಅಷ್ಟಕ್ಕೇ ಓದುವುದನ್ನು ಮುಂದೆ ಪೋಲಿ ಅಲೆಯುತ್ತಿದ್ದ ಈತನ ಗೆ ರೋಸತ್ತ ಅಣ್ಣ ಚನ್ನಕೇಶವ ಪಾಲು ಮನೆಯಿಂದ ಹೊರದಬ್ಬಿದ್ದ. ಅದು ರ್ಧನ ಪಾಲಿಗೆ ರೊಟ್ಟಿ ಜಾರಿ ತುಪ್ಪಕ್ಕೆ ಾಯ್ತು. ಅದೇ ಹೊತ್ತಿಗೆ ಲ್ಯಾಂಡ್ ಭೂಮ್ ಅಲೆಯೆದ್ದಿತ್ತು. ಪಾಲಿಗೆ ಬಳಿಶಿವಾಲೆಯ ಯನ್ನೇ ಬಂಡವಾಳವಾಗಿಟ್ಟುಕೊಂಡು ಲ್ಯಾಂಡ್ ನಿಂತವನು ಸಂಜೆಯಾದರೆ ಸಾಕು ಬ್ರಿಗೇಡ್ ಲೈವ್‌ಬ್ಯಾಂಡ್ ಶೋಕಿಗೆ ಬಿದ್ದ. ಇವತ್ತು ರ್ಧನನನ್ನು ಓರ್ವ ಹಂತಕನನ್ನಾಗಿ ರೂಪಿಸಿ ಎಣಿಸುವಂತೆ ಮಾಡಿದ್ದೇ ಈ ಲೈವ್‌ಬ್ಯಾಂಡ್ ಖಯಾಲಿ!

ಗೆ ಬ್ಯಾಂಡ್ ಶೋಕಿಗೆ ಬಿದ್ದ ರೊಕ್ಕಸ್ಥ ಪುಂಡರನ್ನು ಬುಟ್ಟಿಗೆ ೊಂಡು ಸಮಾ ಬೋಳಿಸಲೆಂದೇ ಹುಟ್ಟಿಕೊಂಡವನು ಡಾ ಬಾಬು!



ತ ರಾಮಮೂರ್ತಿನಗರದ 'ಹಳೇ ಸೇವಕಿ' ಸರೋಜಮ್ಮನ ಮೂಲತಃ ಮಂಗಳೂರಿನ ಸರೋಜಮ್ಮನಿಗೆ ಇಬ್ಬರು ಮಕ್ಕಳಿದ್ದಾರೆ. ಒಬ್ಬನೇ ಮಗ ಲಂಗಡಾ ಬಾಬು ಪಿಯೂಸಿ ಸಿದ್ದೇ ಬೆಂಗಳೂರಿನ ಲೈವ್‌ಬ್ಯಾಂಡ್‌ಗಳಿಗೆ ಕಲ್ಕತ್ತಾ, ಬಯಿಗಳಿಂದ ಹುಡುಗಿಯರನ್ನು ಸರಬರಾಜು ಮಾಡುವ ಗೆ ಕೈಯಿಟ್ಟ. ಇಂದಿರಾನಗರದ ಮಿಸ್ಟೀಕ್, ಮೇಕ್ರಿ ಸರ್ಕಲ್ಲಿನ ನ್, ಅಲಸೂರಿನ ಕಾವೇರಿ ಇತ್ಯಾದಿ ಬ್ಯಾಂಡ್ ಅಡ್ಡೆಗಳಿಗೆ ುಗಿಯರನ್ನು ಸರಬರಾಜು ಮಾಡಿಕೊಂಡಿದ್ದ ಲಂಗಡಾ ಬಾಬು ಸ್ಟೈಟೆಕ್ ಮೈದಂಧೆಯ ರಕ್ಷಣೆಗೆಂದು ನೆಚ್ಚಿಕೊಂಡಿದ್ದು ಪಾತಕಿ ಟ್ ಸುನೀಲನನ್ನು.


ಅಲಸೂರಿನ ಕನ್ನಡ ಹೋರಾಟಗಾರ ಕನ್ನಡ ಸೋಮುವನ್ನು ಗಳನ್ನು ಛೂಬಿಟ್ಟೇ ಹೊಡೆಸಿದ ಲಂಗಡಾ ಬಾಬುಗೂ ವಾಲೆಯ ಪೋಕರಿ ಗೋವರ್ಧನ್ ಮೂರ್ತಿಯ ಸ್ನೇಹ ರಿದ್ದು ಇಂದಿರಾನಗರದ ಮಿಸ್ಟೀಕ್ ಎಂಬ ಬ್ಯಾಂಡ್ ಅಡ್ಡೆಯಲ್ಲಿ. ಬಂಬಾ ಗೋಲ್ಡು ಹಾಕಿಕೊಂಡು ಪ್ರತಿ ಸಂಜೆ ಬ್ಯಾಂಡ್‌ಗೆ ರಾಗುತ್ತಿದ್ದ ಗೋವರ್ಧನ ಪ್ರತಿ ಹಾಡಿಗೂ ಕಂತೆಗಟ್ಟಲೇ ನೋಟು ತುತ್ತಿದ್ದ. ಅದೇ ಬ್ಯಾಂಡಿನ ಕಲ್ಕತ್ತಾ ಮೂಲದ ನಿಕೇತಾ ಮತ್ತು ಎಂಬಬ್ಬರು ಹುಡುಗಿಯರನ್ನು ಸಿಕ್ಕಾಪಟ್ಟೆ ಹಚ್ಚಿಕೊಂಡಿದ್ದ.

ಆ ಇಬ್ಬರು ಹುಡುಗಿಯರ ಮೂಲಕವೇ ಗೋವರ್ಧನನಿಗೆ ಹತನಾದ ಲಂಗಡಾ ಬಾಬು ಕ್ರಮೇಣ ಗೋವರ್ಧನನ ಅಡ್ಡೆಗೇ ಡುಗಿಯರನ್ನು ಕಳಿಸಲಾರಂಭಿಸಿದ. ಜೊತೆಗೆ ಬಳಿಶಿವಾಲೆ ಮುತ್ತಲ ಕೆಲ ಜಮೀನ್ದಾರರಿಗೂ ಗೋವರ್ಧನ್ ಬ್ಯಾಂಡ್ ರುಚಿ ರಿಸಿಕೊಟ್ಟ.

ಅದು 2001 ರ ಕಾಲ. ಬಳಿಶಿವಾಲೆ ಸುತ್ತಮುತ್ತ ಈಗಿನಂತೆ ಮಿಯ ಬೆಲೆ ಏರಿರಲಿಲ್ಲ. ಎಕರೆಗೆ ಮೂರೋ ಐದೋ ಲಕ್ಷ ದ್ದರೆ ಅದೇ ಹೆಚ್ಚು. ಹಾಗೇ ಅಗದೀ ದರಕ್ಕೆ ಸಿಕ್ಕ ರೈತರ ಮಿಯನ್ನು ಲಲ್ಲೇಶ್ ರೆಡ್ಡಿ ಎಂಬಾತನ ಪಾಲುದಾರಿಕೆಯಲ್ಲಿ ದಿಸಲಾರಂಭಿಸಿದ ಗೋವರ್ಧನ್ ಒಟ್ಟು 30 ಎಕರೆಗೆ ಮೆಂಟ್ ಮಾಡಿಕೊಂಡು ಅದಕ್ಕೆ ಎಲ್.ಜಿ. ಲೇಕ್ ವ್ಯೂ ಎಂಬ ವಿಟ್ಟ.


ಐವತ್ತು ಸಾವಿರವನ್ನೋ ಲಕ್ಷವನ್ನೋ ಮುಂಗಡವಾಗಿ ಕೊಟ್ಟು ನ್ನೇ ಸೈಟು ಮಾಡಿ ಮಾರಿದ ಗೋವರ್ಧನ ಮತ್ತು ಲಲ್ಲೇಶ್ ರೆಡ್ಡಿ 05 ರ ಹೊತ್ತಿಗೆ ರಾತ್ರೋರಾತ್ರಿ ಕುಬೇರರಾದರು. ಮೂರೋ ಲ್ಲಕ್ಷಕ್ಕೆ ಕೊಂಡ ಎಕರೆ ಭೂಮಿಗೆ ಕೋಟಿ ರೂಪಾಯಿ ಗಿಟ್ಟಿದ್ದೇ ಗೋವರ್ಧನನ ತಲೆ ತಿರುಗಿತು. ಅದಕ್ಕೆ ತಕ್ಕಂತೆ ಸಿನಿಮಾ ಕ್ರಿಮಿ ಮದನ್‌ಮಲ್ಲು ಗೋವರ್ಧನನಿಗೆ ಗಂಟುಬಿದ್ದ. ಹಾಗೇ ಮದನ್ ಮಲ್ಲುವನ್ನು ಹಿಡಿತಂದು ಪರಿಚಯಿಸಿಕೊಟ್ಟವನು ಗಾಂಧಿನಗರದ ನಟೋರಿಯಸ್ ಸರಬರಾಜುದಾರ ಗಂಗು.

ಮುಂಬಯಿಯಿಂದ ಥರ್ಡ್‌ರೇಟ್ ಮಾಡೆಲ್‌ಗಳನ್ನು ಡಬ್ಬಲ್ ಕಾಲ್‌ಶೀಟ್‌ಗೆ ಬುಕ್ ಮಾಡಿ ಅವರನ್ನೇ ಹೀರೋಯಿನ್ ಎಂದು ರೊಕ್ಕಸ್ಥ ಪ್ರೊಡ್ಯೂಸರ್ ಮುಂದೆ ಕೆಡವುವುದೇ ಪ್ರೊಡಕ್ಷನ್ ಮ್ಯಾನೇಜರ್ ಗಂಗೂನ ಕುಲಕಸುಬು. ಅದಕ್ಕೆ 'ಸ್ಟೂಡೆಂಟ್' ಹೆಸರಿನ ಸಿನಿಮಾ ನೆಪವಷ್ಟೇ. ಮದನ್ ಮಲ್ಲು ನಂಬಿ ಮೂರು ಕೋಟಿ ಸುರಿದು ಮಾಡಿದ 'ಸ್ಟೂಡೆಂಟ್' ನೆಟ್ಟಗೆ ವಾರ ಕೂಡ ಓಡಲಿಲ್ಲ ನಿಜ. ಹಾಗಂತ ಅದರ ಹೀರೋಯಿನ್ ಪೂಜಾ ಕನ್ವಾಲ್‌ಳನ್ನು ಸತತ ಎರಡು ತಿಂಗಳ ಕಾಲ ತನ್ನ ಕಮ್ಮನಹಳ್ಳಿ ಅಡ್ಡೆಯಲ್ಲಿ ಗೋವರ್ಧನ್ ಪೀಡಿಸದೇ ಬಿಡಲಿಲ್ಲ.



'ಸ್ಟೂಡೆಂಟ್' ನುಂಗಿ ಹಾಕಿದ ಮೂರುಕೋಟಿಯನ್ನು ಪಾರ್ಟನರ್ ಲಲ್ಲೇಶ್ ರೆಡ್ಡಿಯ ತಲೆಗೆ ಕಟ್ಟಲು ಹೋಗಿ ಆತನ ದುಶ್ಮನಿ ಕಟ್ಟಿಕೊಂಡ ಗೋವರ್ಧನ್ ಇದೇ ಹೊತ್ತಿಗೆ ಮತ್ತೊಂದು ಯಡವಟ್ಟಿಗೆ ಬಿದ್ದ. ಗೋವರ್ಧನನಿಗೆ ದೂರದ ಸಂಬಂಧಿಯಾದ ಗೆದ್ದಲಹಳ್ಳಿ ಆನಂದನಿಗೂ ಗೋವರ್ಧನನಿಗೂ ಹಳೇ ದುಷ್ಮನಿಯಿತ್ತು. ಈ ಆನಂದ ಒಂದೆರಡು ಬಾರಿ ಗೋವರ್ಧನನ ಮೇಲೆ ಸ್ಕೆಚ್ ಕೂಡ ಹಾಕಿದ್ದ. ತಿರುಪತಿಯಿಂದ ವಾಪಸ್ಸಾಗುತ್ತಿದ್ದಾಗ ಲಾರಿ ಗುದ್ದಿಸಿ ಗೋವರ್ಧನನನ್ನು ಮುಗಿಸಲು ಯತ್ನಿಸಿದ ಆನಂದನ ತಂತ್ರಕ್ಕೆ ಆವತ್ತು ಗೋವರ್ಧನನ ಜೊತೆಗಿದ್ದ ಮತ್ತಿಕೆರೆ ರವಿ ಎಂಬ ಅಮಾಯಕನೊಬ್ಬ ಬಲಿಯಾದ. ಕಾರ್ ಆಕ್ಸಿಡೆಂಟ್‌ನಲ್ಲಿ ಹೇಗೋ ಬಚಾವಾದ ಗೋವರ್ಧನ ಮುಂದೆ ಸೈಲೆಂಟ್ ಸುನೀಲನ ಗ್ಯಾಂಗನ್ನೇ ಜೊತೆ ಹಾಕಿಕೊಂಡು ಸುತ್ತಲಾರಂಭಿಸಿದ. ಜೊತೆಗೇ ಮೂವರು ಖಾಸಗಿ ಗನ್‌ಮ್ಯಾನ್‌ಗಳನ್ನೂ ಇಟ್ಟುಕೊಂಡ.

ಹಾಗಂತ್ ಆನಂದ ಬಿಡಲಿಲ್ಲ. ರಿಚಮಂಡ್ ಸರ್ಕಲ್ಲಿನಲ್ಲಿ ಬ್ಯಾಂಡ್ ನಡೆಸುತ್ತಿದ್ದ ಹತರೌಡಿ ಮುಲ್ಕಿ ರಫೀಕ್‌ನ ತಮ್ಮ ಅಖ್ತರ್ ಮತ್ತು ಅಲ್ತಾಫ್ ಎಂಬಿಬ್ಬರನ್ನು ಗೋವರ್ಧನನ ವಿರುದ್ಧ ಛೂಬಿಟ್ಟ. ಈ ಅಖ್ತರ್ ಮತ್ತು ಅಲ್ತಾಫ್ ದುಬೈನಿಂದ ತಂದಿದ್ದ ಸಿಮ್‌ಕಾರ್ಡ್ ಬಳಸಿ ತಾವು ಛೋಟಾ ಶಕೀಲ್ ಕಡೆಯವರೆಂದೂ ನಿನ್ನನ್ನು ಮುಗಿಸದೇ ಬಿಡಬೇಕೆಂದರೆ ಐದು ಕೋಟಿ ಕೊಡು ಎಂದೂ ಪದೇಪದೇ ಧಮಕಿ ಇಡುತ್ತಿದ್ದರು. ಇವರ ಜೊತೆ ಶಿವಾನಂದ ಸ್ಟೋರ್ ಪಕ್ಕದ ಸೀರಾಕ್ ಬಾರ್ ಮಾಲೀಕ ಜನಾರ್ದನ ರಾವ್ ಮಗ ಗಣೇಶ್ ಕೂಡ ಕೈಜೋಡಿಸಿದ್ದ. ಒಂದು ಹಂತದಲ್ಲಿ ಒಂದೂವರೆ ಕೋಟಿ ಕೊಟ್ಟು ರಾಜಿ ಮಾಡಿಕೊಳ್ಳಲು ಗೋವರ್ಧನ್ ರೆಡಿಯಾಗಿದ್ದ. ಆದರೆ ಇದು ಸಿಸಿಬಿಯ ಎಸಿಪಿ ಬಿ.ಕೆ. ಶಿವರಾಮ್‌ಗೆ ಗೊತ್ತಾಗಿ ಇಡೀ ಅಲ್ತಾಫ್ ತಂಡ ಜೈಲು ಪಾಲಾಯಿತು.



ಬಹುಶಃ ಬೇರೆ ಯಾರೇ ವ್ಯವಹಾರಸ್ಥರಾಗಿದ್ದರೆ ಇಷ್ಟಕ್ಕೇ ಪಾಠ ಕಲಿಯುತ್ತಿದ್ದರು. ಹುಚ್ಚಾಟ ಬಿಟ್ಟು ಸದ್ದಿಲ್ಲದೇ ವ್ಯವಹಾರ ಮಾಡಿಕೊಂಡಿರುತ್ತಿದ್ದರು. ಆದರೆ ಗೋವರ್ಧನ ಹುಟ್ಟಾ ಸೈಕೋ. ಜೊತೆಗೆ ಲಂಗಡಾ ಬಾಬುನಂಥ ಅನಾಹುತಕಾರಿಗಳಿದ್ದರಲ್ಲ; ಈ ಬಾಬು ಮೂಲಕ ಗೋವರ್ಧನನ ಗ್ಯಾಂಗ್ ಸೇರಿಕೊಂಡ ಇಬ್ಬರು ಪುಡಿರೌಡಿಗಳ ಹೆಸರು ಮಂಗಳೂರಿನ ದಿನೇಶ್ ಪೂಜಾರಿ ಉರ್ಫ್ ದೀಣ ಎಂಬಾತನಾದರೆ ಮತ್ತೊಬ್ಬ ರಾಮಮೂರ್ತಿನಗರದ ಪೋರ್ಕಿ ರಾಜೇಶ.

ಇವರಿಬ್ಬರ ಮೇಲೆ ಕಮ್ಮಿಯೆಂದರೂ ಹಲವು ಅರ್ಧ ಡಜನ್ ಕ್ರಿಮಿನಲ್ ಕೇಸುಗಳಿವೆ. ದೀಣ ಈಗಾಗಲೇ ಮಾರುತಹಳ್ಳಿಯಲ್ಲೊಂದು ಕೊಲೆ ಮಾಡಿ ಜೈಲು ಕಂಡುಬಂದಿದ್ದಾನೆ. ರಾಜೇಶ ಹೇಳಿಕೇಳಿ ರೌಡಿಶೀಟರ್. ಇವರಿಬ್ಬರೂ ಲಂಗಡಾ ಬಾಬು ಜೊತೆ ಸೇರಿ ಗೋವರ್ಧನನ ಸುತ್ತ ಯಾವತ್ತೂ ಪುಡಿ ರೌಡಿ ಪಡೆಯೊಂದು ಇರುವಂತೆ ನೋಡಿಕೊಂಡರು. ಜೊತೆಗೆ ಗುಲ್ಬರ್ಗಾ ಮೂಲದ ಆನಂದ ಎಂಬಾತ ಇಡೀ ಗೋವರ್ಧನನ ವ್ಯವಹಾರಕ್ಕೆಲ್ಲ ಮ್ಯಾನೇಜರ್ ಆಗಿ ನೇಮಕಗೊಂಡ.

ಬಳಿಶಿವಾಲೆಯಲ್ಲಿ ಎಲ್.ಜಿ. ಲೇಕ್‌ವ್ಯೂ ಎಂಬ ಲೇಔಟ್‌ನಿಂದಲೇ ಕುಬೇರನಾದ ಗೋವರ್ಧನ ಅದೇ ದುಡ್ಡನ್ನು ಹಾಕಿ ಚಿಕ್ಕಬಳ್ಳಾಪುರದ ಜಕ್ಕಲ ಮಡಗು ಸಮೀಪ ಎಲ್.ಜಿ. ಹೆವೆನ್ಲೀ ಹಿಲ್ಸ್ ಎಂಬ ಇನ್ನೊಂದು ಟೌನ್‌ಶಿಪ್ ಶುರುಹಚ್ಚಿಕೊಂಡ. ದೇವನಹಳ್ಳಿ ಏರ್‌ಪೋರ್ಟ್‌ಗೆ ಸಮೀಪ ಎಂದು ಚಿಕ್ಕಬಳ್ಳಾಪುರ ಡಿ.ಸಿ. ಆಫೀಸ್ ಎದುರು 80 ಎಕರೆಯ ಎಲ್.ಜಿ. ಗ್ರೀನ್‌ಸಿಟಿ ಎಂಬ ಮೂರನೇ ಲೇಔಟ್ ಆರಂಭಿಸಿದ.

ಪ್ರಾರಂಭದಲ್ಲಿ ಹತ್ತೋ ಇಪ್ಪತ್ತೋ ಎಕರೆಯನ್ನಷ್ಟೇ ಖರೀದಿಸಿ ಉಳಿದಂತೆ ಪುಡಿಕಾಸು ಕೊಟ್ಟು ಅಗ್ರಿಮೆಂಟ್ ಮಾಡಿಕೊಳ್ಳುತ್ತಾನೆ. ಇದು ಗೋವರ್ಧನನ ಲ್ಯಾಂಡ್ ದಂಧೆಯ ರಹಸ್ಯ. ಇದರ ಅಸಲಿಯತ್ತು ಗೊತ್ತಿಲ್ಲದ ಆಂಧ್ರದ ಪದ್ದಟೂರಿನ ಒಂದಿಬ್ಬರು ರೆಡ್ಡಿಗಳು ಇಪ್ಪತ್ತು ಕೋಟಿ ರೂಪಾಯಿಯಷ್ಟು ದುಡ್ಡು ತಂದು ಗೋವರ್ಧನನ ಲ್ಯಾಂಡ್ ದಂಧೆಗೆ ಸುರಿದರು. ಅದೂ 100 ಪರ್ಸೆಂಟ್ ಬಡ್ಡಿಗೆ!

ಅಂದರೆ ಇಪ್ಪತ್ತು ಕೋಟಿಗೆ ಒಂದು ವರ್ಷಕ್ಕೆ ನಲವತ್ತು ಕೋಟಿ ಕೊಡಬೇಕು. ಅದನ್ನು ಒಪ್ಪಿಕೊಂಡೇ ಸಾಲ ತಂದ ಗೋವರ್ಧನ್ ಅದರ ಒಂದು ಪಾಲನ್ನು ಸುರಿದದ್ದು 'ಮಾದೇಶ' ಚಿತ್ರಕ್ಕೆ. 'ಮಾದೇಶ' ಚಿತ್ರ ಕತೆ ಹೇಳಿ ಒಂದೇ ವರ್ಷಕ್ಕೆ ಹಾಕಿದ ಬಂಡವಾಳ ಡಬ್ಬಲ್ ಆಗುತ್ತದೆ ಎಂದು ಗೋವರ್ಧನನ ತಲೆ ಕೆಡಿಸಿದ್ದು ಪೋರ್ಕಿ ಡೈರೆಕ್ಟರ್ ರವಿಶ್ರೀವತ್ಸ. ಮೊದಲು ಎರಡು ಕೋಟಿಯಲ್ಲಿ ಸಿನಿಮಾ ಮುಗಿಸಿ ಕೊಡ್ತೀನಿ ಎಂದು ರೈಲುಬಿಟ್ಟಿದ್ದ ರವಿಶ್ರೀವತ್ಸ ಐದು ಕೋಟಿ ಬೋಳಿಸಿದ. ಸೆನ್ಸಾರ್‌ಗೂ ಯೋಗ್ಯತೆಯಿಲ್ಲದೇ ಕೊನೆಗೆ 'ಎ' ಸರ್ಟಿಫಿಕೇಟು ಪಡೆದು ತೆರೆಕಂಡ ಎರಡೇ ವಾರಕ್ಕೆ ಸುಸ್ತು ಹೊಡೆದ 'ಮಾದೇಶ' ಹೆಚ್ಚುಕಮ್ಮಿ ಗೋವರ್ಧನನ ಹುಚ್ಚು ಮನಸ್ಸಿನ ಪ್ರತೀಕವಾಗಿತ್ತು. ಸಿನಿಮಾ ತೋಪೆದ್ದಿದ್ದು ಗೊತ್ತಾಗುತ್ತಿದ್ದಂತೆ ಆಂಧ್ರದ ರೆಡ್ಡಿಗಳು ಬೆನ್ನಿಗೆ ಬಿದ್ದರು. ಅವರಿಂದ ಹೇಗೋ ಬಚಾವಾಗಿ ಬಂದರೆ ಬೆನ್ನಲ್ಲೇ ಇನ್‌ಕಂ ಟ್ಯಾಕ್ಸ್ ರೇಡಾಯಿತು. ರೇಡ್ ಮಾಡಿದ ಅಧಿಕಾರಿಗಳ ಮೇಲೆ ಕೈಮಾಡಿ ಮತ್ತೊಂದು ರಾದ್ಧಾಂತ ಮಾಡಿಕೊಂಡ. ಮಗದೊಂದೆಡೆ ಮುಂಬಯಿಯ ಕೆಲ ಪಾತಕಿಗಳು ದುಬೈನಿಂದ ದುಡ್ಡಿಗೆ ಪೀಡಿಸಲಾರಂಭಿಸಿದ್ದರು. ಪ್ರತಿನಿತ್ಯ ಬೆದರಿಕೆ ಕರೆ ಬರುತ್ತಲೇ ಇತ್ತು.

ಇದೆಲ್ಲದರ ಮಧ್ಯೆ ಆತನ ವಿಕೃತಿಗಳೇ ಆತನನ್ನು ನುಂಗಲಾರಂಭಿಸಿದ್ದವು. ಕತ್ತಲಾಗುತ್ತಿದ್ದಂತೆ ಕುಡಿತ. ಬ್ಯಾಂಡ್ ಹುಡುಗಿಯರ ಖಯಾಲಿ. ತನ್ನ ಎಲ್.ಜಿ. ರೋಸ್ ಹೆರಿಟೇಜ್ ಎಂಬ ಫಾರ್ಮ್ ಹೌಸ್ ಅನ್ನೋ ತನ್ನೆಲ್ಲಾ ದುರಾಚಾರದ ಖಾಸಸ್ಥಾನವನ್ನಾಗಿ ಮಾಡಿಕೊಂಡ ಗೋವರ್ಧನನ ಪಾಪದ ಕೊಡ ತುಂಬಿಬಂದಿತ್ತೋ ಅಥವಾ ನಟ ವಿನೋದ್‌ನ ಗ್ರಹಚಾರ ಕೆಟ್ಟಿತ್ತೋ ಗೊತ್ತಿಲ್ಲ, ಅಕ್ಟೋಬರ್ 6 ರ ಸೋಮವಾರ ರಾತ್ರಿ ಅನ್ಯಾಯವಾಗಿ ವಿನೋದ್‌ನನ್ನು ಗುಂಡಿಟ್ಟು ಕೊಂದ ಗೋವರ್ಧನ ಲ್ಯಾಂಡ್ ಡೀಲರುಗಳೆಂಬ 'ನಿಯೋರಿಚ್' ಪುಂಡರ ಅಟ್ಟಹಾಸಕ್ಕೊಂದು ತಾಜಾ ಉದಾಹರಣೆಯಷ್ಟೇ.

ಒಂದು ದಿನದ ಮಟ್ಟಿಗಾದರೂ ಜೈಲಲ್ಲಿರಬೇಕಂತೆ!

ನಟ ವಿನೋದ್ ಕೊಲೆಯಾಗುವುದಕ್ಕೂ ಹಿಂದಿನ ರಾತ್ರಿ ಎಲ್.ಜಿ. ರೋಸ್ ಹೆರಿಟೇಜ್ ಅಡ್ಡೆಯಲ್ಲಿ ರಾಘವೇಂದ್ರ ರೆಡ್ಡಿ ಎಂಬಾತನನ್ನು ಇದೇ ಗೋವರ್ಧನ್ ಹಿಡಿದು ಥಳಿಸಿದ್ದ. ಅಷ್ಟಕ್ಕೂ ರಾಘವೇಂದ್ರ ರೆಡ್ಡಿ ಗೋವರ್ಧನನ [illegible] ಸ್ನೇಹಿತನೆ. ಅವ ಪಟನ್ [illegible] [illegible] ಒಪ್ಪದೇ ಹೋಗಿದ್ದೇ ಗೋವರ್ಧನನ ಸಿಟ್ಟಿಗೆ ಕಾರಣವಾಗಿತ್ತು.

ಕುಡಿದೆಂದರೆ ಗೋವರ್ಧನ್ ಅಕ್ಷರಶಃ ಮೃಗ. ಬೇರೆ ಯಾರಾದರೂ ಏನಾದರೂ ಮಾಡಿದರೆಂದರೆ ತಾನು ಅದಕ್ಕಿಂತಲೂ ಹೆಚ್ಚಿಗೆ ಮಾಡಬೇಕು. 'ಸ್ಟೂಡೆಂಟ್' ಚಿತ್ರದ ಹೀರೋಯಿನ್ ಪೂಜಾ ಕನ್ವಾಲ್‌ಳನ್ನು ಎಳೆತಂದು ಇದೇ ರೋಸ್ ಹೆರಿಟೇಜ್ ಅಡ್ಡೆಯಲ್ಲಿ ಬೆಳಗಾನ ಫೈರ್ ಮಾಡುತ್ತಲೇ ಇದ್ದ. ಕುಡಿದನೆಂದರೆ ರಿವಾಲ್ವರ್ ತೆಗೆದಿದ್ದೇ ಸುಮ್ಮಸುಮ್ಮನೇ ಫೈರ್ ಮಾಡುತ್ತಾನೆ. 'ಮಾದೇಶ' ಚಿತ್ರದ ಹೀರೋಯಿನ್ ಮೇಘನಾ ಛೋಪ್ರಾಳನ್ನು ಪದೇಪದೇ ಇಲ್ಲಿಗೆ ತಂದುಬಿಡುತ್ತಿದ್ದದ್ದು ಪೋರ್ಕಿ ರವಿಶ್ರೀವತ್ಸ. ಗೋವರ್ಧನ್ ಯಾರನ್ನೂ ನಂಬುತ್ತಿರಲಿಲ್ಲ. ಮಹಾ ಪುಕ್ಕಲ. ಪಟಾಕಿ ಹೊಡೆದರೂ ಬೆಚ್ಚಿ ಬೀಳುತ್ತಿದ್ದ. ತನಗೆ ಪ್ರತಿನಿತ್ಯ ಬ್ಯಾಂಡ್ ಹುಡುಗಿಯರನ್ನು





ತಂದುಬಿಡುತ್ತಿದ್ದ ಒಂದೇ ಕಾರಣಕ್ಕೆ ರೌಡಿ ಲಂಗಡಾ ಬಾಬುಗೆ ರಾಮಮೂರ್ತಿ ನಗರದಲ್ಲೊಂದು ಮನೆ ಕಟ್ಟಿಸಿಕೊಟ್ಟ.

ಮುಂದೇ ಇದೇ ಲಂಗಡಾ ಬಾಬು ಗಾರ್ಮೆಂಟ್ ಫ್ಯಾಕ್ಟರಿ ಇಡುವ ಐಡಿಯಾ ಕೊಟ್ಟ. ಅದಕ್ಕೆ ತನ್ನ ತಂಗಿ ಗಂಡ ಪ್ರಭಾಕರನನ್ನೇ ಮ್ಯಾನೇಜರ್ ಮಾಡಿಟ್ಟ. ಅಷ್ಟಕ್ಕೂ ಗಾರ್ಮೆಂಟ್ಸ್ ಫ್ಯಾಕ್ಟರಿ ಇಟ್ಟದ್ದು ವ್ಯಾಪಾರಕ್ಕಲ್ಲ, ಚೆಂದದ ಹುಡುಗಿಯರನ್ನು ಪಟಾಯಿಸೋದಕ್ಕೆ!

ಕಣಗಿಂತಲೂ ಹುಂಬರಾಗಿರುವವರನ್ನು ಕಂಡರೆ ಗೋವರ್ಧನ್ ಉರಿದುಬೀಳುತ್ತಿದ್ದ. ಇನ್ನೂ ವಿಲಕ್ಷಣ ಗೀಳೊಂದು ಆತನಿಗಿತ್ತು. ಅದು ರೌಡಿಯಾಗುವ ಖಯಾಲಿ.

ಸೈಲೆಂಟ್ ಸುನೀಲನ ಗ್ಯಾಂಗ್ ಜೈಲಲ್ಲಿದ್ದಷ್ಟೂ ದಿನ ಲಂಗಡಾ ಬಾಬು ಮೂಲಕ ಜೈಲಿಗೆ ಬಿರಿಯಾನಿ ಕಳಿಸುತ್ತಿದ್ದದ್ದೇ ಗೋವರ್ಧನ್. ಅಷ್ಟಕ್ಕೂ ಸುನೀಲ, ಒಂಟಿ ಗ್ಯಾಂಗನ್ನು ಲಂಗಡಾ ಬಾಬುಗೆ ತಗುಲಿಸಿದವನು ಮಾರ್ಕೆಟ್ ವೇದಿ. ಜೈಲಿಂದ ಹೊರಬಿದ್ದಿದ್ದೇ ಒಂಟಿಗೆ ಇಪ್ಪತ್ತು ಲಕ್ಷದ ದುಬಾರಿ ಕಾರ್ ಕೊಡಿಸಿಕೊಟ್ಟ. ತನ್ನ ಜೊತೆಗಿದ್ದ ದೀಣ, ರಾಜೇಶ, ಆನಂದ ಇತ್ಯಾದಿ ಪುಡಿ ರೌಡಿಗಳಲ್ಲದೇ ತಾನು ರೌಡಿ ಎಂದು ಯಾರೇ ಪರಿಚಯಿಸಿಕೊಂಡರೂ ಅಂಥವರಿಗೊಂದು ಬಿಳಿ ಕಾರ್ ಕೊಡಿಸುತ್ತಿದ್ದ.

ಇವತ್ತಲ್ಲಾ ನಾಳೆ ಕನಿಷ್ಠ ಒಂದು ದಿನದ ಮಟ್ಟಿಗಾದರೂ ಜೈಲಿಗೆ ಹೋಗಿ ಬರಬೇಕೆಂಬುದೇ ಆತನ ಕನಸಾಗಿತ್ತಂತೆ. ಅದನ್ನೇ ಕುಡಿದು ಚಟ್ಟಾಗಿ ಹೇಳಿಕೊಳ್ಳುತ್ತಿದ್ದ. ಈಗ ಖಾಯಮ್ಮಾಗಿ ಜೈಲು ಪಾಲಾಗಿರುವ ಗೋವರ್ಧನ್ ನಾಳೆಕ್ಕೆ ಕನಸುಗಳು [illegible]?

ಬಾಗಲಕೋಟೆ: ಆಲಮಟ್ಟಿಯಲ್ಲಿ ಮುಳುಗಿದ ರೈತರು!



ನರ್ಮದಾ ಬಚಾವೋ ಆಂದೋಲನ, ಸಿಂಗೂರು ಟಾಟಾ ಕಂಪನಿ ವಿರುದ್ಧದ ರೈತ ಹೋರಾಟ, ರಾಷ್ಟ್ರೀಯ ಉದ್ಯಾನ ವಿರೋಧಿ ಹೋರಾಟ, ಬಾಗೂರು-ನವಿಲೆ ರೈತ ಸಂಘರ್ಷ, ತದಡಿ ಸ್ಥಾವರ ವಿರೋಧಿ ಹೋರಾಟ - ಹೀಗೆ ಸಾಲುಸಾಲು ಹೋರಾಟಗಳು ರಾಷ್ಟ್ರ, ರಾಜ್ಯದಲ್ಲಿ ನಡೆದಿವೆ, ನಡೆಯುತ್ತಲೇ ಇವೆ. ಇವು ಅಭಿವೃದ್ಧಿಯ ಹೆಸರಿನಲ್ಲಿ ಜಾರಿಯಾಗುತ್ತಿರುವ ಯೋಜನೆಗಳಿಗೆ ತಮ್ಮ ಬದುಕಿನ ನೆಲೆಗಳನ್ನೆ ಕಳೆದುಕೊಳ್ಳುತ್ತಿರುವ ಅಮಾಯಕ ಜನಗಳು ಒಡ್ಡುತ್ತಿರುವ ಪ್ರತಿರೋಧಗಳು. ಇಲ್ಲಿಯವರೆಗೂ ಜಾರಿಗೆ ಬಂದ ಯಾವ ಯೋಜನೆಗಳಲ್ಲೂ ನಿರಾಶ್ರಿತರಾದ ಜನಗಳಿಗೆ ಸಂಪೂರ್ಣವಾದ ಪುನರ್ವಸತಿಯನ್ನು ಕಲ್ಪಿಸಲಾಗಿಲ್ಲ. ಪರ್ಯಾಯ ಬದುಕನ್ನು ಕಟ್ಟಿಕೊಡಲಾಗಿಲ್ಲ. ಪ್ರತಿ ಯೋಜನೆಯಲ್ಲೂ ಪ್ರತಿಶತ 40ರಷ್ಟು ಜನ ಪುನಃ ತಮ್ಮ ಬದುಕನ್ನು ಕಟ್ಟಿಕೊಳ್ಳಲಾಗದೇ ನಿರ್ಗತಿಕರಾಗುತ್ತಿದ್ದಾರೆ. ಇದಕ್ಕೆ ತಾಜಾ ಉದಾಹರಣೆಯೆಂದರೆ ನಾಡಿನ ಹೆಮ್ಮೆಯೆಂದೆಲ್ಲ ಹೇಳಿಕೊಳ್ಳುತ್ತಿರುವ ಆಲಮಟ್ಟಿ ಅಣೆಕಟ್ಟು ಯೋಜನೆಯಿಂದ ಸಂತ್ರಸ್ತರಾದ ಜನರ ನರಕಸದೃಶ ಬದುಕು.


ತಮ್ಮ ತಮ್ಮ ಮೂಲ ಮಣ್ಣಿನೊಂದಿಗಿನ ಭಾವನಾತ್ಮಕ ಸಂಬಂಧದ ಕೊಂಡಿಯನ್ನು ಕಳಚಿಕೊಂಡು ತಮ್ಮ ಬೇರುಗಳೇ ಇಲ್ಲದ ಸ್ಥಳಗಳಲ್ಲಿ ಬಂದು ನೆಲೆಸಲ್ಪಟ್ಟಿರುವ ಜನತೆ ಇಂದು ಪ್ರತಿ ಕ್ಷಣ ವಿಷಾದವನ್ನೇ ಉಸಿರಾಡುತ್ತ ಕಳೆಯುತ್ತಿದ್ದಾರೆ. ತಮ್ಮ ಪೂರ್ವಜರು ಬಾಳಿ ಬದುಕಿದ್ದ, ತಾವು ಆಡಿದ, ನಡೆದಾಡಿದ ನೆಲದೊಂದಿಗಿನ ಸಂಬಂಧ ಕೊನೆಯಾದ ನೋವಿನಲ್ಲಿಯೇ ದಿನಗಳನ್ನು ದೂಡುತ್ತಿದ್ದಾರೆ.

ಎಲ್ಲ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಜನರ ಹಿಂದಿನ ಬದುಕಿಗೆ ಯಾವುದೇ ಧಕ್ಕೆಯಾಗದಂತೆ, ಬದುಕಿನ ಭದ್ರತೆಗೆ ಕಿಂಚಿತ್ತು ತೊಂದರೆಯಾಗದಂತೆ ಊರುಗಳನ್ನು ಸ್ಥಳಾಂತರಿಸಿ ಅಚ್ಚುಕಟ್ಟಾದ, ನ್ಯಾಯೋಚಿತವಾದ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಿಕೊಡುವ ಸರಕಾರದ ಭರವಸೆ ಇಲ್ಲಿ ಬರೀ ಭರವಸೆಯಾಗಿ ಮಾತ್ರ ಉಳಿದಿದೆ. ಪುನರ್ವಸತಿ ಹೆಸರಿನಲ್ಲಿ ಸರಕಾರದ ಖಜಾನೆಯಿಂದ ಸಾವಿರಾರು ಕೋಟಿ ಸಾರ್ವಜನಿಕರ ಹಣ ಹೊಳೆಯಂತೆ ಹರಿದುಬಂದರೂ ಸಹ ಅದು ಸೇರಿದ್ದು ರಾಜಕಾರಣಿಗಳ, ಅಧಿಕಾರಿಗಳ ಹಾಗು ಶ್ರೀಮಂತರ ತಿಜೋರಿಗಳನ್ನು. ಇನ್ನು ಇವರೆಲ್ಲರಿಂದ ಪಾರಾಗಿ ಬಡವರ ಪಾಲಿಗೆ ಅಂತ ಬಂದದ್ದು ಪುಡಿಗಾಸು ಮಾತ್ರ. ಆದರೆ ವಾಸ್ತವವಾಗಿ ಈ ಯೋಜನೆಯಿಂದ ಅತೀ ಹೆಚ್ಚು ಬಾಧಿತರಾದವರು, ನಿರಾಶ್ರಿತರಾದವರು ಹಳ್ಳಿಗಳಲ್ಲಿನ ಕೂಲಿಕಾರರು ಮತ್ತು ಬಡವರು. ಯಾವುದೇ ಸರಕಾರ ಹೆಚ್ಚು ಹೆಚ್ಚು ಸಹಾಯಹಸ್ತ ಚಾಚಬೇಕಾದದ್ದು ಮತ್ತು ಪುನರ್ವಸತಿ ಕಲ್ಪಿಸುವ ಸಂದರ್ಭದಲ್ಲಿ ಅತಿಯಾದ ಕಾಳಜಿ ವಹಿಸಬೇಕಾದುದು ಇದೇ ಸಮುದಾಯದ ಬಗ್ಗೆ. ಆದರೆ ಸರಕಾರಗಳು ಈ ಕೆಲಸಕ್ಕೆ ಬಿಡುಗಡೆ ಮಾಡಿದ ಹಣದ ಅಂಕಿಸಂಖ್ಯೆಗಳ ಬಗ್ಗೆ ಜಂಬ ಕೊಚ್ಚಿಕೊಳ್ಳುತ್ತ ಬಂದವೇ ಹೊರತು ಬಿಡುಗಡೆಯಾದ ಹಣ ಯಾರ ಕೈಸೇರುತ್ತಿದೆ ಎಂಬುದರ ಬಗ್ಗೆ ಕಿಂಚಿತ್ತೂ ಗಮನ ಹರಿಸಲಿಲ್ಲ.

ವೀಕ್ಷಣೆಗೆ ಬಂದ ರಾಜಕೀಯ ನಾಯಕರು ಹಾಗು ಪಂಡಿತರೆಲ್ಲ ತಲೆ ಎತ್ತಿ ನಿಂತಿರುವ ಬಹುಮಹಡಿ ಕಟ್ಟಡಗಳನ್ನು, ನಿರ್ಮಾಣಗೊಂಡಿರುವ ವಿಶಾಲವಾದ ರಸ್ತೆಗಳನ್ನು ಹಾಗು ರಂಗುರಂಗಾಗಿರುವ ಸರಕಾರಿ ಕಚೇರಿಗಳನ್ನು ಕಂಡು ಸಂತಸದಿಂದ ಅಬ್ಬಾ! ಪುನರ್ ನಿರ್ಮಾಣದ ಕೆಲಸ ಅದ್ಭುತ! ಎಂದು ತಮ್ಮ ಬೆನ್ನು ತಾವೇ ತಟ್ಟಿಕೊಂಡು ಹೋದರೇ ಹೊರತು ಸಿಕ್ಕ ಪುಡಿಗಾಸಿನ ಗಂಟು ಕಟ್ಟಿಕೊಂಡು ಊರು ಬಿಟ್ಟು ಬಂದ ಬಡ ಕೂಲಿಕಾರರ ಹೊಟ್ಟೆಪಾಡಿನ ಬಗ್ಗೆಯಾಗಲಿ, ದುಡಿಯುವ ಕೈಗಳ ಅನ್ನ ಸಂಪಾದನೆಗೆ ಅನಿವಾರ್ಯವಾದ ಉದ್ಯೋಗದ ಬಗ್ಗೆಯಾಗಲಿ ಯಾರೂ ತಲೆ ಕೆಡಿಸಿಕೊಳ್ಳಲಿಲ್ಲ. ಒಂದು ಕಡೆ ಭ್ರಷ್ಟ ಅಧಿಕಾರಿಗಳೊಂದಿಗೆ ಶಾಮೀಲಾದ ಶ್ರೀಮಂತರು ಕೋಟಿ ಕೋಟಿ ಬಾಚಿಕೊಂಡು ಕುಬೇರರಾದರೆ ಮತ್ತೊಂದು ಕಡೆ ಬಡಜನತೆ ಎಲ್ಲವನ್ನು ಕಳೆದುಕೊಂಡು ತಗಡಿನ ಶೆಡ್ಡುಗಳಲ್ಲಿ ಅಸಹನೀಯವಾಗಿ ಬದುಕುವಂತಾಗಿದೆ.

ಅವೈಜ್ಞಾನಿಕ ಸಮೀಕ್ಷೆ

ಯಾವುದೇ ಒಂದು ನೀರಾವರಿ ಯೋಜನೆ ಜಾರಿಯಾಗುವ ಮುನ್ನ ಅದರಿಂದ ಬಾಧೆಗೊಳಪಡುವ ಪ್ರದೇಶದ ಸಮೀಕ್ಷೆ ನಡೆಸಲಾಗುತ್ತದೆ. ಆ ಪ್ರದೇಶಗಳ ಜನರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕಾಗುತ್ತದೆ. ಊರುಗಳನ್ನು ಬೇರೆಡೆಗೆ ಸ್ಥಳಾಂತರಿಸಬೇಕಾಗುತ್ತದೆ. ಈ ಆಲಮಟ್ಟಿ ಅಣೆಕಟ್ಟು ಯೋಜನೆಯ ಸಮೀಕ್ಷೆಯೇ ಅವೈಜ್ಞಾನಿಕವಾಗಿ ನಡೆದಿದೆ. 524 ಮೀಟರ್ ಎತ್ತರಕ್ಕೆ ಮುಳುಗಡೆಯಾಗುವ ಮತ್ತು ಬಾಧೆಗೊಳಪಡುವ ಪ್ರದೇಶದ ಸರ್ವೆ ನಡೆಸಲಾಗಿದೆಯಾದರೂ ವಾಸ್ತವವಾಗಿ ತೊಂದರೆಗೊಳಗಾಗುವ ಹಲವಾರು ಹಳ್ಳಿಗಳನ್ನೇ ಪುನರ್ ವಸತಿ ಯೋಜನೆಯಿಂದ ಕೈ ಬಿಡಲಾಗಿದೆ. ನೀರು ಬಂದು ಈ ಹಳ್ಳಿಯ ಜನ ಹಲವಾರು ತೊಂದರೆ ತಾಪತ್ರಯಗಳನ್ನು ಅನುಭವಿಸುತ್ತಿದ್ದರೂ ಇನ್ನೂ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿಲ್ಲ. ಹಲವಾರು ಹಳ್ಳಿಗಳಿಗೆ ಯಾವುದೇ ತೊಂದರೆಯಾಗದಿದ್ದರೂ ಅಲ್ಲಿನ ರಾಜಕೀಯ ಒತ್ತಡಕ್ಕೆ ಮಣಿದು ಮುಳುಗಡೆ ಪ್ರದೇಶವೆಂದು ಘೋಷಿಸಿ ಕೋಟ್ಯಾಂತರ ರೂಪಾಯಿ ಪರಿಹಾರ ನೀಡಿ ಪುನರ್‌ವಸತಿ ಕಲ್ಪಿಸಲಾಗಿದೆ. ಇದರಲ್ಲಿ ಹಳ್ಳಿಗಳ ದೊಡ್ಡದೊಡ್ಡ ಕುಳಗಳು ಉಂಡದ್ದೇ ಹೆಚ್ಚು.


ವೀರಣ್ಣ ಚರಂತಿಮಠ

ಪರಿಹಾರದಲ್ಲೂ ಮೋಸ

ಪ್ರತಿ ಪ್ರದೇಶದಲ್ಲಿ ಮುಳುಗಡೆಯಾಗಲಿರುವ ಜಮೀನು, ಮನೆ, ಜಾಗ ಮುಂತಾದ ಆಸ್ತಿಯನ್ನು ಸರ್ವೆ ಮಾಡಿ ಅವುಗಳ ವ್ಯಾಲ್ಯೂವೇಶನ್ ಮಾಡಿ ಸರಕಾರ ನಿಗದಿ ಮಾಡಿದ ಬೆಲೆಯನ್ನು ಪರಿ[...] ವಿತರಿಸಲಾಗುತ್ತದೆ. ಆದರೆ ಈ ಯೋಜನೆಯಲ್ಲಿ [...] ನಿಗದಿ ಮಾಡುವ ಕಾರ್ಯ ಬಹುಪಾಲು ರಾಜ[...] ಪ್ರಭಾವ ಹಾಗು ಭ್ರಷ್ಟಾಚಾರದ ಆಧಾರದ ಮೇಲೆ ನಡೆ[...] ಹಳ್ಳಿಗಳಲ್ಲಿ ದೊಡ್ಡ ದೊಡ್ಡ ಜಮೀನುದಾ[...] ಭೂಹಿಡುವಳಿದಾರರು ಹಾಗು ಸಣ್ಣಪುಟ್ಟ ರೈತ[...] ಕೃಷಿಭೂಮಿಯ ವಿಷಯದಲ್ಲಿ [...] ವ್ಯತ್ಯಾಸವಾಗಿಲ್ಲವಾದರೂ ಮನೆ ಜಾಗೆ ಮುಂತಾದ[...] ವಿಚಾರದಲ್ಲಿ ಬಡವರಿಗೆ ಅನ್ಯಾಯವಾಗಿದೆ. ಆಸ್ತಿ [...] ಮಾಡಲು ಬಂದ ಇಂಜಿನಿಯರುಗಳು ಮತ್ತು ಅಧಿಕಾ[...] ಎಂಜಲು ಕಾಸಿಗೆ ಆಸೆಪಟ್ಟು ದೊಡ್ಡದೊಡ್ಡ ಕು[...] ಆಸ್ತಿಪಾಸ್ತಿಗಳ ಬೆಲೆಗಳನ್ನು ಬೇಕಾಬಿಟ್ಟಿ ಹೆಚ್ಚಿಸಿ[...] ಮನೆಗಳಿಗೆ ಬಳಸಿದ ಕಲ್ಲು, ಮಣ್ಣು, ಕಾಂಕ್ರೀಟು, ಕ[...] ಕಟ್ಟಿಗೆ ಮುಂತಾದವುಗಳೆಲ್ಲ ಬೆಲೆ ನಿಗ[...] ಮಾನದಂಡಗಳಾಗಿರುವುದರಿಂದ ಮಾಲಿಕರೊಂ[...] ಕಮಿಷನ್ ಫಿಕ್ಸ್ ಮಾಡಿಕೊಂಡು ಸಾರ್ವಜನಿಕರ [...] ಪುಢಾರಿಗಳ ಕೈ ಸೇರುವಂತೆ ಮಾಡಿದ್ದಾರೆ. ಅದೆ[...] ಜಮೀನು, ಆಸ್ತಿ ಪಾಸ್ತಿ ಯಾವುದೂ ಇರದೆ ಕೂಲಿ[...] ನಂಬಿ ಬದುಕು ಸಾಗಿಸುತ್ತ ಬಂದಿದ್ದ ಶೇ 40ರಷ್ಟು [...] ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಳ್ಳದೆ ಇದ್ದ ಸಣ್ಣಪುಟ್ಟ ಗೂಡು ಗುಡಿಸಲುಗಳಿಗೆ ಪುಡಿಗಾಸಿನ [...] ಬರೆದುಕೊಂಡು ಹೋಗಿದ್ದಾರೆ.

ಬೀದಿಗೆ ಬಂತು ಬದುಕು

ಮುಳುಗಡೆ ಪ್ರದೇಶಗಳಲ್ಲಿ ಇದ್ದ ತಮ್ಮ ಆಸ್ತಿಪಾಸ್ತಿ[...] ಬೇಕಾಬಿಟ್ಟಿ ಬೆಲೆ ಏರಿಸಿಕೊಂ[...] ಶ್ರೀಮಂತರು ಸರಕಾರದಿಂದ ಬ[...] ಹಣದ ಮೂಟೆ ಕಟ್ಟಿಕೊಂಡು ಬೇರೆ [...] ಕಡೆಗಳಲ್ಲಿ ಜಮೀನು, ಆಸ್ತಿ ಖರೀ[...] ಪಟ್ಟಣಗಳನ್ನು ಸೇರಿ ಮನೆ ಮಠ ಬದ[...] ಕಟ್ಟಿಕೊಂಡರು. ಜೊತೆಗೆ ಮುಳುಗಡೆಯ[...] ಜಮೀನಿನಲ್ಲಿ ನೀರು ಬಂದು ನಿಲ್ಲುವ[...] ಕೇವಲ ವರ್ಷದಲ್ಲಿ ಮೂರು ತಿಂ[...] ಮಾತ್ರ. ಇನ್ನುಳಿದ ದಿನಗಳಲ್ಲಿ ಆರಾಮ[...] ಆ ಜಮೀನುಗಳಲ್ಲೂ ಅಕ್ರಮ ವ್ಯವಸಾ[...] ಮಾಡಿಕೊಂಡಿದ್ದಾರೆ. ಕಂತೆ ಕಂತೆ ಸರಕಾ[...] ಪರಿಹಾರದ ಜೊತೆಗೆ ತಮ್ಮದ[...] ಜಮೀನಿನ ಆದಾಯ[...] ಬರುತ್ತಿರುವುದರಿಂದ ಬದುಕು ಮತ್ತಷ್ಟು ಉತ್ತಮಗೊಂ[...] ಆದರೆ ನಿಜವಾಗಿಯೂ ಈ ಯೋಜ[...] ಬಲಿಯಾದವರೆಂದರೆ ಬಡವರು. ಬಿಡಿಗಾಸಿನ ಅ[...] ಬಂದಿದ್ದ ಪುಡಿಗಾಸನ್ನು ಕಟ್ಟಿಕೊಂಡು ಸರಕಾರದ[...] ತೋರಿಸಿದ ಪುನರ್ವಸತಿ ಕೇಂದ್ರಗಳನ್ನು ಸೇರಿಕೊ[...] ಇವರಿಗೆ ಕೆಲವೇ ದಿನಗಳಲ್ಲಿ ತಾವು ಎಲ್ಲವ[...]

▶ ▶

ಬಾದಾಮಿ: ಮಹೇಶ್ ಕರಜಗಿ ಎಂಬ ಗೆಬರು ಗಿರಾಕಿ


ಬಾದಾಮಿಯ ನಸೀಬೇ ಚೆನ್ನಾಗಿಲ್ಲ ಅಂತ ಕಾಣುತ್ತೆ. ಒಂದೆಡೆ ಮಹಾಗುಂಡಪ್ಪ ಪಟ್ಟಣಶೆಟ್ಟಿ ಎಂಬ ನಾಮರ್ಧ ಶಾಸಕ, ಶಾಸಕತ್ವದ ಎಲ್ಲಾ ಕಾರುಬಾರುಗಳನ್ನು ನಡೆಸುತ್ತಿರುವ ಅವನ ಹೆಂಡತಿ ಶಾಂತಮ್ಮ, ಈ ದಂಪತಿಗಳಿಗೆ ಮಾಸಿಕ ಕಪ್ಪ ಕಾಣಿಕೆಗಳನ್ನು ಅರ್ಪಿಸುತ್ತಾ ತಾಲ್ಲೂಕಿನ ಜನರನ್ನು ಸುಲಿಯುತ್ತಿರುವ ತಹಶೀಲ್ದಾರ್ ಮಹೇಶ್ ಕರಜಗಿ ಎಂಬ ಗೆಬರು ಗಿರಾಕಿ - ಇಂಥವರನ್ನೆಲ್ಲಾ ಪಡೆದಿದೆ ಎಂದಮೇಲೆ ಬಾದಾಮಿಯ ನಸೀಬು ಚೆನ್ನಾಗಿರಲು ಹೇಗೆ ಸಾಧ್ಯ ಹೇಳಿ.

ಅಸಲಿಗೆ ಈ ಕ್ಷೇತ್ರದ ಶಾಸಕ ಪಟ್ಟಣಶೆಟ್ಟಿಯೋ ಅಥವಾ ಅವನ ಹೆಂಡತಿ ಶಾಂತಮ್ಮನೋ ಎಂಬ ಅನುಮಾನವಂತೂ ಜನರಿಗೆ ಬರುತ್ತಿದೆ. ಏಕೆಂದರೆ, ಚರಂಡಿ ಕಾಮಗಾರಿಯ ಗುದ್ದಲಿ ಪೂಜೆಯಿರಲಿ ಅಥವಾ ಬಾರ್ ಅಂಗಡಿಯ ವಾರ್ಷಿಕೋತ್ಸವ ಇರಲಿ-ಎಲ್ಲಾ ಶಾಂತಮ್ಮನ ನೇತೃತ್ವದಲ್ಲಿಯೇ, ನಡೆಯುತ್ತದೆ. ವಿವಿಧ ಇಲಾಖೆಗಳಲ್ಲಿ ಪುಷ್ಕಳವಾಗಿ ಮೇಯುತ್ತಿರುವ ಸರ್ಕಾರಿ ಅಧಿಕಾರಿಗಳು, ಕಾಂಟ್ರಾಕ್ಟರುಗಳು, ಬ್ಯುಸಿನೆಸ್‌ಮೆನ್‌ಗಳು - ಹೀಗೆ ಎಲ್ಲ ರೀತಿಯ ಸುಲಿಗೆಕೋರರು ತಮ್ಮ ಲೂಟಿಗೆ ವಿಘ್ನ ಬಾರದಿರಲಿ ಎಂದು ಪ್ರತೀ ತಿಂಗಳು ಈ ಶಾಂತಮ್ಮನಿಗೆ ಕಪ್ಪಕಾಣಿಕೆಗಳನ್ನು ಅರ್ಪಿಸಿ ಆಶೀರ್ವಾದ ಪಡೆಯುತ್ತಾರೆ. ಪಟ್ಟಣಶೆಟ್ಟಿ ಎಂಬ ಅಮ್ಮೋರ ಗಂಡನದೇನಿದ್ದರೂ ಕೋಲುಬಸವನಂತೆ ತಲೆಯಲ್ಲಾಡಿಸುವ ಕೆಲಸ ಮಾತ್ರ. ಅಸಲೀ ಶಾಸಕಿ ಎಂದರೆ ಆತನ ಹೆಂಡತಿ ಶಾಂತಮ್ಮನೆ ಎಂಬುದು ಇಡೀ ಬಾದಾಮಿ ಜನಕ್ಕೆ ಗೊತ್ತಿರುವ ವಿಚಾರ.

ಈ ಶಾಂತಮ್ಮನಿಗೆ ಕಪ್ಪಕಾಣಿಕೆಯನ್ನು ಅರ್ಪಿಸಿ, ಆಶೀರ್ವಾದ ಪಡೆದು ನಿರಂತರ ಲೂಟಿಯಲ್ಲಿ ತೊಡಗಿರುವ ಹಲವಾರು ಅಧಿಕಾರಿಗಳಲ್ಲಿ ಮೊದಲನೇ ಸ್ಥಾನದಲ್ಲಿ ನಿಲ್ಲುವವನೆಂದರೆ ಬಾದಾಮಿ ತಾಲ್ಲೂಕಿನ ತಹಶೀಲ್ದಾರ್ ಮಹೇಶ್ ಕರಜಗಿ. ಈತನ ಸ್ವಂತ ಊರು ಬಿಜಾಪುರ ಜಿಲ್ಲೆಯ ಸಿಂಧಗಿ. ಮೊದ ಮೊದಲು ಅಫಜಲ್‌ಪುರದಲ್ಲಿ ತನ್ನ ಪ್ರೊಬೇಷನರಿ ಅವಧಿಯನ್ನು ಮುಗಿಸಿ ಮೇಯುವುದಕ್ಕೆ ಉತ್ತಮ ಹುಲ್ಲುಗಾವಲಂತಿರುವ ಬಾದಾಮಿಗೆ ಬಂದು ಒಕ್ಕರಿಸಿಕೊಂಡಿದ್ದಾನೆ. ತಾನೊಬ್ಬ ಲಿಂಗಾಯತನೆಂದು ಶಾಂತಮ್ಮಳಿಗೆ ಮಸ್ಕ ಹೊಡೆದು ಇನಿಶಿಯಲ್ ಕಪ್ಪಕಾಣಿಕೆಗಳನ್ನು ಅರ್ಪಿಸಿ, ಪ್ರತೀ ತಿಂಗಳೂ ತಪ್ಪದೇ ಪಾವತಿಸುತ್ತೇನೆಂಬ ಭರವಸೆ ಕೊಟ್ಟು ಇಲ್ಲಿಗೆ ಎತ್ತಂಗಡಿ ಮಾಡಿಸಿಕೊಂಡಿರುವುದು ಇಡೀ ಬಾದಾಮಿಗೇ ಗೊತ್ತಿರುವ ರಹಸ್ಯ.

ಕರಜಗಿಯ ಐಲುಪೈಲುಗಳು

ಈತ ತಹಶೀಲ್ದಾರ್ ಕಚೇರಿಯಲ್ಲಿ ಒಂದೊಂದು ಕೆಲಸಕ್ಕೂ ಒಂದೊಂದು ರೀತಿಯ ಲಂಚವನ್ನು ಫಿಕ್ಸ್ ಮಾಡಿಟ್ಟಿದ್ದಾನೆ. ಯಾವ್ಯಾವ ಕೆಲಸಕ್ಕೆ ಎಷ್ಟೆಷ್ಟು ಲಂಚ ತೆಗೆದುಕೊಳ್ಳಬೇಕು ಹಾಗೂ ಅದರಲ್ಲಿ ತನಗೆಷ್ಟು ಪರ್ಸೆಂಟೇಜ್ ರವಾನಿಸಬೇಕು ಎಂದು ಗ್ರಾಮ ಲೆಕ್ಕಾಧಿಕಾರಿಗಳಿಗೂ ಈತ ಮೌಖಿಕ ನಿರ್ದೇಶನ ಕೊಟ್ಟಿದ್ದಾನೆ. ತನ್ನ ಕಚೇರಿಯಲ್ಲಿ ಯಾರಾದರೂ ಲಂಚ ಕೊಡಲು ನಿರಾಕರಿಸಿದರೆ ಅವರ ಪಾಡಂತೂ ಹೇಳತೀರದು. ಕಚೇರಿಗೆ ಅಲೆದೂ ಅಲೆದೂ ಅವರ ಚಪ್ಪಲಿ ಸವೆಯುವುದು ಗ್ಯಾರಂಟಿ. ಯಾರಾದರೂ ಇದನ್ನು ಪ್ರತಿಭಟಿಸಿದರೆ ಅವರಿಗೆ ಥೇಟ್ ಒಬ್ಬ ಗೂಂಡಾನಂತೆ ಧಮಕಿ ಹಾಕುವುದನ್ನೂ ಚೆನ್ನಾಗಿ ರೂಢಿಸಿಕೊಂಡಿದ್ದಾನೆ. ಈ ದುಂಡಾವರ್ತಿಯಲ್ಲಿ ಸಹಕರಿಸಲು ಬಗಲಿ, ನದಾಫ್ ಮತ್ತು ಛೀಫ್ ಡ್ರೈವರ್ ಹುಲ್ಲಿಕೇರಿಯಂಥವರನ್ನು ಜೊತೆಗಿಟ್ಟುಕೊಂಡಿದ್ದಾನೆ. ಶಾಸಕ ಪಟ್ಟಣಶೆಟ್ಟಿಯ ಅರ್ಧಾಂಗಿಯೇ ಬೆನ್ನಿಗಿದ್ದ ಮೇಲೆ ಇವನನ್ನು ಕೇಳಬೇ[...]


ಮಹೇಶ್ ಕರಜಗಿ

ಮೊನ್ನೆ ಬಾದಾಮಿ ಸುತ್ತ ಮಳೆ[...] ರುದ್ರನರ್ತನ ಮಾಡಿತು. ಬಾದಾಮಿ[...] ನಗರವೊಂದರಲ್ಲಿಯೇ ಕನಿಷ್ಠವೆಂದರು[...] 200 ಮನೆಗಳು ಜಲಾವೃತಗೊಂಡ[...] ಸುತ್ತಮುತ್ತ ಹಳ್ಳಿಗಳಲ್ಲಿ ಈ ಅತಿವೃ[...] ಮನೆ-ಬೆಳೆ ಸರ್ವನಾಶವಾಗಿ ಹೋದವು. ಇದಕ್ಕೆ ಬಲಿಯಾದ ಜನರು ರೋದಿಸುತ್ತಿದ್ದರೆ ತಹಶೀಲ್ದಾ[...] ಮಹೇಶ್ ಕರಜಗಿಯ ಮೊಗದಲ್ಲಿ ಮಂದಹಾಸ ಮೂಡಿತ್ತು. ಏಕೆಂದರೆ, ಅತಿವೃಷ್ಟಿಗೆ ಬಲಿಯಾದವರಿಗಾಗಿ ಸರ್ಕಾರದಿಂದ ಪರಿಹಾರ ಹರಿದುಬರುತ್ತದಲ್ಲ? ಅದರಲ್ಲಿ ಪುಷ್ಕಳವಾಗಿ ಮೇಯಬಹುದು ಎಂಬುದು ಆತನ ಆಲೋಚನೆಯಾಗಿತ್ತು. ಅಂದುಕೊಂಡಂತೆಯೇ ಮಾಡಿಯೂ ಬಿಟ್ಟ. ನೆರೆ ಪರಿಹಾರಕ್ಕಾಗಿ ಹರಿದು ಬಂದ ದುಡ್ಡಿನಲ್ಲಿ ಅರ್ಧಕ್ಕಿಂತ ಹೆಚ್ಚನ್ನು ಸೀದಾ ಜೇಬಿಗಿಳಿಸಿಕೊಂಡು ಒಂದಿಷ್ಟು ಪಾಲನ್ನು ತನ್ನ ಪೋಷಕ ಶಾಂತಮ್ಮಳಿಗೂ ಕೊಟ್ಟು ದುಂಡಗಾಗಿಬಿಟ್ಟ.

ಈತನಿಗೆ ತಹಶೀಲ್ದಾರ್ ಕಚೇರಿಯಲ್ಲಿ ಸಿಗುತ್ತಿರುವ ಕಮಾಯಿ ಸಾಕಾಗುತ್ತಿಲ್ಲ ಅಂತ ಕಾಣು[...] ಅದಕ್ಕಾಗಿಯೇ ಈಗ ಮಲಪ್ರಭಾ ನದಿಯ ಉಸುಕಿ[...] ಕಾಂಟ್ರಾಕ್ಟ್ ದಂಧೆಗೆ ಕೈಹಾಕಿದ್ದಾನೆ. ಉಸುಕು

▶ ▶

...ಕೊಂಡಿದ್ದೇವೆ ಎಂಬ ಅರಿವು ಆಗತೊಡಗಿತು. ...ಷ್ಯದ ಚಿಂತೆ ಕಾಡತೊಡಗಿತು. ಕೆಲಸವೂ ಇಲ್ಲದೆ ...ಯುವೂ ಇಲ್ಲದೆ ಕೈಯಲ್ಲಿದ್ದ ದುಡ್ಡು ಹೊಟ್ಟೆಗಾಗಿ ... ಹೋಗಿದೆ. ಹೀಗಾಗಿ ಬದುಕಿಗೆ ಸಣ್ಣದೊಂದು ...ಯು ಕಟ್ಟಿಕೊಳ್ಳಲಾಗದೆ ಸರಕಾರ ನಿರ್ಮಿಸಿರುವ ಆಶ್ರಯ ...ಮುಗಳು ಹಾಗು ತಗಡಿನ ಶೆಡ್‌ಗಳಲ್ಲೇ ಜೀವನ ...ಬೇಕಾಗಿದೆ. ತಮ್ಮ ಬದುಕು ಹೇಗೋ ಮುಗಿಯುತ್ತ ...ದೆ ಆದರೆ ತಮ್ಮ ಮಕ್ಕಳು ಮರಿಗಳು ಕೂಡ ...ತಹ ನರಕದಲ್ಲಿ ಬದುಕಬೇಕಲ್ಲ ಎಂದು ಕಣ್ಣೀರಿಡುವುದು ... ಸಾಮಾನ್ಯ ಸಂಗತಿಯಾಗಿಬಿಟ್ಟಿದೆ. ಯಾರದೋ ...ನದ ಉದ್ಧಾರಕ್ಕೆ ತಮ್ಮನ್ನು ಬಲಿಕೊಡಲಾಗಿದೆ ...ಬುದು ಈಗ ಇಲ್ಲಿನ ಜನರ ಅರಿವಿಗೆ ಬಂದಿದೆ.

ಶೆಡ್ ಕ್ಯಾಂಪ್‌ಗಳು

...ದೇಶ ಬಿಟ್ಟು ದೇಶಕ್ಕೆ ವಲಸೆ ಬಂದವರ ಆಶ್ರಯ



...ಲೋನಿಗಳಿರುತ್ತವಲ್ಲ, ಅಲ್ಲಿ ಬದುಕಲು ಬೇಕಾದ ಕನಿಷ್ಠ ...ಲಭ್ಯಗಳಾದರೂ ಇರುತ್ತವೆ. ಆದರೆ ಇಲ್ಲಿ ಸರಕಾರದ ...ಹತ್ವಾಕಾಂಕ್ಷೆಗೆ ತಮ್ಮ ಬದುಕನ್ನೇ ತ್ಯಾಗ ಮಾಡಿರುವ ...ಂತರ ಜನರ ಬದುಕು ವಲಸಿಗರಿಗಿಂತ ಕಡೆಯಾಗಿದೆ. ...ಡ ಶೆಡ್ಡುಗಳಿಂದ ನಿರ್ಮಿತವಾಗಿರುವ ಕ್ಯಾಂಪುಗಳು ...ವುದೇ ಮೂಲಭೂತ ಸೌಲಭ್ಯಗಳಿಲ್ಲದೆ ...ಗೂಡುಗಳಂತಾಗಿವೆ. ಕೋಟಿಗಟ್ಟಲೆ ಲೆಕ್ಕ ತೋರಿಸಿ ... ಮಣ್ಣಿನಿಂದ ನಿರ್ಮಿಸಲಾಗಿರುವ ರಸ್ತೆಗಳು ...ಯಾದರೆ ಸಾಕು ಕೆಸರಿನ ಗುಂಡಿಗಳಾಗುತ್ತವೆ. ಇಲ್ಲಿ ...ಡಲು ಗಟ್ಟಿ ಕುಳಗಳೇ ಬೇಕು. ಮಳೆ ಸ್ವಲ್ಪ ...ರಾದರೆ ಸಾಕು ನೀರು ಶೆಡ್ಡುಗಳನ್ನೇ ಹೊಕ್ಕು ಇಡೀ ... ನೀರು ಹೊರಹಾಕುವುದೇ ಬಹುಮುಖ್ಯ ...ವಾಗಿಬಿಡುತ್ತದೆ. ಮಕ್ಕಳು ಮರಿಗಳೊಂದಿಗೆ ಈ ...ತನಾಮಯ ಪರಿಸರದಲ್ಲಿ ಜೀವಿಸುವ ಜನರ ಬದುಕು ...ನಾಜನಕವಾಗಿದೆ. ಇಲ್ಲಿ ವಾಸಿಸುವ ಜನರಿಗೆ ಸರಿಯಾದ ...ವಾದ ನೀರಿನ ವ್ಯವಸ್ಥೆ ಕೂಡಾ ಇಲ್ಲವೆಂದರೆ ಇವರಿಗೆ ...ಕಾರಗಳು ಮಾಡಿದ ಮೋಸ ಎಂತದೆಂದು ಅರ್ಥವಾಗುತ್ತದೆ.

ದುಡಿವ ಕೈಗಳಿಗೆ ಕೆಲಸವೂ ಇಲ್ಲ

ತಮ್ಮ ತಮ್ಮ ಊರುಗಳಲ್ಲಿ ಕೂಲಿಮಾಡಿ ಕೂಳು ಸಂಪಾದಿಸುತ್ತಿದ್ದ ಕೈಗಳು ಇಲ್ಲಿ ಕೆಲಸವಿಲ್ಲದೆ ಕಂಗಾಲಾಗಿವೆ. ಸ್ವಂತ ಜಮೀನು ಎಂಬುದು ಇರದಿದ್ದರೂ ಅಕ್ಕಪಕ್ಕದ ಕೃಷಿ ಜಮೀನಿನಲ್ಲಿ ಇವರಿಗೆ ಹೊಟ್ಟೆಹೊರೆಯುವಷ್ಟು ಕೂಲಿ ಕೆಲಸವಾದರೂ ಸಿಗುತ್ತಿತ್ತು. ಬೆಳಗ್ಗೆಯಿಂದ ಸಂಜೆವರೆಗಾದರೂ ದುಡಿದು ಜೀವನಸಾಗಿಸುತ್ತಿದ್ದ ಜನರಿಗೆ ಇಲ್ಲಿ ಅದೂ ಇಲ್ಲವಾಗಿದೆ. ಯುವಕರು ನಗರಗಳಿಗೆ ಹೋಗಿ ಹೋಟೆಲುಗಳಲ್ಲಿ ಅವರು ಹೇಳಿದಂತಹ ಕೆಲಸಮಾಡಿ ಚೂರು ಪಾರು ದುಡಿಯುತ್ತಿದ್ದರೂ ಅದು ಕೆಲವೇ ಜನರಿಗೆ ಮಾತ್ರ ಅನ್ನ ನೀಡುತ್ತಿದೆ. ಇನ್ನೂ ಕೆಲವರು ಹಮಾಲಿ ಕೆಲಸ ಮಾಡುತ್ತಿದ್ದಾರೆ. ಅವರು ಸಹ ಬೆರಳೆಣಿಕೆಯಷ್ಟು ಮಾತ್ರ.

ಇನ್ನುಳಿದಂತೆ ಕುಟುಂಬ ನಿರ್ವಹಣೆಯ ಅನಿವಾರ್ಯ ಜವಾಬ್ದಾರಿ ಹೊರಲೇಬೇಕಾದ ಮಹಿಳೆಯರ ಪಾಡಂತೂ ಹೇಳತೀರದು. ಉಳ್ಳವರ ಮನೆಯಲ್ಲಿ ಮನೆಗೆಲಸ ಮಾಡುವುದು, ಹೊಟೇಲುಗಳಲ್ಲಿ ಪಾತ್ರೆ ತೊಳೆಯುವ ಕೆಲಸಕ್ಕೆ ಹೋಗುವುದು, ಇನ್ನಿತರ ಸಣ್ಣಪುಟ್ಟ ಕೆಲಸಕ್ಕೆ ಹೋಗುವುದು ಬಿಟ್ಟರೆ ಇಲ್ಲಿ ಪರ್ಯಾಯ ಉದ್ಯೋಗಗಳೇ ಇಲ್ಲ, ಯುವಕರಿಗಂತೂ ಕಟ್ಟೆ ಮೇಲೆ ಕಾರ್ಡ್ಸ್ ಆಡುವುದೇ ಫುಲ್ ಟೈಮ್ ಕೆಲಸವಾಗಿದೆ.

ಕಿವುಡ ಸರಕಾರ, ದುಷ್ಟ ರಾಜಕಾರಣಿಗಳು


ಸರಕಾರದ ಬಣ್ಣದ ಮಾತುಗಳನ್ನು ನಂಬಿ ಇಷ್ಟೆಲ್ಲ ಸಂಕಟ ಅನುಭವಿಸುತ್ತಿರುವ ಜನರಿಗೆ ಇಲ್ಲಿಯವರೆಗೂ ಆಳುವವರಿಂದ ಸಿಕ್ಕಿದ್ದು ಬರೀ ಭರವಸೆಗಳು ಮಾತ್ರ. ಮಾನಗೇಡಿ ಚರಂತಿಮಠ ಇಲ್ಲಿ ಶಾಸಕನಾಗಿ ವಕ್ಕರಿಸಿದಾಗಿನಿಂದಲೂ ಇಲ್ಲಿನ ಸಂಕಟಗಳು ಮತ್ತಷ್ಟು ಬಲಪಡೆದುಕೊಂಡಿವೆ. ತನ್ನ ಅನೈತಿಕ ಆದಾಯದ ಮೂಲವಾದ ಬಸವೇಶ್ವರ ವಿದ್ಯಾವರ್ಧಕ ಸಂಘದ ಹೆಸರಲ್ಲಿ ಕೋಟಿಕೋಟಿ ಸರಕಾರದ ಹಣ ಲೂಟಿಯಾಗಿದ್ದರೂ ಇನ್ನೂ ಹೆಚ್ಚಿನ ಹಣಕ್ಕಾಗಿ ಹಾತೊರೆಯುತ್ತಿದ್ದಾನೆಯೇ ಹೊರತು ಈ ಬಡವರ ಬದುಕಿಗೆ ಏನಾದರೂ ಮಾಡುವ ಒಂದು ಸಣ್ಣ ಪ್ರಯತ್ನವನ್ನೂ ಮಾಡಿಲ್ಲ, ಆದರೆ ಜಾತಿ ಮತ ಧರ್ಮದ ಯಾವ ಹಂಗೂ ಇಲ್ಲದೆ ಅನಾಥರಾಗಿರುವ ಜನರಲ್ಲೂ ಧರ್ಮದ ವಿಷಬೀಜ ಬಿತ್ತುವ ಕೆಲಸವನ್ನಂತೂ ಎಡೆಬಿಡದೆ ನಡೆಸಿದ್ದಾನೆ.

- ಮಹಾಲಿಂಗಪ್ಪ ಆಲಬಾಳ

...ಣಿಕೆಯ ಲಾರಿಗಳಿಂದ ಈ ...ಜಿ 250 ರೂ. ವಸೂಲಿ ...ಸುತ್ತಿದ್ದವನು ಈಗ ಅದನ್ನು ... ರೂ.ಗಳಿಗೆ ಏರಿಸಿದ್ದಾನೆ. ...ಕೊಡಲು ನಿರಾಕರಿಸಿದವರ ...ಗಳನ್ನು ನೇರವಾಗಿ ಪೊಲೀಸ್ ...ನ್‌ಗೆ ಎಳೆತಂದು ಕೇಸು, ...ರ್ಟು, ಕಚೇರಿ ಅಂತ ...ಮಾಡಿಸುತ್ತಾನೆ.

...ಮೊನ್ನೆ ಕರಜಗಿಯ ಮಗಳ ಸೀಮಂತ ...ರ್ಯವಿತ್ತು, ಅದಕ್ಕೆ ಬಾದಾಮಿಯ ಭೂಗಳ್ಳರೆಲ್ಲಾ ...ಮ ಕೆಜಿಗಟ್ಟಲೆ ಬಂಗಾರವನ್ನು ಉಡುಗೊರೆಯಾಗಿ ...ಟ್ಟು ಹೋಗಿದ್ದಾರೆ ಎಂದರೆ ಆ ಎಲ್ಲಾ ...ಳ್ಳರಿಗೆ ಈತ ಹೇಗೇಗೆ ಕೊಳ್ಳೆಹೊಡೆಯುವುದಕ್ಕೆ ...ಕೂಲ ಮಾಡಿಕೊಟ್ಟಿರಬಹುದೆಂದು ...ದಾದರೂ ಊಹಿಸಬಹುದು. ಈ ಭೂಗಳ್ಳರ ...ಉಡುಗೊರೆಗೆ ಪ್ರತಿಯಾಗಿ ಈತ ತಾಲ್ಲೂಕಿನ ...ಸರ್ಕಲ್‌ನಲ್ಲಿ 134 ಜನ ...ಲೆಕ್ಕಾಧಿಕಾರಿಗಳನ್ನು ಕರೆಸಿ ರೈತರ ಹೊಲಗಳನ್ನು ... ಮಾಡಿಸಿಕೊಳ್ಳುವುದಕ್ಕೆ ಎಲ್ಲಾ ...ಕಾರಿಗಳಿಗೂ ಸಹಕರಿಸಬೇಕೆಂದು ಆಜ್ಞೆ ...ಸಿದ್ದಾನೆ.

...ಈತ ಈ ದೇಶದ ನ್ಯಾಯಾಂಗ ವ್ಯವಸ್ಥೆಗೆ ...ಷ್ಟು ಗೌರವ ಕೊಡುತ್ತಾನೆ ಎಂಬುದಕ್ಕೆ ಮೊನ್ನೆ ...ಬರ್ 30ರಂದು ಬಾದಾಮಿ ನ್ಯಾಯಾಧೀಶರಾದ ...ರರಾವ್ ನೀಡಿದ ಪತ್ರವೇ ನಿದರ್ಶನವಾಗಿ ...ದೆ. ಜಮೀನು ಮಾರಿ ಬಾದಾಮಿ ತಾಲ್ಲೂಕಿನ ... ಗ್ರಾಮದ ಬಡ ಹೆಣ್ಣು ಮಗಳೊಬ್ಬಳಿಗೆ ಹಣ ...ಬೇಕೆಂಬ ನಿರ್ದೇಶನವನ್ನು ನ್ಯಾಯಾಲಯವು ...ಲ್ದಾರರಿಗೆ ನೀಡಿತ್ತು, ಈ ಬಗ್ಗೆ ವರದಿ ಸಲ್ಲಿಸಲು



ಪಟ್ಟಣ್ಣ ಶೆಟ್ಟಿ ಮತ್ತು ಶಾಂತಮ್ಮ


ಖುದ್ದು ತಹಶೀಲ್ದಾರರೇ ನ್ಯಾಯಾಲಯಕ್ಕೆ ಹಾಜರಾಗಬೇಕೆಂದು ತಿಳಿಸಲಾಗಿತ್ತಾದರೂ ತನಗಿಂತ ಕಿರಿಯವರಾದ ನ್ಯಾಯಾಧೀಶನೆದುರು ನಿಲ್ಲುವುದಕ್ಕೆ ಗರ್ವಿಷ್ಠ ಕರಜಗಿಗೆ ಕಷ್ಟವಾಯಿತು. ಹೀಗಾಗಿ ನಾಲ್ಕಾರು ತಿಂಗಳು ಆತ ನ್ಯಾಯಾಲಯಕ್ಕೆ ಹೋಗಲೇ ಇಲ್ಲ, ಇದರಿಂದ ಕೆಂಡಾಮಂಡಲವಾದ ನಿಷ್ಠಾವಂತ ನ್ಯಾಯಾಧೀಶ ಶ್ರೀಧರ್‌ರಾವ್ ತಹಶೀಲ್ದಾರರ ಪರವಾಗಿ ನ್ಯಾಯಾಲಯಕ್ಕೆ ಬಂದಿದ್ದ ಶಿರಸ್ತೆದಾರರನ್ನೇ ಬಂಧಿಸುವಂತೆ ಆಜ್ಞೆ ಮಾಡಿದ್ದಾರೆ.

ಹೀಗೆ ಒಂದಿಲ್ಲದೊಂದು ರೀತಿಯಲ್ಲಿ ಬಾದಾಮಿಯ ಜನರನ್ನು ಹಿಂಸಿಸುತ್ತಿರುವ ಕರಜಗಿಯಿಂದ ಜನ ಬೇಸತ್ತು ಹೋಗಿದ್ದಾರೆ. ಇಂದಲ್ಲ ನಾಳೆ ಈತ ಇಲ್ಲಿಂದ ಕಾಲ್ತೆಗೆಯಬಹುದೆಂಬ ನಿರೀಕ್ಷೆಯಲ್ಲಿದ್ದ ಅವರಿಗೆ ಈತ ಪರ್ಮನೆಂಟಾಗಿ ಗೂಟ ಹೊಡೆದುಕೊಂಡು ಕುಳಿತಿರುವುದು ಇತ್ತೀಚೆಗೆ ಅರಿವಿಗೆ ಬರುತ್ತಿದೆ. ಹಾಗಾಗಿಯೇ, ಅವರ ಸಿಟ್ಟು ರಟ್ಟೆಗೆ ಬರುತ್ತಿರುವಂತೆ ಕಾಣುತ್ತಿದೆ. ಹಾಗೇನಾದರೂ ಆದರೆ ಅಪ್ಪೋರ ಗಂಡ ಶಾಸಕ ಪಟ್ಟಣಶೆಟ್ಟಿ, ಅವನ ಹೆಂಡತಿ ಶಾಂತಮ್ಮ ಮತ್ತು ಈ ತಹಶೀಲ್ದಾರ ಮಹೇಶ್ ಕರಜಗಿ – ಈ ಮೂವರನ್ನೂ ಬಾದಾಮಿಯ ಬೀದಿಯಲ್ಲಿ ಅಟ್ಟಾಡಿಸಿಕೊಂಡು ಬಡಿಯುವುದು ಗ್ಯಾರಂಟಿ.

■ ಮೋಹನ್‌ರಾಜ್


ಕಲಬುರ್ಗಿ ಜಿ.ಪಂ: ಜಾಫರ್ ಎಂಬ ಕಮಂಗಿ

ಕಲಬುರ್ಗಿ ಜಿಲ್ಲೆಯಲ್ಲಿರುವ ಬಹುತೇಕ ರಾಜಕಾರಣಿಗಳು ದಂಡಪಿಂಡಗಳು ಎಂಬುದು ಇಲ್ಲಿಗೆ ಬಂದು ನೆಲೆನಿಂತ ಬಹುತೇಕ ಅಧಿಕಾರಿಗಳಿಗೆ ಮನದಟ್ಟಾಗಿರುವಂತಿದೆ. ಯಾಕೆಂದರೆ ಇಲ್ಲಿನ ರಾಜಕಾರಣಿಗಳು ಪರ್ಸೆಂಟೇಜ್ ವೀರರು. ಸರಕಾರದ ಯೋಜನೆಗಳ ಬಗ್ಗೆ ವಿವರಗಳು, ಅದರ ಸದುಪಯೋಗ, ಕಳಕಳಿ ಅದ್ಯಾವುದೂ ಇವರಿಗೆ ಬೇಡ. ಸಂಬಂಧಿಸಿದ ಅಧಿಕಾರಿಗಳಿಂದ ಪ್ರತಿ ತಿಂಗಳು ಇಂತಿಷ್ಟು ಅಂತ ಇವರ ಜೇಬಿಗೆ ತಲುಪಿದರೆ ಸಾಕು. ಅವರೆಲ್ಲಿ ಸಹಿ ಮಾಡೆಂದು ಹೇಳುತ್ತಾರೋ ಅಲ್ಲೆಲ್ಲ ಇವರು ಸಹಿಹಾಕಿ ಸುಮ್ಮನೆ ಕುಳಿತುಕೊಳ್ಳುತ್ತಾರೆ.



ದೂರದ ಜಿಲ್ಲೆಗಳಿಂದ ಈ ಭಾಗದ ಜಿಲ್ಲೆಗಳಿಗೆ ಅಧಿಕಾರಿಗಳು ವರ್ಗಾವಣೆಯಾಗಿ ಬಂದಾಗ ಮೊದಮೊದಲು ಪೇಚಾಡುತ್ತಾರೆ. ತದನಂತರ ಅವರು ಇಲ್ಲಿ ಸೆಟ್ಲ್ ಆಗಿಬಿಟ್ಟರೆಂದರೆ ಕಿವಿಹಿಡಿದು ಕಿತ್ತರೂ ಈ ಭಾಗವನ್ನು ಬಿಟ್ಟು ಹೋಗಲು ತಯಾರಿರುವುದಿಲ್ಲ. ಯಾಕೆಂದರೆ ಮೇಯುವುದಕ್ಕೆ ಇದು ಸೂಕ್ತವಾದ ಜಾಗ ಎಂಬುದು ಅವರ ಅರಿವಿಗೆ ಅದಾಗಲೇ ಬಂದಿರುತ್ತದೆ.

ಹೈದ್ರಾಬಾದ್ ಕರ್ನಾಟಕದ ಅಭಿವೃದ್ಧಿಗೆಂದೇ ಇರುವ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಹಿಡಿದು ಜಿಲ್ಲಾಧಿಕಾರಿಗಳ ಕಚೇರಿ, ಸಹಕಾರ ಇಲಾಖೆ, ಪೋಲಿಸ್ ಇಲಾಖೆ– ಹೀಗೆ ನೀವು ಯಾವುದೇ ಇಲಾಖೆ ಹೊಕ್ಕು ನೋಡಿದರೂ ಎಲ್ಲೆಡೆ ಕಮ್ಮಗೆ ತಿಂದುಂಡು ದುಂಡಗಾದ ಭಾವುಗ, ಕತ್ತೆ, ಹಂದಿ, ಕಿರುಬಗಳೇ ಕಾಣಸಿಗುತ್ತವೆ. ದಿ.ನಜೀರ ಸಾಬರ ಕನಸಿನ ಕೂಸಾದ ಪಂಚಾಯತ್ ರಾಜ್ ಇಲಾಖೆಯ ಮುಖ್ಯ ಗುರಿ ಹಳ್ಳಿಹಳ್ಳಿಗೂ ರಾಜಕೀಯ ವಿಕೇಂದ್ರೀಕರಣವಾಗುವುದು. ಜೊತೆಗೆ ತಾಲೂಕಿನ ಅಭಿವೃದ್ಧಿಗೆ ತಾಲ್ಲೂಕು ಪಂಚಾಯತಿ ಶ್ರಮಿಸಿದರೆ, ಹಳ್ಳಿಗಳ ಅಭಿವೃದ್ಧಿ ಬಗ್ಗೆ ಅಲ್ಲಿನ ಜನರಿಂದ ಚುನಾಯಿತರಾದ ಸದಸ್ಯರೇ ನಿರ್ಧರಿಸಬೇಕು. ಹಾಗೆಯೆ ಜಿಲ್ಲೆಯ ಅಭಿವೃದ್ಧಿಯನ್ನು ಜಿಲ್ಲಾ ಪಂಚಾಯತಿಯಲ್ಲಿ ಗೆದ್ದು ಬಂದ ಸದಸ್ಯರೆ ನಿರ್ಧರಿಸಬೇಕೆಂಬ. ಆದರೆ ಈ ಸದುದ್ದೇಶಗಳು ಗುಲಬರ್ಗಾದಲ್ಲಿ ಅನುಷ್ಠಾನವಾಗಿದೆಯೆ? ಎಂದು ಇಣುಕಿನೋಡಿದರೆ ಎಂಥವರ ಎದೆಯೂ ಧಸಕ್ ಎಂದು ಬಿಡುತ್ತದೆ.



ಜಿ.ಪಂ. ಕಚೇರಿ

ಈ ಮೊದಲೆ ಬಹುಮತವಿಲ್ಲದ ಜಿಲ್ಲಾ ಪಂಚಾಯತ್ ಅಧ್ಯಕ್ಷಸ್ಥಾನವನ್ನು ಇದುವರೆಗೆ ನಿಭಾಯಿಸಿದ ಶ್ರೀಮತಿ ಭಾರತಿ ಪಾಟೀಲ ಆಗಲಿ, ಜಿಲ್ಲಾ ಪಂಚಾಯತ್‌ನ ಉಪಾಧ್ಯಕ್ಷ ಸ್ಥಾನವನ್ನು ಅನಾಯಾಸ ಹೊಡಕೊಂಡ ಗದ್ದೆಪ್ಪ ಪರಮಣ್ಣ ಗುರಿಕಾರ್ ಅವರನ್ನಾಗಲಿ ಎಲ್ಲರನ್ನು ತನಗೆ ಹೇಗೆ ಬೇಕೋ ಹಾಗೆ ಕುಣಿಸುವ ತಾಕತ್ತನ್ನು ಇಲ್ಲಿನ ಇ.ಓ. ಜಾಫರ್ ಪಡಕೊಂಡಿದ್ದಾನೆ. ಈತ ಗುಲಬರ್ಗಾದ ಜಿಲ್ಲಾ ಪಂಚಾಯತಿಯಲ್ಲಿ ಕುಳಿತುಕೊಂಡೇ ಇಡೀ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಹಾಗೂ ಗ್ರಾಮ ಪಂಚಾಯತಿಗಳ ಕ್ರಿಯಾಯೋಜನೆಯನ್ನು ನಿಭಾಯಿಸುತ್ತಿದ್ದಾನೆ. ಈ ಮೂಲಕ ಪಂಚಾಯತ್ ರಾಜ್ ಕಲ್ಪನೆಯನ್ನೆ ಈತ ಸತ್ಯನಾಶ ಮಾಡಿದ್ದಾನೆ.

ವಿಪರ್ಯಾಸದ ಸಂಗತಿ ಯಾವುದೆಂದರೆ ಈ ಅವಿವೇಕಿ ಜಾಫರ್‌ನ ಮೋಸದ ಜಾಲಕ್ಕೆ ಬಲೆ ಬೀಳದ ಮಿಕಗಳೆ ಇಲ್ಲಿ ಇಲ್ಲದಿರುವುದು. ಜಾಫರ್‌ನ ಯೋಜನೆಗಳಾದರೂ ಜನಪರವಾಗಿವೆಯೆ ಎಂದು ನೋಡಿದರೆ ಅವೆಲ್ಲವೂ ಕಬಳಿಕೆಗಾಗಿ ಮಾಡಿದ ಕಸರತ್ತುಗಳು ಎಂದು ಮೇಲುನೋಟಕ್ಕೆ ಅರ್ಥವಾಗುತ್ತವೆ.

ಹಿಂದುಳಿದ ಪ್ರದೇಶ ಅನುದಾನ ನಿಧಿ ಯೋಜನೆಯ ಆದಿ ಜಿಲ್ಲೆಯ 337 ಗ್ರಾಮ ಪಂಚಾಯತಿಗಳಿಗೆ ತಲಾ 3,60,460 ಗಳಂತೆ ಒಟ್ಟು 12 ಕೋಟಿ 14 ಲಕ್ಷ 75 ಸಾವಿರ ರೂ.ಗಳನ್ನು ಜಿಲ್ಲಾ ಪಂಚಾಯತಿ ನಿಗದಿಗೊಳಿಸಿದೆ. ಈ ಬೃಹತ್ ಮೊತ್ತದ ಹಣದಲ್ಲಿ ಯಾವ ಯಾವ ಕಾಮಗಾರಿಗಳು ಕೈಗೊಳ್ಳಬೇಕು? ಯಾವ ಯೋಜನೆಗಳಿಂದ ತಮ್ಮ ಗ್ರಾಮ ಅಭಿವೃದ್ಧಿಯಾಗುತ್ತದೆ? ಎಂದು ನಿರ್ಧರಿಸುವವರು ಆಯಾ ಗ್ರಾಮ ಪಂಚಾಯತಿಯ ಸದಸ್ಯರು–ಅಧ್ಯಕ್ಷರು. ಆದರೆ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿಗಳಿಗೂ ಒಂದೇ ರೀತಿಯ ಕ್ರಿಯಾ ಯೋಜನೆಯನ್ನು ಈ ಮೀರಜಾಫರ್ ತಾನೆ ತಯಾರಿಸಿ, ಇದಕ್ಕೆ ಗ್ರಾಮ ಪಂಚಾಯತಿಯ [illegible] ಸದಸ್ಯರು ಒಪ್ಪಿಗೆ ನೀಡಲಾಗಿದೆ ಎಂಬ ಠರಾವಿನ ಮಾದರಿ ಪ್ರತಿಯನ್ನು ಎಲ್ಲಾ ಗ್ರಾಮಪಂಚಾಯತಿಗಳಿಗೆ ರವಾನಿಸಿದ್ದಾನೆ. ಈ ಮಹಾಶಯ ಕಳಿಸಿದ ಠರಾವಿನ ಪ್ರತಿಗೆ ಸಹಿ ಹಾಕಿ ದಿ. 11-8-2008 ರಂದು ಕಚೇರಿಗೆ ಕಳಿಸಬೇಕೆಂದು ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತ್ ಕಾರ್ಯದರ್ಶಿಗಳಿಗೆ ಮೌಖಿಕವಾಗಿ ಒತ್ತಾಯಪಡಿಸಿದ್ದಾನೆ. ಈಗಾಗಲೆ ಕೆಲವರು ಹೆದರಿ, ಸಂಬಂಧಿಸಿದ ತಾಲೂಕು ಪಂಚಾಯತಿ ಅಧ್ಯಕ್ಷನ, ಗ್ರಾಮ ಪಂಚಾಯತಿ ಅಧ್ಯಕ್ಷರ ಸಹಿ ಪಡೆದು ಎಲ್ಲಾ ಕಾರ್ಯದರ್ಶಿಗಳು ಗುಲಬರ್ಗಾ ಜಿಲ್ಲಾ ಪಂಚಾಯತಿಯ ಇ.ಓ. ಜಾಫರ್‌ಗೆ ಕಳಿಸಿದ್ದಾರೆ.

ಇದೇನು ಪ್ರಜಾಪ್ರಭುತ್ವವೋ? ಅಥವಾ ಮಜಾ ಪ್ರಭುತ್ವವೋ?

ಹೋಗಲಿ ಈ ಮಹಾಶಯ ಜಾಫರ್ ತಯಾರಿಸಿದ ಕರಡುಯೋಜನೆಗಳಾದರೂ ಕೆಲಸಕ್ಕೆ ಬರುವಂತಿವೆಯೆ? ನೀವೇ ಅವುಗಳ ಮೇಲೊಮ್ಮೆ ಕಣ್ಣಾಡಿಸಿ.

ಅ) ಗ್ರಾಮ ಪಂಚಾಯತ್ ವರದಿಯನ್ನು ಸಿದ್ಧಪಡಿಸುವುದು ಅಂದರೆ ಹಳ್ಳಿಗಳಲ್ಲಿಯ ಮಣ್ಣು, ಬೆಳೆ, ಕೆರೆ, ಜನಸಂಖ್ಯೆ ಬಾವಿ ಇನ್ನಿತರ ಸಂಗತಿಗಳನ್ನು ದಾಖಲಿಸುವುದಕ್ಕಾಗಿ 50,000 ರೂ.ಗಳನ್ನು ನಿಗದಿಗೊಳಿಸಿದ್ದಾನೆ.

ಆ) ಗ್ರಾ.ಪಂಚಾಯತಿಯ ಗ್ರಾಮವಾರು ನಕ್ಷೆ ಸಿದ್ದಪಡಿಸುವುದಕ್ಕಾಗಿ 80,000 ರೂ.ಗಳನ್ನು ತೆಗೆದಿರಿಸಿದ್ದಾನೆ.

ಇ) ಗರ್ಭಿಣಿಯರಿಗೆ ಶಕ್ತಿಯುತ ಆಹಾರ, ಔಷಧಿ ನೀಡಲು 75,250 ರೂ. ಬಿಡುಗಡೆಗೆ ಮಾಡಿಸಿದ್ದಾನೆ.

ಈ) ಹಣಕಾಸಿನ ಕೊರತೆಯಲ್ಲಿರುವ ಕಟ್ಟಡಗಳಿಗಾಗಿ 75,230 ರೂ.ಗಳನ್ನು ನಿಗದಿಗೊಳಿಸಿ ಫರ್ಮಾನು ಹೊರಡಿಸಿದ್ದಾನೆ.

ಗ್ರಾಮ ಪಂಚಾಯತಿಗಳ ಹಣೆಬರಹ ಈ ರೀತಿಯಾಗಿದ್ದರೆ ತಾಲೂಕು ಪಂಚಾಯತಿಗಳ ಹಣೆಬರಹ ಇದಕ್ಕಿಂತ ಭಿನ್ನವೇನೂ ಇಲ್ಲ, ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿ/ಪಂಗಡಗಳ ಯುವಕ–ಯುವತಿಯರಿಗಾಗಿ 58,000 ರೂ.ಗಳನ್ನು ನಿಗದಿಮಾಡಿದರೆ; ಗುಣಾತ್ಮಕ ಶಿಕ್ಷಣ ನೀಡಲು ತೆಗೆದಿರಿಸಿದ ಮೊತ್ತ 34,000 ರೂ.ಗಳು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ವಿದ್ಯಾರ್ಥಿಗಳ ಅಣಕು ಪರೀಕ್ಷೆಗಾಗಿ 48,000 ರೂ, ಆರೋಗ್ಯ ಇಲಾಖೆಯ ಸಿಬ್ಬಂದಿಯ ತರಬೇತಿಗಾಗಿ 15,78,000 ರೂ.ಗಳನ್ನು ಮೈಸೂರು ಮೂಲದ ಎಸ್‌ಐಆರ್‌ಡಿ ಎಂಬ ಡೂಪ್ಲಿಕೇಟ್ ಸಂಸ್ಥೆಯ ಮೂಲಕ ನೀಡಲಾಗುವುದೆಂದು ನಮೂದಿಸಿದ್ದಾನೆ. ಈ ತರಬೇತಿಗಾಗಿಯೆ 1,25,000 ರೂ.ಗಳನ್ನು ತಾಲೂಕು ಮಟ್ಟದ ಆಡಳಿತದಲ್ಲಿ ಸಾಫ್ಟವೇರ್ ಅಳವಡಿಸುವುದಕ್ಕಾಗಿ ಖರ್ಚುಮಾಡಬೇಕಂತೆ. 72,40,000 ರೂ.ಗಳು ತಾಲೂಕುಗಳಲ್ಲಿ ಮಾಹಿತಿ ಕೇಂದ್ರ ಪ್ರಾರಂಭಿಸುವುದಕ್ಕಾಗಿ ಖರ್ಚಾಗಲಿದೆಯಂತೆ. ಇದಲ್ಲದೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮಹಿಳೆಯರ ಸಾಕ್ಷರತೆಗಾಗಿ 34,000 ರೂ. ಮೀಸಲಾಗಿರಿಸಲಾಗಿದೆ.

ಮೇಲುನೋಟಕ್ಕೇ ಈ ಯೋಜನೆಗಳಲ್ಲಿ ಯಾವುದೇ ದಮ್ ಆಗಲಿ ಹುರುಳಾಗಲಿ ಇಲ್ಲ ಎಂಬುದು ಗೊತ್ತಾಗುತ್ತದೆ. ಇವೆಲ್ಲ ಕಾಗದದಲ್ಲಿ ಮಾತ್ರ ತೋರಿಸಿ ಬಹಳಷ್ಟು ಮೊತ್ತವನ್ನು ಗುಳುಂ ಮಾಡುವ ಯೋಜನೆಗಳೇ.

ವಿಕೇಂದ್ರೀಕರಣದ ಮೂಲ ಕನಸುಗಳನ್ನೆ ನುಚ್ಚುನೂರು ಮಾಡಲು ಹೊರಟಿರುವ ಜಾಫರ್ ಎಂಬ ಐನಾತಿ ಆಸಾಮಿಯನ್ನು ಹದ್ದುಬಸ್ತಿನಲ್ಲಿ ಇಡಬೇಕಾಗಿದೆ. ಜೊತೆಗೆ ತಮ್ಮ ಗ್ರಾಮದ, ತಾಲೂಕಿನ ಅಭಿವೃದ್ಧಿಗಾಗಿ ಮಾಡಬೇಕಾದ ಕೆಲಸಗಳೇನು ಎಂಬುದನ್ನು ಪಟ್ಟಿ ಮಾಡಿ ಸರಕಾರದ ಹಣವನ್ನು ಸದ್ಬಳಕೆ ಮಾಡಿಕೊಳ್ಳಬೇಕಿದೆ. ಆದರೆ ಇಲ್ಲಿಯ ರಾಜಕೀಯ ನಾಯಕರು ಹೆಬ್ಬೆಟ್ಟಿನ ಗಿರಾಕಿಯರಾಗಿದ್ದರೆ, ದುರಾಸೆಯುಳ್ಳವರಾಗಿದ್ದರೆ ಇದ್ಯಾವುದೂ ಸಾಧ್ಯವಾಗುವುದಿಲ್ಲ.

ತಮಾಷೆ ಎಂಥದೆಂದರೆ ವಿಕೇಂದ್ರೀಕರಣ ತತ್ವದ ಮೂಲ ಆಶಯಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕಿರುವ ಜಿಲ್ಲಾ ಪಂಚಾಯತ್ ಸದಸ್ಯರು ಅಧ್ಯಕ್ಷಗಾದಿ ಕುರ್ಚಿಗಾಗಿ ಕಾಳಗ ನಡೆಸಿದ್ದಾರೆ. ಹೀಗಾಗಿ ಕಲಬುರ್ಗಿ [illegible] ಈತನನ್ನು ಓಡಿಸಲಿಕ್ಕೆ ಸಾಧ್ಯವಾಗುತ್ತಿಲ್ಲ.

■ ವಿಶ್ವಾರಾಧ್ಯ ಸತ್ಯಂಪೇಟೆ

ಬೃಂದೆಯ ಕಥೆ ನೆನಪಿಗೆ ಬರುತ್ತದೆ. ಬೃಂದೆಯ ಗಂಡ ಜಲಂಧರ ಎಂಬುವನು ಕೇಡಿಗ. ಅವನು ಪಾರ್ವತಿಯ ಮೇಲೇ ಕಣ್ಣು ಹಾಕಿದ್ದನಂತೆ. ಲೋಕಹಿತದ ದೃಷ್ಟಿಯಿಂದ ಅವನನ್ನು ಕೊಲ್ಲಲೇಬೇಕು. ಆದರೆ ಬೃಂದೆಯ ಪಾತಿವ್ರತ್ಯ ಅವನಿಗೆ ರಕ್ಷೆಯಾಗಿ ನಿಂತಿತ್ತು (ದುರ್ಗುಣಕ್ಕೆ ಸದ್ಗುಣ ರಕ್ಷೆಯಾಗಿ ನಿಂತಿತ್ತು!) ಈ ಕಷ್ಟದಿಂದ ಪಾರಾಗಬೇಕಾದರೆ ಬೃಂದೆಯ ಪಾತಿವ್ರತ್ಯಕ್ಕೆ ಭಂಗ ತರುವುದೊಂದೇ ದಾರಿ. ಆದ್ದರಿಂದ ವಿಷ್ಣು ತಾನೇ ಜಲಂಧರನ ರೂಪವನ್ನು ತಾಳಿ ಅವಳನ್ನು ಕೆಡಿಸಿದ. ಆಮೇಲೆ ಜಲಂಧರನ ಸಂಹಾರವಾಯಿತು. ಬೃಂದೆ ತಾನು ಮೋಸಹೋದದ್ದು ತಿಳಿದಮೇಲೆ ವಿಷ್ಣುವನ್ನು ಶಪಿಸಿ ಅಗ್ನಿಪ್ರವೇಶ ಮಾಡಿದಳು.

ಈ ಕಥೆಯನ್ನು ನಾನು ಮೊದಲು ಕೇಳಿದ್ದು 15-16 ವರ್ಷದ ಹುಡುಗನಾಗಿದ್ದಾಗ. ಆಗಲೇ ಅದು ಅಸಹ್ಯ ಎನ್ನಿಸಿತು. ವಿಷ್ಣುವಿನ ನಡತೆಯನ್ನು ಸಮರ್ಥಿಸಲು ಹೇಳಬಹುದಾದ್ದನ್ನು ಹೇಳೋಣ. (1) ಅವನು ಬೃಂದೆಯನ್ನು ಕೆಡಿಸಿದ್ದು ದುಷ್ಕಾಮದಿಂದಲ್ಲ; ಕರ್ತವ್ಯದೃಷ್ಟಿಯಿಂದ, ಲೋಕಕಲ್ಯಾಣಕ್ಕಾಗಿ (2) ಅವನಿಗೆ ಬೃಂದೆಯ ವಿಷಯದಲ್ಲಿ ಕನಿಕರವಿತ್ತು, ಗೌರವವೂ ಇತ್ತು, ಆದ್ದರಿಂದ ಅವಳು ತುಳಸಿಯ ರೂಪತಾಳಿ ಅಮರಳಾಗಲೆಂದೂ, ಅವಳಿಗೆ ಸತತವಾಗಿ ಪೂಜೆ ನಡೆಯಲೆಂದೂ ವರ ಕೊಟ್ಟ. ಪೂಜೆ ನಡೆಯುತ್ತಲೂ ಇದೆ.

ಆದರೆ- 1: ಗುರಿ ಎಷ್ಟೇ ಒಳ್ಳೆಯದೆಂದರೂ ಅದನ್ನು ಸಾಧಿಸುವ ಮಾರ್ಗವೂ ಒಳ್ಳೆಯದಾಗಿರಬೇಕಲ್ಲವೆ? **The end justifies the means** (ಗುರಿ ಒಳ್ಳೆಯದಾದರೆ ಅದನ್ನ ಸಾಧಿಸುವ ಮಾರ್ಗ ಸಮರ್ಥನೀಯ) ಎಂಬುದು ಅಪಾಯಕರ-ವಿತಂಡವಾದ. ಲೋಕಕಲ್ಯಾಣವನ್ನು ಸಾಧಿಸಲು ಹೊರಟ ವಿಷ್ಣು ಲೋಕಕ್ಕೆ ಇಂಥ ಮೇಲ್ಪಂಕ್ತಿ ಹಾಕಿಕೊಡಬಹುದೆ?


2. ವಿಷ್ಣುವಿನಲ್ಲಿ ಸ್ವಾರ್ಥವಿರಲಿ ಇಲ್ಲದಿರಲಿ, ಬೃಂದೆಗೆ ಅನ್ಯಾಯವಾದದ್ದು ನಿಜವಷ್ಟೇ?

3. ಸರ್ವಜ್ಞನೂ ಸರ್ವಶಕ್ತನೂ ಆದ ವಿಷ್ಣುವಿಗೆ ಇದಕ್ಕಿಂತ ಉತ್ತಮವಾದ, ನೀತಿಸಮ್ಮತವಾದ ದಾರಿಯೇನೂ ತೋರಲಿಲ್ಲವೆ?

4. ಬೃಂದೆಯ ಪಾತಿವ್ರತ್ಯಕ್ಕೆ ಭಂಗ ಬರದಿದ್ದರೆ ಜಲಂಧರನನ್ನು ಕೊಲ್ಲುವುದು ಸಾಧ್ಯವಲ್ಲ ಎಂದು ತಾನೆ ಕಥೆ ಹೇಳುವುದು? ನಿಜವಾಗಿ ಭಂಗ ಬಂತೆ? ತಾನು ಕೂಡಿದ್ದು ತನ್ನ ಗಂಡನನ್ನೇ ಎಂದು ಅವಳು ನಂಬಿದ್ದಳು. ಅವಳ ಅನುರಾಗ ಸಂದದ್ದು ಗಂಡನಿಗೆ; ಆ ಪ್ರಸಂಗದಿಂದ ಕೆಟ್ಟವರೆಂದರೆ-ಬೃಂದೆಯಲ್ಲ, ವಿಷ್ಣು!

5. ಬೃಂದೆಗೆ ಪೂಜೆ ನಡೆಯಲೆಂದು ವರ ಕೊಟ್ಟದ್ದರಿಂದ ಬಂದ ಭಾಗ್ಯವೇನು? ಅವಳಂಥ ಉನ್ನತ ವ್ಯಕ್ತಿಗೆ ಇತರರು ತನ್ನನ್ನು ಪೂಜಿಸಲಿ ಎಂಬ ಆಸೆ ಇದ್ದಿರಲಾರದು!

ಕೃಷ್ಣಾವತಾರಿ ವಿಷ್ಣುವನ್ನು ಕುರಿತ ಕಥೆಗಳು ಲೆಕ್ಕವಿಲ್ಲದಷ್ಟಿವೆ. ಗೋಪಿಯರ ವಸ್ತ್ರವನ್ನು ಅಪಹರಿಸಿದ್ದು, ರಾಸಕ್ರೀಡೆ, ರಾಧೆಯ ಪ್ರಣಯ-ಇಂಥ ಕೆಲವನ್ನು



ಹುಚ್ಚುತನ-ಅಷ್ಟೇನೂ ಅಪರೂಪವಲ್ಲದ ಹುಚ್ಚುತನ. ಪುಷ್ಪಕವಿಮಾನದಲ್ಲಿ ರಾಮ ಅಯೋಧ್ಯೆಗೆ ಹಿಂದಿರುಗಿದ ಎಂಬ ಕಥೆಯ ಆಧಾರದ ಮೇಲೆ 'ನಮ್ಮ ಪೂರ್ವಿಕರಿಗೆ ವಿಮಾನವನ್ನು (ಆಧುನಿಕ ಏರೋಪ್ಲೇನನ್ನು) ತಯಾರು ಮಾಡುವ ತಂತ್ರಜ್ಞಾನ ಕರಗತವಾಗಿತ್ತು' ಎಂದು ತೀರ್ಮಾನಿಸಿದ ಪ್ರಾಧ್ಯಾಪಕರೊಬ್ಬರನ್ನು ನಾನೇ ಬಲ್ಲೆ!

ಇಳಿಯಬಿಡಬೇಕು. ನಾವು ವೆಂಕಟರಮಣನನ್ನು ಈ ಜಾತಿಗೆ ಸೇರಿಸಿದಂತಾಯಿತು!


ನಾನೂ ನನ್ನ ಮನೆತನದವರೂ ನರಸಿಂಹದೇವರ ಒಕ್ಕಲು. ನರಸಿಂಹ ವಿಷ್ಣುವಿನ ಅವತಾರ, ವೆಂಕಟರಮಣ ಅದೇ ವಿಷ್ಣುವಿನ ಮತ್ತೊಂದು ರೂಪ. ಆದರೂ ನಾನು ಅವನ ಸೇವೆಗಾಗಿ (ಅಥವಾ ಯಾವುದೇ ಕಾರಣಕ್ಕಾಗಿ) ತಿರುಪತಿಗೆ ಹೋಗುವುದು ಅಪರಾಧ. ಏಕೆಂದರೆ ನಾವು 'ಕಳ್ಳ ಒಕ್ಕಲು'- ಹಾಗೆಂದರೇನೋ ನನಗೆ ತಿಳಿಯದು. ಕಳ್ಳ ಒಕ್ಕಲಲ್ಲದ ಯಾರಾದರೂ ತಿರುಪತಿಗೆ ಹೋದಾಗ ಅವರ ಗಂಟನ್ನೋ ಛತ್ರಿಯನ್ನೋ ಕೈಯಲ್ಲಿ ಹಿಡಿದು ನಾನು ಅವರ ಜೊತೆಗೆ ಹೋಗಬಹುದು. ಆಗ ನಾನು ಅವರ ಆಳಾಗಿ ಅವರ ಗಂಟನ್ನು ಹೊತ್ತಿರುತ್ತೇನೆ. ದೇವರು ತನ್ನ ಭಕ್ತರ ಆಳುಗಳಿಗೆ ತೊಂದರೆ ಕೊಡುವುದಿಲ್ಲ, ನಾನು ನಿಜವಾಗಿ ಆಳಲ್ಲ, ಒಂದು ಸಂಚು ಹೂಡಿದ್ದೇನೆ ಎನ್ನುವುದು ವೆಂಕಟರಮಣನಿಗೆ ತಿಳಿಯುವುದಿಲ್ಲ, ಅವನ ಕಣ್ಣಿಗೆ ಮಣ್ಣೆರಚುವುದೇನೂ ಕಷ್ಟವಲ್ಲ.

* * * * *


ದೇವರನ್ನು ಕುರಿತಂತೆ ಸಾಮಾನ್ಯ ಜನರಲ್ಲಿ ಹಬ್ಬಿರುವ ಕಥೆಗಳನ್ನೂ ಪರಿಶೀಲಿಸಿ ಆ ಮೂಲಕ ದೇವರ ಸ್ವರೂಪವನ್ನು ತಿಳಿದುಕೊಳ್ಳಬೇಕೆಂದಲ್ಲವೆ ನಾವು ಹೊರಟಿದ್ದು? ಆ ಕಥೆಗಳಲ್ಲಿ ಕಂಡ ಕೆಲವು ಗುಣಗಳನ್ನು ನಂಬಿಕೆಗಳನ್ನು ಪಟ್ಟಿ ಮಾಡೋಣ.

* ದೇವರುಗಳಿಗೆ ಪೂಜೆಪುನಸ್ಕಾರಗಳು ಬೇಕು. ನಾವು ವ್ರತ ಮಾಡಿದರೆ ಅದಕ್ಕೆ ಪ್ರತಿಯಾಗಿ ಅವರು ನಮ್ಮ

ಲಂಪಟರೂ, ಹಣದಾಹಿಗಳೂ ಆದ ಹಿಂದೂ ದೇವರುಗಳು



[illegible]



ನೆನಪಿಸಿಕೊಂಡರೆ ಸಾಕು. ಒಂದು ಸಾರಿ ಕೃಷ್ಣ ತನ್ನನ್ನು ಮೋಹಿಸಿ ಬಂದ ತರುಣಿಯರಿಗೆ ಬುದ್ಧಿ ಹೇಳಿಕಳಿಸಿದನಂತೆ. ಆಮೇಲೆ ಅವರಿಗೆ ಬುದ್ಧಿ ಕಲಿಸಬೇಕಾದರೆ ಅವರ ಕಾಮವನ್ನು ಪೂರೈಸುವುದೇ ಸರಿಯಾದ ದಾರಿ ಎಂದುಕೊಂಡು ಪೂರೈಸಿದ ಎಂದು ಹೇಳುವುದುಂಟು. ರಾಧೆ ಮದುವೆಯಾಗಿದ್ದ ತರುಣಿಯಂತೆ. ಅದು ರಾಧಾಕೃಷ್ಣರ ಪ್ರಣಯಕ್ಕೆ ಅಡ್ಡಿಯಾಗಲಿ

* * * * *

ವಿಷ್ಣುವಿನದು ವೈಭವದ ಬದುಕು ಎಂದುಕೊಂಡೆವಷ್ಟೆ. ಶಿವನದ್ದಾದರೋ-ವೈಭವ ಹಾಗಿರಲಿ, ಹೆಚ್ಚುಕಡಿಮೆ ಭಿಕ್ಷುಕನ ಬದುಕಿನಂತೆ ಕಾಣುತ್ತದೆ. ವಿಷ್ಣುವಿನ ಹಣೆಯಲ್ಲಿ ಕಸ್ತೂರೀತಿಲಕ; ಶಿವನ ಹಣೆಯಲ್ಲಿ (ಮತ್ತು ಮೈಮೇಲೆಲ್ಲ) ಬೂದಿ. ವಿಷ್ಣುವಿನ ಎದೆಯಲ್ಲಿ ಕೌಸ್ತುಭವಿದ್ದರೆ ಶಿವನ ಎದೆಯ ಮೇಲೆ ರುದ್ರಾಕ್ಷಿ ತೂಗಾಡುತ್ತದೆ; ವಿಷ್ಣು ಕಿರೀಟ ಧರಿಸಿದ್ದಾನೆ. ಶಿವ ಧರಿಸಿರುವುದು ಜಟೆ; ವಿಷ್ಣುವಿಗೆ ವೈಜಯಂತಿ, ಶಿವನಿಗೆ ರುಂಡಮಾಲೆ; ಅವನು ಉಟ್ಟಿರುವುದು ಪೀತಾಂಬರವಲ್ಲ, ಚರ್ಮಾಂಬರ; ಅವನ ಸುತ್ತ ಇರುವುದು ಕ್ಷೀರಸಮುದ್ರವಲ್ಲ, ಸ್ಮಶಾನ!

* * * * *

ದೇವಾಸುರರು ಸೇರಿ ಸಮುದ್ರವನ್ನು ಕಡೆದರಷ್ಟೆ. ಅದರ ಫಲವಾಗಿ ಬಂದ ಅಮೃತವು ಅಸುರರಿಗೆ ಸಿಕ್ಕದಂತೆ ಮಾಡಿ ದೇವತೆಗಳಿಗೆ ಮಾತ್ರ ಅದನ್ನು ಹಂಚುವ ಉದ್ದೇಶದಿಂದ ವಿಷ್ಣು ಮೋಹಿನಿಯ ರೂಪವನ್ನು ತಾಳಿ ಬಂದ. ಹಂಚಿದ್ದಾಯಿತು. ಆಗ ಶಿವ ಮೋಹಿನಿಯ ರೂಪಕ್ಕೆ ಮನಸೋತು ಅವಳನ್ನು ಅಟ್ಟಿಸಿಕೊಂಡು ಹೋಗಿ ಕೂಡಿದ. ಈ ಪ್ರಣಯದ ಫಲವಾಗಿ ಹುಟ್ಟಿದವನು-ಅಯ್ಯಪ್ಪ ಉರುಫ್ ಶಾಸ್ತಾ, ಇವನು ಕೇರಳದ ಶಬರಿಮಲೆಯಲ್ಲಿ ನೆಲೆಸಿ ಲಕ್ಷಗಟ್ಟಲೆ ಜನರ ಭಕ್ತಿಗೆ ಪಾತ್ರನಾಗಿದ್ದಾನೆ.

ನಮ್ಮ ಹಳೆಯ ಮೈಸೂರು ಸಂಸ್ಥಾನದಲ್ಲಿ ಅಯ್ಯಪ್ಪನ ಭಕ್ತರು ಬೆರಳಿನ ಮೇಲೆ ಎಣಿಸುವಷ್ಟು ಇದ್ದರೋ ಇಲ್ಲವೋ. ಈಗ ಸಾವಿರಗಟ್ಟಲೆ ಜನ ಅವನ ಭಕ್ತರಾಗಿದ್ದಾರೆ. ಅವನ ಜನ್ಮಕಥೆ ಶುದ್ಧ ನಗೇಪಾಟಲು ಎಂಬುದು ಯಾರಿಗೂ ತೋರಿದಂತಿಲ್ಲ, ಮನ್ಮಥನನ್ನು ಸುಟ್ಟು ಬೂದಿ ಮಾಡಿದ ಶಿವ, ಪಾರ್ವತಿಯ ದಿವ್ಯಸೌಂದರ್ಯಕ್ಕೆ ಸೋಲದ ಶಿವ-ಬೀದಿ ರೋಮಿಯೋವಿನಂತೆ ಮೋಹಿನಿಯನ್ನು ಅಟ್ಟಿಸಿಕೊಂಡು ಹೋದಾನೆ! ಮೋಹಿನಿ ನಿಜವಾಗಿ ಹೆಣ್ಣಲ್ಲ, ಆ ರೂಪವನ್ನು ತಾಳಿದ ವಿಷ್ಣು ಎಂಬುದು ಅವನಿಗೆ ತಿಳಿಯಲಿಲ್ಲವೆ? ಅವನು ಅಟ್ಟಿಸಿಕೊಂಡು ಬಂದಾಗ ವಿಷ್ಣು ಕ್ಷಣಮಾತ್ರದಲ್ಲಿ ತನ್ನ ನಿಜರೂಪವನ್ನು ತಳೆಯಬಹುದಾಗಿತ್ತಲ್ಲ?


ಇಪ್ಪತ್ತನೆಯ ಶತಮಾನದ ವಿದ್ಯಾವಂತ ಜನ ಕೂಡ ಮೇಲಿನ ಪ್ರಶ್ನೆಗಳನ್ನು ಕೇಳಲೊಲ್ಲರು.


* * * * *


ದಶಾವತಾರದ ಕತೆ ಮತ್ತು ಅದನ್ನು ಕುರಿತ ವ್ಯಾಖ್ಯಾನದ ಆಧಾರದ ಮೇಲೆ ಯಾರಾದರೂ 'ನಮ್ಮ ಪೂರ್ವಿಕರಿಗೆ ವಿಕಾಸವಾದ (the theory of evolution) ಗೊತ್ತಿತ್ತು' ಎಂಬ ತೀರ್ಮಾನಕ್ಕೆ ಬಂದರೆ ಅದು ಜನಾಂಗವೊಂದರ ಮಿಥಕಗಳು ನಮ್ಮ ಗಮನಕ್ಕೆ ಬಂದಾಗ 'ಇವು ಕೇವಲ ಮಿಥಕಗಳು, ಅಕ್ಷರಶಃ ನಡೆದ ಪ್ರಸಂಗಗಳಲ್ಲ' ಎಂಬುದನ್ನು ಮರೆಯದಿದ್ದರೆ ಅವುಗಳಿಂದ ಪ್ರಯೋಜನ ಪಡೆಯಬಹುದು.

* * * * *

ಮಿಥಕಗಳಿಗಿಂತ ಹೆಚ್ಚಾಗಿ ಇತ್ತೀಚೆಗೆ ಹುಟ್ಟಿಕೊಂಡಿರುವ ಕಥೆಗಳು ದೇವರ ಮಟ್ಟವನ್ನು ಇಳಿಸುತ್ತವೆ. ವಿಷ್ಣುವಿನ ಒಂದು ರೂಪವಾದ ತಿರುಪತಿಯ ವೆಂಕಟರಮಣನನ್ನು ಕುರಿತ ನಂಬಿಕೆಗಳು ಅವನಿಗೆ ಕೀರ್ತಿತರುವಂಥದಲ್ಲ. ವೆಂಕಟರಮಣ ಲೋಕವೆಲ್ಲವನ್ನೂ ಸಲಹುವಂತೆ ನಿಮ್ಮನ್ನೂ ಸಲಹುತ್ತಾನೆ. ಹಾಗೆಂದುಕೊಂಡು ತೆಪ್ಪಗಿದ್ದರೆ ಭಯವಿಲ್ಲ, ಅವನಿಂದ ವಿಶೇಷ ಅನುಗ್ರಹವನ್ನು ಬಯಸಿದರೆ (ಉದಾ: 'ನನಗೆ ಭಾರಿ ನೌಕರಿ ಕೊಡಿಸು' ಎಂದು ಬೇಡಿದರೆ) ಅವನಿಗೆ ಇಷ್ಟು ಹಣ ಅರ್ಪಿಸುತ್ತೇನೆ ಎಂದೋ, ಇಂಥ ಸೇವೆ ಮಾಡಿಸುತ್ತೇನೆ ಎಂದೋ ಹರಕೆ ಹೊತ್ತುಕೊಳ್ಳಬೇಕು. ನೌಕರಿ ಸಿಕ್ಕಿದರೆ ಅದು ಅವನು ಕೊಟ್ಟ ವರ; ಸಿಕ್ಕದಿದ್ದರೆ ಅದು ನಿಮ್ಮ ಕರ್ಮ! ಸಿಕ್ಕಿದ ಮೇಲೆ ನೀವು ಹರಕೆ ತೀರಿಸದಿದ್ದರೆ ನಿಮ್ಮ ಪಾಡು ಬೇಡ. ದೇವರು ವರ್ಷಗಟ್ಟಲೆ ಕಾಡುತ್ತಾನೆ. ಅವನಿಂದ ಸರಕು (ನೌಕರಿ) ಪಡೆದಿದ್ದಾಯಿತು. ಬೆಲೆ ಕೊಡದಿದ್ದರೆ ಸುಮ್ಮನೆ ಬಿಟ್ಟಾನೆ! ಅದೇನು ವ್ಯಾಪಾರವೋ ಮಷ್ಕಿರಿಯೊ!







ವೆಂಕಟರಮಣ ಪದ್ಮಾವತಿಯನ್ನು ವೈಭವದಿಂದ ಮದುವೆಯಾದಾಗ ಖರ್ಚಿಗಾಗಿ ಕುಬೇರನಿಂದ ಸಾಲ ತೆಗೆದುಕೊಂಡಿದ್ದನಂತೆ. (ನಾವು ನಮ್ಮ ಭಕ್ತಿಯನ್ನು ವೆಂಕಟರಮಣನಿಂದ ಕುಬೇರನಿಗೆ ವರ್ಗಾಯಿಸುವುದು ಬುದ್ಧಿವಂತಿಕೆಯಲ್ಲವೆ? ಕುಬೇರ ಸಾಹುಕಾರ, ವೆಂಕಟರಮಣ ಸಾಲಗಾರ!) ಆ ಸಾಲ ಭಕ್ತರ ಕಾಣಿಕೆಯಿಂದ ತೀರಬೇಕು. ಮದುವೆಯ ವೈಭವ, ಆಡಂಬರ, ದೊಡ್ಡಸ್ತಿಕೆಯ ಪ್ರದರ್ಶನ-ಇದೆಲ್ಲ ಮಾನವನಲ್ಲೆ ತಪ್ಪು, ಅದು ದೇವರಿಗೂ ಬೇಕಾಯಿತೇ? ಬೇಕಾಯಿತೆಂದೇ ನಂಬಬೇಕಾಗುತ್ತದೆ. ಚಿನ್ನದ ಕಿರೀಟ ಹಾಕಿದರೆ, ತನ್ನ ಗುಡಿಯ ಗೋಪುರಕ್ಕೆ ಚಿನ್ನದ ಮುಲಾಮು ಹಾಕಿಸಿದರೆ, ಅವನಿಗೆ ಸಂತೋಷವಾಗುತ್ತದೆಂದು ನಾವು ನಂಬಿದ್ದೇವಲ್ಲವೆ? ನನಗೆ ಇಂದಿನ ರಾಜಕಾರಣಿಗಳ ನೆನಪು ಬರುತ್ತದೆ. ಅವರು ಚುನಾವಣೆಗಾಗಿ ಲಕ್ಷಗಟ್ಟಲೆ ವೆಚ್ಚಮಾಡಬೇಕು. ಗೆದ್ದಮೇಲೆ ಜನರಿಗೆ ಸೈಟು ಇತ್ಯಾದಿಗಳನ್ನು ಕೊಡಿಸಿ ಅವರಿಂದ ಹಣ ವಸೂಲುಮಾಡಿಕೊಂಡು ಸಾಲ ತೀರಿಸಬೇಕು; ಮತ್ತು ನಾಲ್ಕಾರು ಲಕ್ಷ ರೂಪಾಯಿಗಳನ್ನು ತನ್ನ ಜೇಬಿಗೆ ಇಷ್ಟಾರ್ಥಗಳನ್ನು ಪೂರೈಸುತ್ತಾರೆ. ಸಾಕ್ಷಿ: ಸತ್ಯನಾರಾಯಣ ವ್ರತದಂಥ ಎಲ್ಲ ಕಾಮ್ಯವ್ರತಗಳು.

* ಅವರು ಸುಲಭಕೋಪಿಗಳು. ಕೆಲವು ವೇಳೆ ನಿರ್ದಯರು, ಸಣ್ಣ ಹುಡುಗರನ್ನೂ ಕೊಲ್ಲಬಲ್ಲರು. ಸಾಕ್ಷಿ: ಮುಂದೆ ಗಜಾನನ ಎನ್ನಿಸಿಕೊಂಡ ಹುಡುಗನನ್ನು ಕೊಂದ ಶಿವ; ಸೆಟ್ಟಿಯ ಮಗಳು ಪ್ರಸಾದ ತೆಗೆದುಕೊಳ್ಳದೆ ಗಂಡನನ್ನು ನೋಡಹೋದದ್ದಕ್ಕಾಗಿ ಆ ಗಂಡನಿದ್ದ ಹಡಗನ್ನೇ ಮುಳುಗಿಸಿದ ಸತ್ಯನಾರಾಯಣ.
* ಅವರಿಗೆ ಹಣದ ಆಸೆ; ಆಡಂಬರ ಬೇಕು. ಸಾಕ್ಷಿ: ಕಾಣಿಕೆ ತೆಗೆದುಕೊಂಡು ಇಷ್ಟಾರ್ಥ ಸಲ್ಲಿಸುವ, ಗೋಪುರಕ್ಕೆ ಚಿನ್ನದ ಮುಲಾಮು ಹಾಕಿಸಿದರೆ ಸಂತೋಷಪಡುವ ವೆಂಕಟೇಶ್ವರ; ಬೆಳ್ಳಿಯ (ಅಥವಾ ಚಿನ್ನದ್ದೊ?) ರಥವನ್ನೂ ವಜ್ರದ ಕಿರೀಟವನ್ನೂ ಬಯಸುವ (ಅಥವಾ ಬಯಸದಿದ್ದರೂ ಕೊಟ್ಟರೆ ಸಂತೋಷಪಡುವ) ಉಡುಪಿ ಕೃಷ್ಣ.
* ಅವರು ಪ್ರಯೋಜನವೊಂದಕ್ಕಾಗಿ ಕ್ರೂರ ಅನ್ಯಾಯ ಮಾಡಲು ಹಿಂಜರಿಯುವುದಿಲ್ಲ. ಸಾಕ್ಷಿ: ಬೃಂದೆಯ ಪಾತಿವ್ರತ್ಯಕ್ಕೆ ಭಂಗ ತಂದ ವಿಷ್ಣು.
* ಅವರಿಗೆ ವಿವೇಚನೆ ಇಲ್ಲದಿರುವುದು ಸಾಧ್ಯ. ಸಾಕ್ಷಿ: ಕೆಲವು ವೇಳೆ ಅವರು ರಾಕ್ಷಸರಿಗೆ ಕೊಟ್ಟ ವರಗಳು; ತಾನು ಕೊಂದ ಹುಡುಗನಿಗೆ (ಗಣಪತಿಗೆ) ಅವನ ತಲೆಯನ್ನೇ ಜೋಡಿಸುವ ಬದಲು ಆನೆಯ ತಲೆಯನ್ನು ಜೋಡಿಸಿದ ಶಿವ.
* ಅವರು ವಿಷಯಲಂಪಟರೂ ಆಗಬಹುದು. ಸಾಕ್ಷಿ: ಗ್ರೀಕರ ಜ್ಯೂಸ್, ನಮ್ಮ ಇಂದ್ರ, ಮೋಹಿನಿಗೆ ಮರುಳಾದ ಶಿವ.
* ಅವರು ಸರ್ವಜ್ಞರಲ್ಲ. ಸಾಕ್ಷಿ: ಪಾರ್ವತಿ ಗಣಪತಿಯನ್ನು ಕಾವಲಾಗಿ ಕೂರಿಸಿದ್ದಳೆಂದು ಶಿವನಿಗೆ ತಿಳಿಯಲಿಲ್ಲ.
* ಅವರು ಸರ್ವಶಕ್ತರೂ ಅಲ್ಲ. ಸಾಕ್ಷಿ: ಮೋಹಿನಿಯ ಬೆನ್ನಟ್ಟಿಹೋದ ಶಿವನಿಗೆ ತನ್ನ ಕಾಮವನ್ನು ಜಯಿಸುವ ಶಕ್ತಿ ಇರಲಿಲ್ಲ. ಕೆಲವು ಮಂತ್ರಗಳನ್ನು ಸ್ವಾಧೀನಮಾಡಿ ಕೊಂಡರೆ ದೇವತೆಗಳ ಮೇಲೂ ಅಧಿಕಾರ ಚಲಾಯಿಸ ಬಹುದು ಎಂಬ ನಂಬಿಕೆ ಕೆಲವರಲ್ಲಿದೆ. ಜನಮೇಜಯ ರಾಯನ ಸರ್ಪಯಾಗದಲ್ಲಿ ಪುರೋಹಿತರು 'ಸೇಂದ್ರಾಯ ತಕ್ಷಕಾಯ ಸ್ವಾಹಾ' ಎಂದೊಡನೆ ಇಂದ್ರನೂ ತಕ್ಷಕನೊಡನೆ ಬೆಂಕಿಗೆ ಬೀಳಬೇಕಾಗುತ್ತಿತ್ತು-ಅವನು ತಕ್ಷಕನ ಕೈಬಿಟ್ಟು ತನ್ನ ಯೋಗಕ್ಷೇಮ ತಾನು ನೋಡಿಕೊಳ್ಳದಿದ್ದರೆ! ಮನುಷ್ಯರು ದೇವರಿಗೆ ಶಾಪ ಕೊಟ್ಟರು ಎನ್ನುವ ಕಥೆಗಳೂ ಇವೆ.

ಮುಕ್ತಾಯ

...ಲ್ಲಿ ಹುಟ್ಟಿ ಅರವತ್ತೈದು ವರ್ಷ ಕಾಲ ... ಜೀವನ ನಡೆಸಿದ ಲಂಕೇಶ್, ಇಪ್ಪತ್ತನೆಯ ...ನದ ಸಾಮಾಜಿಕ ಆದರ್ಶ, ಹೋರಾಟ, ತಲ್ಲಣಗಳನ್ನು ...ಪ್ರತಿನಿಧಿಸುವಂತಹ ಬರಹಗಾರರಾಗಿದ್ದರು. ...ದನೆಯ ತಮಮಾನಕ್ಕೆ ಅವರು ನೀಡುವ ಮಹತ್ವದ ...ದರೆ ಚಿಕಿತ್ಸಕ ಪ್ರವೃತ್ತಿ ಯಾವುದನ್ನೂ ಪರೀಕ್ಷಿಸದೆ ...ಳ್ಳಬಾರದೆಂಬ ವೈಜ್ಞಾನಿಕ ಮನೋಧರ್ಮ. ಗಾಂಧೀಜಿ ...ನ್ನು ತಮ್ಮ ಬರಹಗಳಲ್ಲಿ ಆಗಾಗ ಉಲ್ಲೇಖಿಸುತ್ತಿದ್ದ ... ಗಾಂಧಿವಾದದ ಅಂಧಾನುಕರಣೆ ಮಾಡಲಿಲ್ಲ. ...ಪ್ರೇಮವೊಂದನ್ನು ಬಿಟ್ಟರೆ ಉಳಿದೆಲ್ಲ ಸಾಮಾಜಿಕ ... ಬಗೆಗೂ ಅವರಿಗೆ ಸಂದೇಹವಿತ್ತು. ಈ ಮಾನವ ...ವಕ್ಕೆ ತಲೆತಲಾಂತರದಿಂದ ಶೋಷಣೆಗೆ ತುತ್ತಾದ ...ವರ ಪರವಾದ ಗಟ್ಟಿಧೋರಣೆಯಿತ್ತು. ಹಾಗೆಂದು ...ವಣೆಯ ಹುಸಿ ಪ್ರೋತ್ಸಾಹವನ್ನು ಅವರು ಯಾರಿಗೂ ...ತ್ತಿರಲಿಲ್ಲ. ದುರ್ಬಲರಿಗೆ ಆತ್ಮವಿಶ್ವಾಸ ಕುದುರುವಂತೆ ... ಬೆಂಬಲವಿರುತ್ತಿತ್ತು. 'ಸ್ತ್ರೀ ಪರ ಅಥವಾ ದಲಿತ ...ಮುಸ್ಲಿಂ ಪರ ಎಂಬ ಸೀಮಿತ ಚೌಕಟ್ಟು ಮೀರಿ ...ತೆಯಿಂದ, ಸ್ವಾತಂತ್ರ್ಯಪರ ಧೋರಣೆಯಿಂದ.... ನೈಜ ...ಯ ಕಾಳಜಿಯಿಂದ ಘಟನೆಗಳ ಅಂತರ್ಯ... ಬರೆಸಿ, ಒಂದು ಬಗೆಯ ಸೈದ್ಧಾಂತಿಕ ...ವನ್ನು ಆ ಹೆಸರು ಕೊಡದೆಯೆ ನಡೆಸಿದರು ...' ಎಂಬ ಅಭಿಪ್ರಾಯ (ವೈದೇಹಿ, ಬೋದಿಲೇರನ ...ಪು.21) ಲಂಕೇಶರ ಮಾನವ ಪ್ರೇಮದ ಸ್ವರೂಪವನ್ನು ...ಗಿಯೇ ಗುರುತಿಸುತ್ತದೆ.

...ಕೇಶ್ ಧಾರ್ಮಿಕವಾಗಿ ಶ್ರದ್ಧಾವಂತ ಆಸ್ತಿಕರಾಗಿರಲಿಲ್ಲ ...ಹಾ, ದೇವರನ್ನು ತಿರಸ್ಕರಿಸುವ ನಿರೀಶ್ವರವಾದಿಯೂ ...ಲ್ಲ. ಮಹಾನ್ ದೈವಭಕ್ತರಾಗಿದ್ದ ಬಸವಣ್ಣ ಮತ್ತು ...ಜಿ ಇಬ್ಬರನ್ನೂ ಅವರು ಮೆಚ್ಚುತ್ತಿದ್ದರು, ನಂಬುತ್ತಿದ್ದರು. ...ಯಣ, ಮಹಾಭಾರತ, ನಿಸರ್ಗಕ್ಕೆ ಹತ್ತಿರವಿದ್ದ ವೇದ ...ಷತ್ತುಗಳ ಬಗೆಗೆ ಅವರಿಗೆ ... ಗೌರವವಿತ್ತು. ಆದರೆ ...ಷ್ಟಿಯ ಕುತಂತ್ರದ ಅಪಾಯ ... ಧಾರ್ಮಿಕತೆಯ ಬಗೆಗೆ ...ವಿತ್ತು. 'ಗಾಂಧೀಜಿ ಎಂದೂ ...ಯಗಳಿಗೆ ಹೋಗುತ್ತಿರಲಿಲ್ಲ, ...ಸರು ಪುರೋಹಿತರನ್ನು ಮನ್ನಿ...ಲ್ಲ, ಕಂದಾಚಾರಗಳು ಮತ್ತು ...ತನಂಬಿಕೆಯವರನ್ನು ಸಹಿಸು...ಲ್ಲ ಎಂಬುದನ್ನು ನಾವು ನೆನೆಯ... ನಮ್ಮೆಲ್ಲರಂತೆ ಹುಟ್ಟಿದ ... ಜಾತೀಯತೆ, ವರ್ಣಾಶ್ರಮ ...ಗಳಿಗೆ ಒಳಗಾಗಿಯೇ ಅವ...ಸ್ಫೋಟಿಸಿ ಹೊರಬಂದವರು; ... ಗಂಗಾಜಲ, ಭಾರತಮಾತೆ ... ಹೊತ್ತುಕೊಂಡು ಓಡಾಡಿ ...ತ್ವ ಮತ್ತು ಭಾರತೀಯತ್ವ ...ರ್ಪಸಲು ಬಯಸದೆ ಇದ್ದವರು ಎಂಬುದನ್ನು ...ಬೇಕು' (ಲಂಕೇಶ್, ಟೀಕೆ-ಟಿಪ್ಪಣಿ-1, ಪು.101) ...ಯೂ ಧರ್ಮವೂ ನಿಸರ್ಗಕ್ಕೆ ವಾಸ್ತವಕ್ಕೆ ಹತ್ತಿರವಾದರೆ, ...ಶ್ವಾಸ, ಸಮಾನತೆ, ಪ್ರೀತಿಯ ಹರಿಕಾರ ಎಂಬಂತಾಗು...ದರೆ ಅವರು ಅದನ್ನು ಒಪ್ಪಲು ಸಿದ್ಧವಿದ್ದರು. ಆದರೆ ...ಯ ಸವಾಲು ನಮ್ಮ ಮುಂದಿರುವಾಗ ಯಾವುದನ್ನು ... ಮಾಡಿಕೊಳ್ಳಬೇಕೆಂಬುದರ ಬಗೆಗೆ ಸ್ಪಷ್ಟವಾಗಿ ಎಚ್ಚರಿಕೆ ...ದರು. 'ಗಾಂಧೀಜಿಯನ್ನು ಕೊಲ್ಲಬಲ್ಲಷ್ಟು ಕ್ರೌರ್ಯ ...ವ ಹಿಂದೂ ಧರ್ಮ ನಮಗೆ ಕ್ರಿಯಾಶೀಲತೆ ...ಬಲ್ಲದೋ, ಎಲ್ಲ ಮಾನವರ ಆಳಕ್ಕೆ ಹೋಗಿ ಸ್ಪಂದಿಸಿದ ...ಜಿಯ ಹಿಂದೂ ಧರ್ಮ ಅದನ್ನು ತರಬಲ್ಲುದೋ ...ವನ್ನು ನಾವು ಯೋಚಿಸಬೇಕು. (ಅದೇ, ಪು.101)

...ಲೋಹಿಯಾ, ಗಾಂಧೀಜಿ ವಿಚಾರಗಳು ಲಂಕೇಶರ ...ರಿಕತೆಯ ಮೇಲೆ ಪ್ರಭಾವ ಬೀರಿದ್ದರೂ ಅವರೆಂದೂ ...ವುದೇ 'ಇಸಂ'ಗಳಿಗೆ ಸಂಪೂರ್ಣವಾಗಿ ತಮ್ಮನ್ನು ...ಕೊಳ್ಳಲಿಲ್ಲ, ಮೂಲತಃ ಅವರೊಬ್ಬ ವ್ಯಕ್ತಿವಾದಿ ...ದ್ದರು. ರಾಜಕೀಯವಾಗಿ ಹಲವಾರು ಸಮಾಜವಾದಿ ...ರು ಅವರಿಗಿದ್ದರು; ಅರವತ್ತು ಎಪ್ಪತ್ತರ ದಶಕದಲ್ಲಿ ...ಲೋಹಿಯಾವಾದಿಗಳೊಂದಿಗೆ ಆಪ್ತ ಸ್ನೇಹವಿರಿಸಿ ...ದ್ದರು. ಗೋಪಾಲಗೌಡ, ಜೆ.ಹೆಚ್. ಪಟೇಲ್, ... ನಂಜುಂಡಸ್ವಾಮಿ, ತೇಜಸ್ವಿ, ಯು. ಆರ್. ...ಮೂರ್ತಿ ಮುಂತಾದ ಸಮಾಜವಾದಿ ಗೆಳೆಯರಿದ್ದರು. ... ದೇವರಾಜ ಅರಸು, ಅಬ್ದುಲ್ ನಜೀರ್ ಸಾಬ್, ...ಬಸವಲಿಂಗಪ್ಪನವರನ್ನು ಇಷ್ಟಪಡುತ್ತಿದ್ದರು. ಆದರೆ ...ನ್ನು ಬೇಕಾದರೂ ತಪ್ಪಿದ್ದರೆ ಟೀಕಿಸುವ ಸ್ವಾತಂತ್ರ್ಯ ...ಕೊಂಡಿದ್ದರು. ವಿದ್ಯಾರ್ಥಿ ದೆಸೆಯಿಂದಲೂ ಅವರು ...ಕೀಯದ ಬಗೆಗೆ ಕ್ರಿಯಾಶೀಲ ಆಸಕ್ತಿಯಿಟ್ಟುಕೊಂಡಿದ್ದರು. ...ಸಾಹಿತಿಗಳು ರಾಜಕೀಯವಾಗಿ ತಟಸ್ಥರಾಗಿರುವುದೆಂದರೆ ...ದ್ರೋಹವೆಂದೇ ಅವರು ವಾದಿಸುತ್ತಿದ್ದರು. ತಮ್ಮ ...ವಾರಿಗೆ ಮತ್ತು ತಮಗಿಂತ ಕಿರಿಯರಾದ ಹಲವಾರು ...ಗಾರರು ರಾಜಕೀಯವಾಗಿ ಕ್ರಿಯಾಶೀಲರಾಗಿರಲು ಅವರನ್ನು ಸಂಘಟಿಸುವಲ್ಲಿಯೂ ಲಂಕೇಶ್ ಮಹತ್ವದ ಪಾತ್ರ ವಹಿಸಿದ್ದರು. ನಿರ್ಣಾಯಕ ಸಂದರ್ಭಗಳಲ್ಲಿ ರಾಜಕೀಯ ಹಾಗೂ ಸಾಮಾಜಿಕವಾಗಿ ಸ್ಪಷ್ಟ ನಿಲುವುಗಳನ್ನು ತೆಗೆದುಕೊಂಡು ಹಲವು ಚಳವಳಿಗಳನ್ನು ಸಂಘಟಿಸುತ್ತಿದ್ದರು. ಎಪ್ಪತ್ತರ ದಶಕದಲ್ಲಿ ಕರ್ನಾಟಕದಲ್ಲಿ ನಡೆದ ಹಲವು ಪ್ರಗತಿಪರ ಸಾಮಾಜಿಕ ಹಾಗೂ ರಾಜಕೀಯ ಆಂದೋಲನಗಳಲ್ಲಿ ಲಂಕೇಶರ ಪಾತ್ರ ಮುಂಚೂಣಿಯಲ್ಲಿತ್ತು.

ಸಮಾಜವಾದಿಯಾಗಿದ್ದ ಅವರು ಸಹಜವಾಗಿಯೇ ಜಾತ್ಯತೀತ ಮೌಲ್ಯಗಳಿಗೆ ಬದ್ಧರಾಗಿದ್ದವರು; ಭಾಷಾ ನೀತಿಯಲ್ಲಿ ಮಾತೃಭಾಷೆಗೆ ಆದ್ಯತೆ ನೀಡುವ ನೀತಿಯನ್ನು ಎತ್ತಿಹಿಡಿಯುತ್ತಿದ್ದರು. ಈ ಸಲುವಾಗಿ ನಡೆದ ಜಾತಿ ನಾಶ ಚಳವಳಿ ಹಾಗೂ ಗೋಕಾಕ್ ಚಳವಳಿಯ ಮಾರ್ಗದರ್ಶಕ ಸ್ಥಾನದಲ್ಲಿದ್ದು ದುಡಿದರು. ಆದರೆ ಸ್ವತಃ ಇಂಗ್ಲಿಷ್ ಅಧ್ಯಾಪಕರಾಗಿದ್ದ ಲಂಕೇಶರ ವೈಚಾರಿಕತೆ ಹಾಗೂ ಸಾಹಿತ್ಯ ರಚನೆಯನ್ನು ಪಾಶ್ಚಾತ್ಯ ಪರಂಪರೆ ರೂಪಿಸಿತ್ತು; ಇದು ಅವರ ಬರಹಗಳಲ್ಲಿಯೂ ನಮಗೆ ಸ್ಪಷ್ಟವಾಗಿ ಗೋಚರಿಸುತ್ತದೆ.

ಹಳ್ಳಿಯಿಂದ ಬಂದು ನಗರ ಸೇರಿದವರಲ್ಲಿ ಬಹುಮಂದಿ ತಮ್ಮ ನಡೆ, ನುಡಿ, ವೇಷಭೂಷಣಗಳಲ್ಲಿ ಸಾಕಷ್ಟು ಬದಲಾಗುತ್ತಾರೆ. ಕೆಲವರಂತೂ ತಮ್ಮ ಹಿಂದಿನ ಬಾಳನ್ನು ಮರೆಯಲೂ ಪ್ರಯತ್ನಿಸುವುದುಂಟು. ಆದರೆ ಲಂಕೇಶ್ ತಮ್ಮ ನಡೆ, ನುಡಿ, ಆಹಾರ ಪದ್ಧತಿಯಲ್ಲಿ ಹಳ್ಳಿಯ ಶೈಲಿಯನ್ನೇ ಉಳಿಸಿಕೊಂಡಿದ್ದರು. 'ಲಂಕೇಶ್ ಪತ್ರಿಕೆ' ಆರಂಭಿಸಿದ ಮೇಲೆ ಲುಂಗಿ ಪಂಚೆ ಮತ್ತು ಬುಶ್ ಷರಟು ಕಾಯಂ ಉಡುಗೆಯಾಯಿತು; ಭಾಷೆಯಂತೂ ಹಳ್ಳಿಗರ ಬೈಗುಳಗಳಿಂದ ಕಂಗೊಳಿಸುತ್ತಿತ್ತು. ಕರ್ನಾಟಕವನ್ನು ಬಿಟ್ಟು ಹೊರಗೆ ಅವರು ಹೋಗಿದ್ದೇ ಅಪರೂಪಕ್ಕೆ. ವಿದೇಶಗಳಿಗೆ ಬಂದುಹೋಗಲು ಗೆಳೆಯರಿಂದ ಬರುತ್ತಿದ್ದ ಆಹ್ವಾನಗಳನ್ನು ಅವರು ಒಪ್ಪಿಕೊಳ್ಳಲೇ ಇಲ್ಲ, ಕರ್ನಾಟಕವನ್ನು ಮಾತ್ರ 'ಪ್ರಗತಿರಂಗ' ಕಟ್ಟುವ ಕಾಲದಲ್ಲಿ ವ್ಯಾಪಕವಾಗಿ ಸುತ್ತಾಡಿದ್ದರು. ಇಂತಹ ಸುತ್ತಾಟಗಳಲ್ಲಿ ಗ್ರಾಮೀಣ ಪ್ರದೇಶದ ಜನರೊಡನೆ ಒಡನಾಡಿದ ಸಂಗತಿಗಳನ್ನು ತಪ್ಪದೆ ಬರೆಯುತ್ತಿದ್ದರು. ಮೂಲತಃ ಅವರೊಬ್ಬರು ರೈತನಾಗಿಯೇ ಉಳಿದರು. ಕನ್ನಡದ ಜನಪ್ರಿಯ ಕಾದಂಬರಿಕಾರ ಬಸವರಾಜ ಕಟ್ಟೀಮನಿ ಹೇಳುವಂತೆ, 'ಲಂಕೇಶ್ ಪ್ರೊಫೆಸರಾದರೂ ಅವರ ರೈತ ರಕ್ತ ತಣ್ಣಗಾಗಲಿಲ್ಲ, ಕೋಪ ಬಂದಾಗ ಬಯ್ಯುವುದು ಮೆಚ್ಚುಗೆಯಾದಾಗ ತಬ್ಬಿಕೊಳ್ಳುವುದು ರೈತ ಸಹಜ ಸ್ವಭಾವ' (ಬಸವರಾಜ ಕಟ್ಟೀಮನಿ, ತಲೆಮಾರಿನ ತಳಮಳ, ಪು 7)




ತೆಂಗಿನಕಾಯಿಯಂತೆ ಲಂಕೇಶ್ ವ್ಯಕ್ತಿತ್ವ. ಹೊರಗಿನ ನಾರು, ಚಿಪ್ಪು ಎಲ್ಲದನ್ನೂ ಸುಲಿದು ಒಳಹೊಕ್ಕರೆ ತಂಪಾದ ಅಕ್ಕರೆಯ ಎಳನೀರು, ತಿರುಳು ದೊರೆಯುತ್ತಿತ್ತು, ಅದನ್ನು ಸವಿಯುವ ಬಯಕೆಯಿದ್ದವರಿಗೆ ತಾಳ್ಮೆ ಇರಬೇಕಾಗುತ್ತಿತ್ತು; ತಾಳ್ಮೆಯಿಲ್ಲದವರು ಲಂಕೇಶರೊಂದಿಗೆ ಸ್ನೇಹ ಉಳಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ, ಒಬ್ಬ ವ್ಯಕ್ತಿಯ ಅಂತರಂಗವನ್ನು ಹೊಕ್ಕು ಅದರ ಸೂಕ್ಷ್ಮವನ್ನೂ ಅರಿಯಬಲ್ಲವರಾಗಿದ್ದ ಲಂಕೇಶರು ತಮ್ಮ ಸನಿಹಕ್ಕೆ ಬಂದವರನ್ನೆಲ್ಲಾ ಸುಲಭವಾಗಿ ಒಪ್ಪಿಕೊಳ್ಳುತ್ತಿರಲಿಲ್ಲ, ಜನಪ್ರಿಯತೆಯನ್ನು ತಿರಸ್ಕಾರದಿಂದ ನೋಡುತ್ತಿದ್ದ ಅವರು ಜನರನ್ನು ಮೆಚ್ಚಿಸಲೆಂದೇ ಎಂದೂ ಮಾತನಾಡುತ್ತಿರಲಿಲ್ಲ; ಅಥವಾ ಬರೆಯುತ್ತಿರಲಿಲ್ಲ, ಹೀಗಾಗಿ ಅವರಿಗೆ ಸಾಕಷ್ಟು ವೈರಿಗಳಿದ್ದರು, ಟೀಕಾಕಾರರಿದ್ದರು. ಅವರೆಲ್ಲ ಪ್ರಚಾರ ಮಾಡಿರುವಂತೆ, ಲಂಕೇಶ್ ಸ್ನೇಹಜೀವಿಯಲ್ಲ; ಒರಟ, ಜಗಳ ಗಂಟ. ಈ ಟೀಕೆಗಳನ್ನು ಲಂಕೇಶ್ ಹಸನ್ಮುಖಿಯಾಗಿಯೇ ಸ್ವೀಕರಿಸುತ್ತಿದ್ದರು; ಒಂದೆಡೆ ಈ ಬಗೆಗೆ ಹೀಗೆ ಬರೆದಿದ್ದಾರೆ. 'ಗೆಳೆಯರೊಬ್ಬರು ನನ್ನ ಸ್ನೇಹಿತರ ಬಗ್ಗೆ ನಗುತ್ತ 'ನೀವೊಂದು ವಿಧಾನಪರಿಷತ್ತು ಅಲ್ಲವೇ? ಪ್ರತಿ ಎರಡು ವರ್ಷಕ್ಕೆ ನಿಮ್ಮ ಮೂರನೇ ಒಂದು ಭಾಗ ಸ್ನೇಹಿತರು ನಿವೃತ್ತರಾಗುತ್ತಾರೆ' ಅಂದರು. ಎಂದು ಸಂತೋಷದಿಂದಲೇ ಒಪ್ಪಿಕೊಂಡಿದ್ದಾರೆ. (ಕಂಡದ್ದು ಕಂಡ ಹಾಗೆ, ಪು.75) ಆದರೆ ಈ ಅಭಿಪ್ರಾಯ ಸಂಪೂರ್ಣ ಸತ್ಯವಲ್ಲ, ಲಂಕೇಶರಿಗೆ ಜೀವನದುದ್ದಕ್ಕೂ ಆಪ್ತರಾಗಿಯೇ ಉಳಿದಿದ್ದ ಹಲವಾರು ಗೆಳೆಯರಿದ್ದರು; ಅತೀವ ನಿಷ್ಠೆ ಇಟ್ಟುಕೊಂಡಿದ್ದ ನೂರಾರು ಅಭಿಮಾನಿಗಳಿದ್ದರು; ಕರ್ನಾಟಕದ ಉದ್ದಗಲಕ್ಕೂ ಅವರನ್ನು ಕೊಂಡಾಡುವ ಸಾವಿರಾರು ಸಂಖ್ಯೆಯ ಅಭಿಮಾನಿ ಬಳಗವಿತ್ತು.

ಗೆಳೆಯರೆಂದ ಮಾತ್ರಕ್ಕೆ ಟೀಕಿಸದೇ ಇರುವುದು ಲಂಕೇಶ್ ಸ್ವಭಾವವಲ್ಲ, ಎಷ್ಟೋ ಬಾರಿ ಆಪ್ತರಾದವರನ್ನೇ ಚುಚ್ಚಿ ಘಾಸಿಪಡಿಸುವುದರಲ್ಲೇ ಅವರು ಸಂತೋಷಪಡುತ್ತಿದ್ದುದೂ ಉಂಟು. ಆದರೂ ಒಮ್ಮೆ ಲಂಕೇಶರ ಆಪ್ತ ಬಳಗಕ್ಕೆ ಸೇರಿದವರು ಎಂದಿಗೂ ಬಿಟ್ಟುಹೋಗುತ್ತಿರಲಿಲ್ಲ, ಅವರ ಬಳಗದ ಹೊರವಲಯದಲ್ಲಿದ್ದ ಗೆಳೆಯರು ಆಗಾಗ ನಿವೃತ್ತಿಯಾಗುತ್ತಿದ್ದರು. ಅಲ್ಲಿಗೆ ಹೊಸಬರು ಸೇರ್ಪಡೆಯಾಗುತ್ತಿದ್ದರು. ಅಂತರಂಗದ ಆಪ್ತ ಗೆಳೆಯರನೇಕರು ಕೊನೆಯ ಉಸಿರು ಇರುವವರೆಗೆ ಮತ್ತು ಬಳಿಕವೂ ಅವರ ಸ್ನೇಹಕ್ಕೆ ನಿಷ್ಠರಾಗಿಯೇ ಬಾಳಿದರು; ಇಂದಿಗೂ ಅವರ ನೆನಪನ್ನು ಹೊತ್ತು ಪ್ರಚಾರ ಮಾಡುತ್ತಿದ್ದಾರೆ.

ಬರಹಗಾರನಾಗಿ ಲಂಕೇಶರದು ಮುಕ್ತ ಮನಸ್ಸು; ವರ್ತಮಾನಕ್ಕೆ ಸದಾ ಸ್ಪಂದಿಸುವ ಚೈತನ್ಯ. ಅವರ ಆತ್ಮವಿಶ್ವಾಸವೂ ಅಚಲವಾದುದು; ಎಂತಹ ಕ್ಲಿಷ್ಟ ಸಂದರ್ಭದಲ್ಲಿಯೂ ಎದೆಗುಂದದೆ ಮುನ್ನುಗ್ಗುವ ಧೈರ್ಯ. ತಮ್ಮ ಅಗಾಧವಾದ ಆತ್ಮವಿಶ್ವಾಸವು ಸ್ವಲ್ಪಮಟ್ಟಿಗೆ ಕುಗ್ಗಿದ ದಿನಗಳಲ್ಲಿ ಹೀಗೆ ಬರೆಯುತ್ತಾರೆ; 'ಬರಹಗಾರನ ಆತ್ಮವಿಶ್ವಾಸ ಅಖಂಡ. ನನಗೆ ಇಲ್ಲಿಯವರೆಗೆ ಇದ್ದ ಗೀಳುಗಳನ್ನು ನೆನೆದರೆ ನನಗೇ ನಗು ಬರುತ್ತದೆ. ವ್ಯಾಪಾರದಲ್ಲಿ- ಬೇಸಾಯದಲ್ಲಿ, ಪತ್ರಿಕೋದ್ಯಮದಲ್ಲಿ, ಸಿನಿಮಾ ನಿರ್ದೇಶನದಲ್ಲಿ-ಎಲ್ಲೆಲ್ಲೂ ನಾನು ಯಶಸ್ವಿಯಾಗಬಹುದೆಂಬ ವಿಶ್ವಾಸ, ಕಲ್ಪನೆ ನನಗಿತ್ತು, ಆದರೆ ದಿನಗಳೆದಂತೆ ಭ್ರಮೆಗಳು ಕಡಿಮೆಯಾಗುತ್ತವೆ.' (ಕಂಡದ್ದು ಕಂಡ ಹಾಗೆ ಪು.7)


ಬದುಕನ್ನು ಲೆಕ್ಕಾಚಾರವಾಗಿ ಕಂಡುಕೊಂಡವರಲ್ಲ ಲಂಕೇಶ್. ಅದನ್ನೊಂದು ಸವಾಲಿನಂತೆ, ಜೂಜಿನಂತೆ, ಆಕ್ರಮಣಶೀಲ ಪ್ರವೃತ್ತಿಯಿಂದ ಸ್ವೀಕರಿಸಿದರು. 'ನನ್ನನ್ನು ಆಳವಾಗಿ ಅಲ್ಲಾಡಿಸಿದ ಮೂರು-ಪ್ರೇಮ, ಜೂಜು, ಕದನ... ಪ್ರೇಮ, ಜೂಜು, ಕದನ ವಿವಿಧ ಮಟ್ಟದಲ್ಲಿ ನನ್ನನ್ನು ತೊಡಗಿಸಿವೆ; ಈ ಮೂರು Chancy ಆಗಿರುವುದರಿಂದ, ಈ ಮೂರರಲ್ಲೂ ಅದೃಷ್ಟ ಮತ್ತು ಸ್ವಂತ ಪ್ರಯತ್ನ ಎರಡೂ ಸೇರಿರುವುದರಿಂದ ಹೀಗೆ ನನ್ನನ್ನು ತೊಡಗಿಸಿರಬಹುದು' (ಕಂಡದ್ದು ಕಂಡ ಹಾಗೆ, ಪು.6) ಮತ್ತೊಂದೆಡೆ ಸಾವಿನ ಹೆದರಿಕೆಯ ಬಗೆಗೆ ಚಿಂತಿಸುತ್ತಾರೆ. 'ಬರೆಯುವ ಕಲೆಗೆ ಸೋತ ನನಗೆ ಎಲ್ಲೋ ಆಳದಲ್ಲಿ ಸಾವಿನ ಹೆದರಿಕೆ ಸದಾ ಇದೆ; ನಿದ್ರೆಯಂತೆ ನಮ್ಮನ್ನು ಆವರಿಸಿ ಸಂಪೂರ್ಣ ಇಲ್ಲವಾಗಿಸುವ ಸಾವಿನ ಬಗ್ಗೆ ಮಾತ್ರ ನಾನು ಹೇಳುತ್ತಿಲ್ಲ; ನಮ್ಮ ನೋವು, ವ್ಯಸನ, ಬಿಳಿಗೂದಲು, ನಿಶ್ವಾಸದೊಂದಿಗೆ ನಮ್ಮತ್ತ ತೆವಳುವ ಸಾವನ್ನು ಕುರಿತು ಚಿಂತಿಸುತ್ತಿದ್ದೇನೆ; ನಮ್ಮನ್ನು ಜೀವಿಸುವಂತೆ ಒತ್ತಾಯಪಡಿಸುವ ಅನಿವಾರ್ಯಗಳಿಗೆಗಳ ಬಗ್ಗೆ ಹೇಳುತ್ತಿದ್ದೇನೆ; ಈ ಜೀವಿತವನ್ನು ಖರೆಯೆನ್ನಿಸುವಂತೆ ಮಾಡುವ ಸೃಷ್ಟಿ ಕಾರ್ಯದ ಬಗ್ಗೆ ಹೇಳುತ್ತಿದ್ದೇನೆ' (ಕಂಡದ್ದು ಕಂಡ ಹಾಗೆ, ಪು.3)




ಪ್ರತಿಭೆ, ದಣಿವರಿಯದ ದುಡಿಮೆ, ಸಾಹಸದಿಂದ ಮುನ್ನುಗ್ಗುವ ಪ್ರವೃತ್ತಿಯಿದ್ದ ಅಪೂರ್ವ ವ್ಯಕ್ತಿತ್ವದ ಲಂಕೇಶ್, ಸೋಮಾರಿಗಳನ್ನು, ಕೃತ್ರಿಮ ಬುದ್ಧಿಯವರನ್ನು ಯಶಸ್ಸಿನ ಬಾಲ ಹಿಡಿದು ಅಧಿಕಾರದಲ್ಲಿದ್ದವರನ್ನು, ದೈನ್ಯತೆಯಿಂದ ಆಶ್ರಯಿಸುವವರನ್ನು ತಿರಸ್ಕಾರದಿಂದ ನೋಡುತ್ತಿದ್ದರು; ಇಂತಹವರಿಗೆ 'ಲಂಕೇಶ್ ಪತ್ರಿಕೆ' ದುಃಸ್ವಪ್ನದಂತೆ ಕಾಡುವುದೂ ಇತ್ತು.

ಇಪ್ಪತ್ತನೆಯ ಶತಮಾನದ ಶ್ರೇಷ್ಠ ಸೃಜನಶೀಲ ಕನ್ನಡ ಲೇಖಕರಲ್ಲಿ ಒಬ್ಬರೆಂಬುದಷ್ಟೇ ಲಂಕೇಶರ ಮಹತ್ವವಾಗಿದ್ದರೆ, ಅವರಿಗೆ ಕನ್ನಡ ಜನಮನದಲ್ಲಿ ಇಂತಹ ಮನ್ನಣೆ ಸಿಗುತ್ತಿರಲಿಲ್ಲ' ಸಾಹಿತ್ಯ, ರಂಗಭೂಮಿ, ಚಲನಚಿತ್ರ, ಎಲ್ಲಕ್ಕೂ ಮಿಗಿಲಾಗಿ 'ಲಂಕೇಶ್ ಪತ್ರಿಕೆ'ಯ ಮೂಲಕ ಒಂದು ಜೀವಂತ ಸಂಸ್ಕೃತಿ ನಿರ್ಮಾಣದತ್ತ ಅವರು ಅಹರ್ನಿಶಿ ದುಡಿದರು. ಇಪ್ಪತ್ತನೆಯ ಶತಮಾನದ ಕೊನೆಯ ಎರಡು ದಶಕಗಳ ಕನ್ನಡನಾಡಿನ ವೈಚಾರಿಕತೆ, ಸಾಮಾಜಿಕ ಬದ್ಧತೆ, ಪ್ರಗತಿಪರ ರಾಜಕಾರಣಿಗಳೆಲ್ಲರ ಹಿಂದೆ ಲಂಕೇಶರ ಕೊಡುಗೆಯಿದೆ. 'ಪತ್ರಿಕೆಗಳೆಂದರೆ ರಾತ್ರಿ ಹಾಗೂ ಮಧ್ಯಾಹ್ನದ ನಿದ್ದೆಯ ಮುಂಚಿನ ಓದುವ ಸಾಮಗ್ರಿ ಮಾತ್ರವಾಗಿರುವಲ್ಲಿ-ಪತ್ರಿಕೆಯ ಓದು ಎಂಬುದು ಸಾಮಾಜಿಕ, ರಾಜಕೀಯ ಎಚ್ಚರ-ಚರ್ಚೆ-ಚಕಮಕಿ -ಶಿಕ್ಷಣ-ಓದು-ಸಂವಾದ- ಅದೊಂದು ಆತ್ಮಸಂಬಂಧಿ ಕ್ರಿಯೆಯನ್ನಾಗಿ ಪರಿವರ್ತಿಸಿದರು. ಕಮರ್ಷಿಯಲ್ ಪತ್ರಿಕೆಗಳಿಗಿಂತ ಭಿನ್ನವಾಗಿ ಸಂಪಾದಕನ ಜಾಗದಲ್ಲಿ ಇಲ್ಲೊಬ್ಬ ಕೇಳುಗನಿದ್ದ, ಓದುಗನಿದ್ದ, ವಿಮರ್ಶಕನಿದ್ದ, ಕಠಿಣತೆ-ಮುಗ್ಧತೆ-ಆತಂಕ-ಅಸೂಯೆ-ಜಗಳಕೋರತನ, ಮೃದುತ್ವ-ಪ್ರೀತಿ-ಸಂವೇದನ ಶೀಲತೆ-ಸೂಕ್ಷ್ಮತೆ- ಎಲ್ಲವನ್ನೂ ಆಳದ ಸೃಜನಶೀಲ ಮನದಲ್ಲಿ ಕಾಪಿಟ್ಟುಕೊಂಡ ಅಪ್ರತಿಮ ಲೇಖಕನಿದ್ದ." (ವೈದೇಹಿ, ಬೋದಿಲೇರನ ಸುಖ, ಪು21)

ವೈವಿಧ್ಯಮಯ ಆಸಕ್ತಿಗಳ ವರ್ಣರಂಜಿತ ವ್ಯಕ್ತಿತ್ವದ ಲಂಕೇಶ್ ಬದುಕನ್ನು ಅರ್ಥಪೂರ್ಣವಾಗಿಸಲು ನಿರಂತರ ಚಟುವಟಿಕೆಯಿಂದಿರಬೇಕು; ಸೃಷ್ಟಿಶೀಲವಾಗಿರಬೇಕು ಎಂದು ನಂಬಿದ್ದರು. ಬಹಳ ದೀರ್ಘಕಾಲ ಬದುಕದಿದ್ದರೂ, ಜೀವಿಸಿದ್ದ ಕಾಲಮಾನದಲ್ಲಿ ಸದಾ ಕ್ರಿಯಾಶೀಲರಾಗಿದ್ದು ಸುತ್ತಣ ಆಗು-ಹೋಗುಗಳಿಗೆ ಬಹು ತೀವ್ರವಾಗಿ ಎಚ್ಚರದಿಂದ ಪ್ರತಿಕ್ರಿಯಿಸುತ್ತಿದ್ದರು. ತಟಸ್ಥವಾಗಿ ಬದುಕುವುದೇ ಸಾವು; ಅಂತಹ ಬದುಕು ಅವರಿಗೆ ಬೇಕಿರಲಿಲ್ಲ, ಶರೀರಕ್ಕೆ ಕೊನೆಗಾಲದಲ್ಲಿ ಆವರಿಸಿದ ರೋಗ ವೇದನೆಗಳನ್ನು ಲೆಕ್ಕಿಸದೆ ಕೊನೆಯ ದಿನವೂ ಬರೆಯುತ್ತಲೇ ಬದುಕಿ, ನಿದ್ರೆಯಲ್ಲೇ ಸಾವನ್ನಪ್ಪಿದ ಅಪರೂಪದ ಬದುಕು ಲಂಕೇಶರದು. ■



ಪಿ. ಲಂಕೇಶ್



[illegible]

ಈ ಪುಸ್ತಕದ ಪ್ರತಿಗಳು ನಮ್ಮ ಕಚೇರಿಯಲ್ಲೂ ಲಭ್ಯ.

[illegible]

ಜೆಡಿಎಸ್‌ನೋರ ಆರ್ಟ್ರ್ರ್ ಬಾಳಕೆ ಬತ್ತಾಯಿಲ್ಲ

ಸುಮ್ಮನೆ ಕುಳಿತಿದ್ದ ಸೀರ ಕುಹಕವಾಗಿ ನಕ್ಕು, "ಎಡೂರಪ್ಪ ಕಾರಿನ ಪ್ಯಾಗುಟ್ರಿ ಮಾಡ್ತನಂತೆ?" ಎಂದ.

"ಯಾರೊ ಹೇಳಿದೋರು?" ಎಂದ ಉಗ್ರಿ.

"ಯಾರೇಳದೇನು, ಪೇಪುರ್‍ಲ್ಲೆ ಕೊಟ್ಟವುರಂತೆ ಕಂಡ್ಯ."

"ಏ, ಅವುನು ಕಾರಿನ ಪ್ಯಾಗುಟ್ರಿ ಮಾಡದಿಲ್ಲ ಕಣೊ. ಟಾಟಾ ಕಂಪ್ನಿಯೋರು ಮಾಡಕ್ಕೆ ಅಂತ ವಂಟದ್ರು. ಅವುರ ಕರದು ಇಲ್ಲೆ ನಮ್ಮ ಕರ್ನಾಟಕದಲ್ಲೇ ಮಾಡಿ ಅಂತ ಕರದಿದ್ದ. ಅವುರ ಬಂದು ನೋಡಿ ಇಲ್ಲಿ ಆಗದಿಲ್ಲ ಅಂದುಬುಟ್ಟೊದರಂತೆ."

"ಅದ್ಯಾಕಂಗಂದ್ರೂ?" ಎಂದಳು ಜುಮ್ಮಿ.

ಬಯಲುಸೀಮೆಯ
ಕಟ್ಟೆಪುರಾಣ
ಬಿ. ಚಂದ್ರೇಗೌಡ

"ಕಾರಿನ ಪ್ಯಾಗುರಿ ಮಾಡಬೇಕಾದ್ರೆ, ನೂರಾರು ಯಕರೆ ಜಮೀನು ಕೊಡಬೇಕು, ಹಗಲುರಾತ್ರಿ ಕರಂಟು ಕೊಡಬೇಕು, ನೀರು ಕೊಡಬೇಕು. ಇದ್ಯಲ್ಲ ಎಡೂರಪ್ಪಂತ ಇದ್ದತೇ?"

"ಅವುನ್ಯಲ್ಲ ಇವುನೆ ಕೊಡಬೇಕೆ?"

"ಊ ಮತ್ತೆ. ಅದನ್ಯಲ್ಲ ಇವುನು ಕೊಟ್ರೆ ಅವುನು ಒಂದು ಲಕ್ಷ ರೂಪಾಯಿನ ಕಾರು ಕೊಡ್ತನೆ."

"ಇದೇನ್ಲ ಹಿಂಗೇಳ್ತೀ, ಆಟೂರುಕ್ಸುಕ್ಕೆ ಯರಡು ಲಕ್ಷಾದತೆಂತೆ?"

"ಆಟೋರುಕ್ಸುಕ್ಕೆ ಹನ್ನರಡು ಜನ ತುಂಬತನೆ. ಈ ಟಾಟಾ ಕಾರಿಗೆ ಮೂರು ಮತ್ತೊಂದು ಜನ ಅಷ್ಟೆಯ."

"ಕಾಸಿಗೆ ತಕ್ಕಾದ ಕಜ್ಜಾಯ" ಎಂದ ಕಾಳಮಾವ.

"ಕರಟ್ ಕಣಮಾವ ನೀನೇಳಿದ್ದು. ಅವುನು ಏನು ಕೊಡ್ತನೆ ಅಂತ ಗೆಸ್ ಮಾಡಿದ್ದೆ ನಾನು. ಒಂದು ಇಡ್ಲಿ ಪಾತ್ರೆ ಗಾತ್ರ ಇಂಜನ್ನು, ನಾಕು ಚಕ್ರ, ನಾಲ್ಕು ಗಾಜು, ಅದನ್ಯಲ್ಲ ಮುಚ್ಚರೊ ತಗಡು, ವಳಗೊಂದ ನಾಕು ಸೀಟು, ಇಷ್ಟ ಒಂದು ಲಕ್ಷಕ್ಕೆ ಕೊಡಕ್ಕಾಗದಿಲವೆ?"

"ಕೊಡಬಹುದು ಬಿಡು. ನಂತಾವುಲು ಒಂದು ಕಾರಿದೆ ಅನ್ನೊವ್ಯಲ್ಲ ತಗತಿದ್ರೊ" ಎಂದ ಸೀರ.

"ವಟ್ಟಗಿಟ್ಟಲ್ಲದೆ ಇದ್ರು ಜುಟ್ಟಿಗೆ ಮಲ್ಲಿಗೆ ಹೂವು ಅಂತ ಅದು ಬ್ಯಾರೆ ಕೇಡು. ಈ ವರ್ಷ ಬರಾಬ್ಬರಿ ಹತ್ತು ರೂಪಾಯಿಗೊಂದು ಸೇರು ರಾಗ್ಯಾಯ್ತದೆ, ನೋಡಿವಿರು" ಎಂದ ಕಾಳಮಾವ.

"ಈಗಾಗ್ಲೆ ಆಗ್ಯದೆ ಕಣಮಾವ. ಜನಗಳೆ ಯಾತುಕೂ ಕೇರ್ ಮಾಡ್ತಯಿಲ್ಲ" ಎಂದ ಉಗ್ರಿ.

"ಏಟು ದಿನಂಗಾಡ್ಯವುಲ? ಈ ಬ್ಯಾಸಗೆ ತಡಾಯ್ಲಿ ಕಾಣ್ತದೆ. ದನಿಗೆ ಕುಡಿಯಕ್ಕೆ ನೀರಿರದಿಲ್ಲ, ವಟ್ಟಗೆ ರಾಗಿರದಿಲ್ಲ, ಆಗ ಮ್ಯರಿತಿದ್ದೊರ್‍ಕ್ಯಲ್ಲ ಏನಾಯ್ತರೆ ನೋಡು."

"ನಾನಾಗ್ಲೆ ಹೇಳಿದನಲ್ಲ ಮಾವ. ಜನ ಯತಕೂ ಕೇರ್ ಮಾಡದಂಗೆ ಐಲೋ ಅಂತ ಕುಣಿತರೆ. ನೋಡು ಈ ಸತಿ ದಸರದಲ್ಲಿ ಎಡೂರಪ್ಪನ್ನೂ, ಶೋಬ ಕರಂದ್ಲಾಜೆನೂ ನೋಡಕ್ಕೆ ಯರಡು ಕಣ್ಣು ಸಾಲ್ತಿರಲಿಲವಂತೆ. ಅಂಗೆ ಮೈಮರತೋರು ಮುಂದೇನು ಬತ್ತದೆ ಏನಾಯ್ತದೆ ಅಂತ ಯೋಚನೆ ಮಾಡ್ತರೆ?"

"ಅವುಳು ಮೈಸೂರಿನ ಉಸ್ತುವಾರಿ ಮಂತ್ರಿ. ಎಡೂರಪ್ಪ ಮುಖ್ಯಮಂತ್ರಿ. ಅವುರಲ್ದೆ ಇನ್ನಾರು ಮ್ಯರಿತರೊ ಉಗ್ರಿ? ಕಳುದು ವರ್ಷ ಕುಮಾರಸ್ವಾಮಿ ಮ್ಯರಿಲಿಲ್ವೆ. ಅಂಗೆ ಇವುರು" ಎಂದ ವಾಟಿಸ್ಸೆ.

"ಅಂಗರೆ ಇವುರುದೂ ಒಂದು ಕಾಲ, ಬುಡತ್ತಗೆ" ಎಂದಳು ಜುಮ್ಮಿ.

"ಊ ಕಣಕ್ಕ. ದ್ಯಾವೇಗೌಡ್ರುದು ಒಂದು ಕಾಲ



ನ್ನದಿತು. ಈಗ ಹೋಗಿ ಯಾವುದೊ ಆಸುಪತ್ರೆಲಿ ಮನಿಗಿದ್ದರಂತೆ. ಅಂತಾ ಟೇಮಲ್ಲಿ ಪಾಪ ಅವುರ ಪಾರ್ಟಿ ಪ್ರಸಿಡೆಂಟೇ ತೀರೋದ" ಎಂದ ವಾಟಿಸ್ಸೆ.

"ಏನಾಗಿತ್ಲ ಅವುರಿಗೆ?"

"ಆರ್ಟಟ್ಯಾಕು ಕಣಕ್ಕ. ಯಾಕೊ ಜೆಡಿಎಸ್‌ನೋರಿಗೆ ಆರ್ಟ್ ಬಾಳಕೆ ಬತ್ತಾಯಿಲ್ಲ. ಮದ್ಲು ಕುಮಾರಸ್ವಾಮಿ ರಿಪೇರಿ ಮಾಡಿಸಿಗಂಡ. ಆನಂತರ ಚಲುವರಾಯಸ್ವಾಮಿ ಮಾಡಿಸಿಗಂಡ. ಏನ್ನು ಮಾಡಿಸಗಳದೆ ಸಿದ್ದ ರೈಟೇಳಿದ. ಈಗ ಮೀರಾಜುದ್ದೀನ್ ಪ ಹೋಗೆಬುಟ್ಟ ಅತ್ತಗೆ."

"ವಯಿಸೇಟವುನಿಗೇ?"

"ಐವತ್ತೊರ್ಸ ಅಷ್ಟೆ ಕಣಕ್ಕ. ಪಾಪ ಯ ಹೆಣ್ಣುಮಕ್ಕಳಂತವುನಿಗೆ."

"ಏಳು ಜನವೆ?"

"ಸಾಬರಲ್ಲವೇನಕ್ಕ, ಅದರಲ್ಲೆ ಆಶ್ಚರ್ಯ?"

"ಸಾಬರೇನು, ಇವುರು ಅಂಗೆ ಅಲವ ಈ ಚಿಕ್ಕಣ್ಣನಿಗೆ ಐದವೆ. ಆ ಯಳವ ಆರವೆ. ಅಂಗೆ ಮಿರಾಜುದ್ದೀನ್ ಪಟೇಲ ಏಳಿದ್ದವೇನೊ ತಗೊ."

"ಯಸ್ವೆಂ ಕಿಷ್ಣಾರಪ್ಪನಿಗೇ ವಂಬತ್ತೆ ಅದಕ್ಕೇನೇಳ್ತೀ?" ಎಂದ ಸೀರ.

"ಏನೂ ಹೇಳಕ್ಕಾಗದಿಲ್ಲ ಚ ಗಂಡುಮಗ ಪಡಿಲೇಬೇಕು ಅಂತ ತೊಟ್ಕೊರ ಸೋಲು ಅದು. ನಾವು ಅಂದ್ರೂ ಹೆಣ್ಣುಮಕ್ಕಳು ಹಟ ಮಾಡಿ ಹಿಂಗಾಯ್ತದೆ. ಅಂತೂ ದ್ಯಾವೇಗೌಡ ಹ್ಯಾಂಡ್ ಕಳಕಂಡ."

"ಊ ಕಣೊ. ಒಕ್ಕಲಿಗರೂ ಸಾಬರು ಓಟ ಸಾಕು ಇನ್ನುಳದ ಕ್ಯಳಜಾತಿ ಓಟ ಕೊಂಡಕ ರಾಜಕಾರಣ ಮಾಡನ ಅಂತ ದ್ಯಾವೇಗೌಡ ಲ್ಯಕ್ಕ ಆಯ್ಕೊಂಡು ತುಂಡುಗುತ್ತಿಗೆ ರಾಜಕಾರಣ ಮಾ ಈಗ ಇನ್ನಾವ ಸಾಬನಾರ ಹುಡುಕಬೇಕಾಗ್ಯದೆ."

"ಹುಡುಕ್ತನೆ ಬುಡು, ಅವುಕೇನು ಬರವೆ" ಎ ಸೀರ.


ಸ್ವಂತ ಮನೆಗೆ ಅಂದರೆ ಅದೇ ಜಾತಿಗೆ ಅಲ್ಲವೇನ

ಭಯಂಕರ ಕನಸು.

ಚಾತುರ್ವರ್ಣ ವ್ಯವಸ್ಥೆಯ ಪವಿತ್ರ ಹಿಂದೂ ಧರ್ಮದಲ್ಲಿ ಪ್ರಥಮ ವರ್ಗದವರು ಮಾತ್ರ ಉಳಿದಿದ್ದಾರೆ. ಮಿಕ್ಕೆಲ್ಲರೂ ಇತರೆ ಧರ್ಮಗಳಿಗೆ ಮತಾಂತರಗೊಂಡಿದ್ದಾರೆ! ತಮ್ಮ ಸೇವೆ ಮಾಡಲೆಂದೇ ಜನ್ಮ ತಾಳಿದ್ದವರೆಲ್ಲ ಈ ಪ್ರಕ್ರಿಯೆಯಿಂದಾಗಿ ಬ್ರಹ್ಮ ತೇಜಸ್ಸಿನಿಂದ ಕಂಗೊಳಿಸಬೇಕಾದ ಮುಖಗಳು, ತಮ್ಮ ಅಗತ್ಯಗಳನ್ನು ತಾವೇ ಪೂರೈಸಿಕೊಳ್ಳಬೇಕಾದ ಅನಿವಾರ್ಯತೆಯಿಂದಾಗಿ ಕಳೆಗುಂದಿವೆ. ಪರಕೀಯರ ದಾಳಿಯಿಂದ ಹಾಳುಬಿದ್ದ ದೇವಾಲಯಗಳಂತೆ ಪೂಜೆ ಪುನಸ್ಕಾರ ಇಲ್ಲದೆ ದೇವಾನುದೇವತೆಗಳ ವಿಗ್ರಹಗಳೆಲ್ಲ ಕಾಗೆಗೂಬೆಗಳ ಆವಾಸಸ್ಥಾನವಾಗಿವೆ. ಜಾಗಟೆ ಗಂಟೆಗಳ ಇಂಪಾದ ದನಿಗಳಿಗೆ ಬದಲಾಗಿ ಕರ್ಕಶ ಕೂಗು ಎಲ್ಲೆಡೆ ವ್ಯಾಪಿಸಿದೆ!

ಪೇಜಾವರ ವಿಶ್ವೇಶತೀರ್ಥರು ಬೆಚ್ಚಿಬಿದ್ದರು. ಮೈಎಲ್ಲ ಬೆವೆತು ಹಾಸಿಗೆಯೂ ಒದ್ದೆಯಾಗಿತ್ತು. ಕನಸಿನ ಲೋಕದಿಂದ ಇಹಪ್ರಪಂಚಕ್ಕೆ ಇಳಿದುಬಂದರು. ಹಿಂದೂ ಧರ್ಮಕ್ಕೆ ಅಂತಹ ದುರ್ಗತಿ ಬಂದಿಲ್ಲವೆಂದು ತಿಳಿದು ನೆಮ್ಮದಿ ತಂದುಕೊಂಡರು. ಸಂಘ ಪರಿವಾರದ ಸತತ ಪರಿಶ್ರಮದಿಂದಾಗಿ ಈ ಹೀನಸ್ಥಿತಿ ಬರುವುದಿಲ್ಲವೆಂದು ಮನವರಿಕೆಯಾಗಿದ್ದರೂ ಒಮ್ಮೊಮ್ಮೆ ಕನಸು ನಿಜವಾಗುವ ಸಂಭವ ಇರುವುದರಿಂದ ಹಿಂದೂ ಧರ್ಮದ ಮೇಲುಗೈಗಾಗಿ ಕಾರ್ಯ ಪ್ರವೃತ್ತರಾಗಲು ಚಿಂತಿಸಿದರು.

ಪವಿತ್ರ ಹಿಂದೂಧರ್ಮಕ್ಕೆ ಆಧಾರವೇ ವರ್ಣವ್ಯವಸ್ಥೆ ಹಾಗೂ ಜಾತಿ ವ್ಯವಸ್ಥೆ ಇವೆರಡನ್ನೂ ತೆಗೆದರೆ ಹಿಂದೂ ಧರ್ಮವೇ ಇರುವುದಿಲ್ಲ. 'ಚಾತುರ್ವರ್ಣಂ ಮಯಂ ಸೃಷ್ಟಿ' ಎಂದು ಆ ದಯಾಮಯನಾದ ಭಗವಂತನೇ ಭಗವದ್ಗೀತೆಯಲ್ಲಿ ಹೇಳಿದ್ದಾನೆ. ಈ ವರ್ಣಗಳ ಹುಟ್ಟಿಗೂ ಕಾರಣ ಇದೆ. ಪೂರ್ವಜನ್ಮದಲ್ಲಿ ಎಸಗಿದ ಕೃತ್ಯಗಳ ಫಲವನ್ನು ಈ ಜನ್ಮದಲ್ಲಿ ಅನುಭವಿಸುತ್ತಾನೆ. ಕೆಳವರ್ಗದವರು ಮೇಲ್ವರ್ಗದವರ ಸೇವೆಯನ್ನು ನಿರ್ವಂಚನೆಯಿಂದ ಮಾಡಿದರೆ ಮುಂದಿನ ಜನ್ಮದಲ್ಲಿ ಉತ್ತಮ ಕುಲದಲ್ಲಿ ಜನಿಸುತ್ತಾರೆ. ಭಗವಂತನೇ ಮಾಡಿರುವ ಈ ನಿಯಮವನ್ನು ಹುಲುಮಾನವರಾದ ನಾವು ಮುರಿಯಲು ಸಾಧ್ಯ ಇಲ್ಲ. ಮನುಧರ್ಮ ಶಾಸ್ತ್ರದ ಅನುಸಾರವಾಗಿಯೇ ಶೂದ್ರರಿಗೆ ವಿದ್ಯೆಯನ್ನು ನೀಡಲಾಗುತ್ತಿರಲಿಲ್ಲ. ಕಲಿಯಲೇಬೇಕೆಂಬ ಆಸಕ್ತಿ ಇದ್ದವರಿಗೆ ಈ ಜನ್ಮದಲ್ಲಿ ಸೇವೆಯನ್ನು ನಿಷ್ಕಲ್ಮಷ ಹೃದಯದಿಂದ ಮಾಡಿ ಮುಂದಿನ ಜನ್ಮದಲ್ಲಿ ಅವಕಾಶ ದೊರೆಯುತ್ತದೆ ಎಂದು ಹೇಳುತ್ತಾ ಬಂದಿದ್ದೇವೆ. ಯಾಕೆ? ಇದು ಧರ್ಮ ಶಾಸನ! ಭಾರತದ ಸಂವಿಧಾನದಲ್ಲಿ ಎಲ್ಲರಿಗೂ ಸಮಾನ ಹಕ್ಕು ಇರಬೇಕು ಎಂದು ನಮೂದಿಸಲಾಗಿದೆ. ಇದು ಅಧಾರ್ಮಿಕ. ಪುರಿಯ ಜಗದ್ಗುರುಗಳನ್ನು ಅಂದಿನ ಪ್ರಧಾನಿ ವಾಜಪೇಯಿಯವರು ದೆಹಲಿಗೆ ಕರೆಸಿಕೊಂಡಿದ್ದಾಗ 'ಈ ಸಂವಿಧಾನ ಧರ್ಮಬಾಹಿರ. ಇದರ ಬದಲು ಮನುಧರ್ಮ ಶಾಸ್ತ್ರ ನಮ್ಮ ಸಂವಿಧಾನ ಆಗಬೇಕು' ಎಂದು ಪ್ರುತಪಡಿಸಿದ್ದಾರೆ. ಶ್ರೀವಾತ್ಸವ ಎಂಬ ಹೈಕೋರ್ಟಿನ ನ್ಯಾಯಾಧೀಶರೂ 'ಭಗವದ್ಗೀತೆ ನಮ್ಮ ಸಂವಿಧಾನ ಆಗಬೇಕು' ಎಂದು ತೀರ್ಪು ನೀಡಿದ್ದಾರೆ. ಧಾರ್ಮಿಕ ಹಾಗೂ ನ್ಯಾಯ ಪಂಡಿತಪುರುಷೋತ್ತಮರು ಈ ರೀತಿಯ ಅಭಿಪ್ರಾಯ



ತಾಳಿದ್ದರೂ ಕ್ರೈಸ್ತ ಪಾದ್ರಿಗಳು ಇಂತಹ ಕ್ರಿಯೆಗಳು ಮಾನವಹಕ್ಕುಗಳ ಮೇಲಿನ ಹಲ್ಲೆ ಎಂದು ಸಾರುತ್ತಿರುವುದು ದುರಂತವೇ ಸರಿ.

ಕ್ರೈಸ್ತರು ಭಾರತಕ್ಕೆ ಕಾಲಿಟ್ಟುದೇ ಹಿಂದೂಗಳ ಮತಾಂತರಕ್ಕಾಗಿ. ಇದಕ್ಕಾಗಿ ಅವರು ಶೂದ್ರರಿಗೆ ಶಿಕ್ಷಣ ನೀಡುವ ಹುನ್ನಾರ ಮಾಡಿದರು. ನೂರಾರು ಶಾಲೆಗಳನ್ನು ತೆರೆದು ವಿದ್ಯೆ ನೀಡಲು ಪ್ರಾರಂಭಿಸಿದರು. ಧರ್ಮಶಾಸ್ತ್ರಗಳಲ್ಲಿ ಯಾವುದನ್ನು ನಿಷೇಧಿಸಲಾಗಿತ್ತೋ ಅದನ್ನು ನೀಡಲು ಮುಂದಾದರು. ಎಂತಹ ಧರ್ಮದ್ರೋಹ ಇದು!

ಇದೊಂದೇ ಅಲ್ಲ, ಪೂರ್ವಜನ್ಮದಲ್ಲಿ ಮಾಡಿದ ಕರ್ಮದ ಮೇಲೆ ಜೀವಿಯ ಆರೋಗ್ಯ ಅವಲಂಬಿತವಾಗಿರುತ್ತದೆ ಎಂಬುದು ಸರ್ವವೇದ್ಯವಾಗಿದೆ. ಅಂತಹ ಕರ್ಮ ಆಧಾರಿತ ಕಾಯಿಲೆಗಳನ್ನು ಗುಣಪಡಿಸಲು ಆಸ್ಪತ್ರೆಗಳನ್ನು ತೆರೆದರು! ಉಚಿತ ಚಿಕಿತ್ಸೆ ನೀಡಲು ಮುಂದಾದರು!

ಶಿಕ್ಷಣ ಮತ್ತು ಆರೋಗ್ಯ ನೀಡುವ ನೆಪದಲ್ಲಿ ಹಿಂದೂಗಳ ಮತಾಂತರ ಮಾಡುವ ಮೂಲಕ ಸಾಂಸ್ಕೃತಿಕ ಮಹಾಹತು ಸ್ಥಾಪಿಸುವ ಪ್ರಯತ್ನವನ್ನು ನಿರಂತರವಾಗಿ ನಡೆಸುತ್ತಿರುವುದು ಗುಟ್ಟಾಗಿ ಏನೂ ಉಳಿದಿಲ್ಲ! ಇದರ ವಿರುದ್ಧ ಸಮಸ್ತ ಹಿಂದೂಗಳು ಹೋರಾಟ ನಡೆಸಬೇಕಾಗಿದೆ.

ಹಿಂದೂ ಧರ್ಮದಲ್ಲಿನ ಕೊಳಕು ವ್ಯವಸ್ಥೆಯೇ ಮತಾಂತರಕ್ಕೆ ಕಾರಣ ಎಂದು ಹೇಳಲಾಗುತ್ತಿದೆ. ಪೂರ್ವಜನ್ಮದ ಕರ್ಮಫಲದಿಂದಾಗಿ ಅಸ್ಪೃಶ್ಯರಾಗಿ ಜನಿಸಿದ್ದಾರೆಯೇ ಪರಂತು ಬೇರೆ ಅಲ್ಲ. ಈ ಕರ್ಮಫಲದಿಂದ ಹೊರಬರಲೇಬೇಕಾದರೆ ಅವರು ಈ ಜನ್ಮದಲ್ಲಿ ಧರ್ಮಶಾಸ್ತ್ರದ ಅನುಗುಣವಾಗಿ ನಡೆಯಬೇಕಾದ್ದು ಅನಿವಾರ್ಯ. ಅದು ಬಿಟ್ಟು ಅನ್ಯಮಾರ್ಗ ಇಲ್ಲ. ಮತಾಂತರದ ಮೂಲಕ ಅಸ್ಪೃಶ್ಯತೆ ನಿವಾರಣೆ ಮಾಡಿಕೊಳ್ಳುತ್ತೇವೆಂದು ಭ್ರಮಿಸಿದ ಅಂತಹವರಿಗೆ ರೌರವ ನರಕ ಪ್ರಾಪ್ತಿಯಾಗುವುದು ಖಂಡಿತ!

ಭಗವಂತ ತನ್ನ ಭಕ್ತರನ್ನು ಆಗಾಗ್ಗೆ ಪರೀಕ್ಷಿಸುವುದು ಉಂಟು. ಅದಕ್ಕೆಂದೇ ಕೊಡಬಾರದ ಕಷ್ಟವನ್ನು, ದುಃಖವನ್ನು ಕೊಡುತ್ತಾನೆ. ಕಡುಬಡತನವೂ ಅದರಲ್ಲಿ ಒಂದು. ಇದನ್ನು ಅರಿಯಲಾರದವರು ಮತಾಂತರಿಗಳು ಒಡ್ಡುವ ಹಣದ ಆಮಿಷಕ್ಕೆ ಬಲಿಯಾಗಿ ಈ ದಯಾಮಯನಾದ ಭಗವಂತನ ಪರೀಕ್ಷೆಯಲ್ಲಿ ಸೋತು ಆತನ ಕೃಪಾದೃಷ್ಟಿಯಿಂದ ಹೊರಗೇ ಉಳಿಯುತ್ತಾರೆ! ಇಂತಹವರಲ್ಲಿ ಬ್ರಾಹ್ಮಣರೂ ಸೇರಿರುವುದನ್ನು 'ಸತ್ಯ ಶೋಧನಾ ಸಮಿತಿ' ಬಹಿರಂಗಗೊಳಿಸಿದೆ! ಶಿಕ್ಷಣ, ಆರೋಗ್ಯಕ್ಕೂ ಮಿಗಿಲಾಗಿ ಹಣದ ಆಮಿಷವೇ ಮತಾಂತರಕ್ಕೆ ಮೂಲಕಾರಣ ಎಂಬ ಸತ್ಯವನ್ನು ಅದು ಶೋಧನೆ ಮಾಡಿದೆ!

ಇಂತಹ ಎಲ್ಲ ಅಪಾಯಗಳಿಂದ ಹಿಂದೂ ಧರ್ಮದ ಅಧಃಪತನವನ್ನು ತಡೆಯಬೇಕು; ಇಹಲೋಕದಲ್ಲಿ ಕಷ್ಟ ಅಪಮಾನಗಳನ್ನು ಅನುಭವಿಸಿದ ರೂಪಕ ಲೋಕದಲ್ಲಿ ಸ್ವರ್ಗ ಸಿಗುವಂತೆ ಮಾಡಲೇಬೇಕು ಎಂಬ ಅ ನಿರ್ಧಾರವನ್ನು ಪೇಜಾವರ ಶ್ರೀಗಳು ಕೈಗೊಂಡರು. ಕಲ್ಯಾಣ ಕಾರ್ಯಕ್ಕಾಗಿ ಕರ್ನಾಟಕದ ಎಲ್ಲಾ ಮಠಾಧೀ ಸಂಘ ಸ್ಥಾಪಿಸಲು ಮುಂದಾದರು. ಹೀಗೆ ಹಿಂದೂ ಉದ್ಧಾರಕ್ಕೆ ಸ್ಥಾಪಿತಗೊಂಡಿದ್ದು 'ಕರ್ನಾಟಕ ರಾ ಮಠಾಧೀಶರ ಸಮನ್ವಯ ಸಮಿತಿ'. ಈ ಸಮಿತಿಯ ರಾಜ್ಯದ ಎಲ್ಲಾ ಮಠಾಧೀಶರೂ ಇರುತ್ತಾರೆಯೇ ಎಂಬು ಧರ್ಮದ್ರೋಹಿಗಳ ಪ್ರಶ್ನೆ. ಹಿಂದೂ ಧರ್ಮದಲ್ಲಿ ವಿ ಹೊಂದಿರುವವರೆಲ್ಲ ಇರುತ್ತಾರೆ ಎಂದಷ್ಟೇ ಹೇಳಬಹು ಧರ್ಮ ಪಾತಕಿ ಮಠಾಧೀಶರು ಇದರ ಕಕ್ಷೆಯಿಂದ ಹೊ ಇರುತ್ತಾರೆ! ಇದನ್ನು ಕೆಲವರು 'ಕರ್ನಾಟಕ ರಾಜ್ಯ ಭಾ ಮಠಾಧೀಶರ ಸಮನ್ವಯ ಸಮಿತಿ' ಎಂ ಹೆಸರಿಸುತ್ತಾರಂತೆ–ಇಂತಹ ಮಾತುಗಳಿಗೆ ಕಿವಿಗೊಡಬೇ ಯಾಕೆಂದರೆ ಹಿಂದೂ ಧರ್ಮ ಏಳ್ಗೆಯಾಗಬೇಕು ನೋ

ಅಣಕ
ಎಚ್.ಎಲ್. ಕೇಶವಮೂರ್ತಿ

ಹಿಂದೂ ಧರ್ಮದ ಏಳ್ಗೆಗಾಗಿ ಈ ಹಿಂದೆ ಹಲವಾ ಸಂಘಟನೆಗಳು ಸತತ ಪ್ರಯತ್ನ ನಡೆಸಿದ್ದವು ನಿ ಭಜರಂಗದಳದಂತ ವೃತ್ತಿಪರ(!) ಸಂಘಟನೆ 'ಸೇವೆ, ಸುರ ಮತ್ತು ಸಂಸ್ಕೃತಿ'ಯನ್ನು ತನ್ನ ಧ್ಯೇಯವಾಕ್ಯವಾಗಿ ಪರಿಗಣಿಸಿ ಮತಾಂತರಿಗಳನ್ನು ಸುಡುವುದರ ಮೂಲಕ ಅವ ಮೋಕ್ಷವನ್ನು ಕರುಣಿಸಿತ್ತು. 'ನಾನು ಹಿಂದೂವಾಗಿ ಹುಟ್ಟಿದ್ದ ಆದರೆ ಹಿಂದೂ ಆಗಿ ಸಾಯಲಾರೆ' ಎಂಬ ಉದ್ಧಟತನ ಮಾತನಾಡುತ್ತಿದ್ದವರಿಗೆ ಕ್ರೈಸ್ತ ಧರ್ಮದ ಅನುಸಾರವ ಶವವನ್ನು ಹೂಳುವುದು ಮಾಡದೆ ಜೀವಂತವಾಗಿ ವಂತೆಯೇ ಸುಟ್ಟು ಹಿಂದೂ ಧರ್ಮದ ಅನುಸ ವೈಕುಂಠಕ್ಕೆ ರವಾನಿಸಿತ್ತು. ಇದು ಅದರ ಹಿಂದೂ ಸೇವೆ ರೀತಿಯಾಗಿತ್ತು. ಇನ್ನು ಸುರಕ್ಷೆಯ ವಿಚಾರ. ಹಿಂದ ಧರ್ಮದ 'ಸುರಕ್ಷೆ' ಮಾಡಬೇಕಾದರೆ ಇತರೆ ಧರ್ಮಾ ಯಾಯಿಗಳ ಮೇಲೆ ಹಲ್ಲೆ ನಡೆಸಬೇಕೆಂಬ **offen is the best farm of defence** ಸೂ ಅನುಸರಿಸಿದರು. ಸಂಸ್ಕೃತಿ ರಕ್ಷಕರೆಂದೇ ಹೆಸರಾಂಕಿತವ ಅವರು. ಹಿಂದೂ ದೇವರು, ದೇವತೆಯರನ್ನು ನಗ್ನವ

ನಮ್ಮ ಟಗಸ್ತೇಳದು ಒಂಥರಾ ಕರಟ್ಟ. ಯಾಕೆ ಅಂದ್ರೆ ದ್ಯಾವೇಗೌಡನಿಗೆ ...ಗೆ ಬರಿಲ್ಲ. ಸಿದ್ದರಾಮುಯ್ಯನ್ನ ತಗದ ಪ್ರಕಾಶನ್ನ ಲೀಡ್ರು ಮಾಡಿದ. ...ನ್ನ ತಗದ ಮಿರಾಜುದ್ದೀನ್ ಪಟೇಲನ್ನ ಮಾಡಿದ. ಈನ್ಯಾರನಾರ ...ನೆ. ಹಿಡ್ಡಂದ್ರು ಕೂಡ ಅವು ಅವ್ರುನ ಮಕ್ಕಳಿಗಿಂತ ...ವಂತಾಗಿರಬಾರದು. ಅಷ್ಟೆ."

...ಅಂತೂ ಈಗವ್ರುನತ್ರ ಇರವ್ರಲ್ಲ ಅವ್ರುನ ಮಕ್ಕಳಿಗಿಂತ ಕಡಿಮೆ ...ವು ಅನ್ನು."

...ಎಕ್ಸ್‌ಪ್ರೆಸ್ ನಾಣಯ್ಯ."

...ನಾಣಯ್ಯನೂ ಒಂಥರಾ ಗತಿಗೆಟ್ಟೋನು ಕಣೊ. ಅವ್ರುನಿಗಿದ್ದ ಬ್ಯಲಿಗೆ ...ರ ಆಗಬವ್ರುದಿತ್ತು."

...ಏನಾಗಬೇಕೊ ಅದಾಗ್ಯವ್ರುನೆ ಕಣೊ. ಇಲ್ಲ ಅಂದ್ರೆ ಸಿದರಾಮಯ್ಯನಂಗೆ ...ಕಾಗಿತ್ತು."

...ಪಾಪ ಸಿದ್ರಾಮುಯ್ಯನ ಫಜೀತಿ ಯಾರಿಗೂ ಬ್ಯಾಡ ಕಣೊ. ...ೋಗನಾ ಅಂದಿಯಾ, ಆ ಕಡೆ ಬಿಜೆಪಿಗಳವ್ರುರೆ. ಈ ಕಡೆ ದ್ಯಾವೇಗೌಡನ ...ಸವ್ರುರೆ. ವಸ ಪಾರ್ಟಿ ಕಟ್ಟನಾ ಅಂದಿಯಾ, ಕೈಲಿ ಮೂರು ಕಾಸಿಲ್ಲ. ...ೋದ್ರು ನೋವು, ಸುಮ್ಮನಿದ್ರೆ ಸಾವು ಅನ್ನಂಗಾಗ್ಯದೆ ಅವ್ರುನ ಪಾಡು."

...ವರಿಕೋಗಿ ಪಾರ್ಟಿ ಕಟ್ಟಕ್ಕೆ ವಳ್ಳೆ ಟೇಮಿದು."

...ಅವ್ರುನ ಕೈಲಿ ಎಲ್ಲಾದತ್ಲ, ಪಾರ್ಟಿ ಕಟ್ಟೋನು ಅಂದ್ರೆ ದ್ಯಾವೇಗೌಡ. ...ಗೆ ಮಾತ್ರ ಅಂತ ಸಗತಿ ಅದೆ" ಎಂದ ಕಾಳಮಾವ.

...ಅವ್ರುನು ಪಾರ್ಟಿ ಕಟ್ಟಕ್ಕೆ ಸರಿ, ಆಡಳಿತ ಮಾಡಕಲ್ಲ ದ್ವಡಪ್ಪ."

...ಆಡಳತನೂ ಮಾಡಿ ತೋರ್ಸ್ಯವ್ರುನೆ ಕಂಡ್ರ. ಅದ್ಕೆ ಅವ್ರುನ ಮಗ ...ಮುಂದಾಗಿ ನೋಡಿದ್ರು ಎಡೂರಪ್ಪನಿಗಿಂತ ವಳ್ಳೆ ಆಡಳತನೆ ಕೊಟ್ಟ."

...ಎಡೂರಪ್ಪಂದು ಆಡಳಿತ ಅಂತಿಯಾ ದ್ವಡಪ್ಪ? ಹಿಂದೆ ಯಾರೋ ...ದ ಗಾದೆ ಮಾತೇಳಿದ್ರು, ಜೂಜಾಡಕ್ಕೋದೋರು ಸಂಜೆ ಮ್ಯಾಲೆ ...ನೋಡಕ್ಕೋದೋನು ಮಧ್ಯನಿಕ್ಕೆ ಹಾಳಾದ್ನಂತೆ. ಅಂಗೆ ಎಡೂರಪ್ಪ ...ದಿನಕ್ಕೆ ಕೆಟ್ಟು ಕುಲಾಕಮೆನದ್ದು ಅನಂತಕುಮಾರನ ಕಡಿಯೋರು ...ತಂಗಾಗ್ಯವ್ರುನೆ. ಇನ್ನೇನಿದ್ರು ಅವ್ರುನು ಸೋಬಕ್ಕನ್ನ ಮುಖ್ಯಮಂತ್ರಿ ...ಿ ಮನಿಗೋಗದೊಳ್ಳೆದು" ಎಂದ ವಾಟಿಸ್ಸೆ.

■

...ದರೆಂದು ಆರ್ಟ್ ಗ್ಯಾಲರಿಗಳಿಗೆ ನುಗ್ಗಿ ಧ್ವಂಸ ಮಾಡಿ ದೇವದೇವತೆಯರ ... ಕಾಪಾಡಿದ್ದರು. ಮುವ್ವತ್ಮೂರು ಕೋಟಿ ದೇವಾನುದೇವತೆಗಳ ...ಸ್ಥಾನವಾದ ಗೋವನ್ನು ಸಾಗಿಸುತ್ತಿದ್ದ ಪಾಪಂಡಿಗಳನ್ನು ಥಳಿಸಿ ಅವರಿಗೆ ...ಜ್ಞಾನವನ್ನು ಭದ್ರಪಡಿಸಿದ್ದರು. ಯಾವುದೋ ಪಾರ್ಕಿನ ಕತ್ತಲೆಯ ಲಾಭ ...ಯುತ್ತಿದ್ದ ಯುವಕ ಯುವತಿಯರನ್ನು ಬಲವಂತವಾಗಿ ಬೇರ್ಪಡಿಸಿ ಹಿಂದೂ ... ಶಾಸ್ತ್ರಕ್ಕೆ ಅಪಚಾರ ಎಸಗದಂತೆ ಕಾಪಾಡಿದ್ದರು. ಇಂತಹ ಹಲವಾರು ...ಕಾಯದ ನಿರತರ ಕುರಿತು ಪೇಜಾವರ ಶ್ರೀಗಳಿಗೆ ಒಲವು ಇತ್ತಾದರೂ ... ಸ್ವಾಮಿಗಳೇ ಇಂತಹ ಕೆಲಸಗಳಿಗೆ ಮುಂದಾಗುವುದಕ್ಕೆ ಕಾವಿ ಅಡ್ಡ ...ತ್ತು. ಸಮನ್ವಯ ಸಮಿತಿಯ ಮರೆ ಹೋಗುವುದು ಅನಿವಾರ್ಯವಾಗಿತ್ತು.

...ಮನ್ವಯ ಸಮಿತಿ ಪ್ರಾರಂಭ ಆಯಿತು. ಹಿಂದೂ ಧರ್ಮವನ್ನು ಉಳಿಸಿ ... ಸಾರ್ಥಕತೆಯನ್ನು ಸಾದರಪಡಿಸಲು ಪೇಜಾವರ ಶ್ರೀಗಳ ನೇತೃತ್ವದಲ್ಲಿ ...ಧೀಶರ ನಿಯೋಗ ಮತಾಂತರ ನಿಷೇಧ ಆಗ್ರಹಿಸಿ ಮನವಿ ಪತ್ರ ...ತು. ಮುಖ್ಯಮಂತ್ರಿಗಳಿಗೆ, ರಾಜ್ಯಪಾಲರಿಗೆ ಹಾಗೂ ಅವರ ಮೂಲಕ ...ಪತಿ, ಪ್ರಧಾನ ಮಂತ್ರಿಗಳಿಗೂ ಸಲ್ಲಿಸಿದರು. ದಯಾಮಯನಾದ ...ತನಿಗೂ 'ಮತಾಂತರ ನಿಷೇಧ' ಒತ್ತಾಯ ಪತ್ರ ಸಲ್ಲಿಸಿದರೋ ಎಂಬುದು ...ಬಂದಿಲ್ಲ. ಆತನ ಏಜೆಂಟರೇ ಇವರಾದುದರಿಂದ ಅಲ್ಲಿಗೆ ಕಳುಹಿಸುವ ...ಯ ಬಂದಿರಲಾರದು!

...ವಿ ಧರಿಸಿದವರೆಲ್ಲ 'ಸ್ವಾಮಿ' ಅವರು ಉಗುಳಿದ್ದೂ ತೀರ್ಥ ಅನ್ನುವ ...ಮಾಧ್ಯಮದವರು ಇದನ್ನೆಲ್ಲ ವರದಿ ಮಾಡುತ್ತಾರೆ ಎಂಬುದು ನಿಜ. ...ೂ ತಮ್ಮ ಮನದಾಳದ ಇಂಗಿತವನ್ನು ತೋಡಿಕೊಳ್ಳಬೇಕಲ್ಲಾ, ಸುದ್ದಿಗೋಷ್ಠಿ ...ನೂ ಮಾಡಿದರು. 'ಹಿಂದೂ ಧರ್ಮದಲ್ಲಿ ತಮಗೆ ತೊಂದರೆಯಾಗುತ್ತದೆ ... ಕಾರಣಕ್ಕೆ ಮತಾಂತರ ಆಗುವುದು ದುಃಖದ ಸಂಗತಿ. ಎಲ್ಲಾ ...ಧೀಶರೂ ದಲಿತರಿಗೂ ಮಠಗಳಿಗೆ ಪ್ರವೇಶ ನೀಡಿ, ಭೋಜನ ವ್ಯವಸ್ಥೆಯನ್ನು ...ತ್ತಿದ್ದೇವೆ. (ಯಾವುದೇ ಮಠದಲ್ಲಿ ಪ್ರವೇಶ ನಿಷೇಧಿಸಿದರೆ ಸಹಪಂಕ್ತಿ ...ಜನ ನಿರಾಕರಿಸಿದರೆ ಅದು ವ್ಯವಸ್ಥಾಪಕರ ಅಪಚಾರವೇ ಪರಂತು ...ಧೀಶರದ್ದಲ್ಲ!-ಲೇಖಕ) ನಮ್ಮ ಹಂತದಲ್ಲಿ ಸಮಾಜ ಸುಧಾರಣೆ ನಡೆಯುತ್ತಲೇ ...ಹಳ್ಳಿಗಳಲ್ಲಿ ಇನ್ನೂ ಅಸ್ಪೃಶ್ಯತೆ ಇದೆ. (ಅಂದರೆ ಪಟ್ಟಣಗಳಲ್ಲಿ ಅಸ್ಪೃಶ್ಯತೆ ... ಅಸ್ಪೃಶ್ಯತಾ ಅನುಭವ ಆಗಿದ್ದರೆ ಪೇಜಾವರ ಶ್ರೀಗಳಿಗೆ ದೂರು ನೀಡಿ. ... ಸರಿಪಡಿಸುತ್ತಾರೆ!-ಲೇಖಕ) ಹಳ್ಳಿಗಳಲ್ಲಿನ ಅಸ್ಪೃಶ್ಯತೆ ಆಚರಣೆಗೆ ...ಧೀಶರು ಹೊಣೆಯಾಗರು" ಎಂದು ಸಾರಿದರು.

...'ಮತಾಂತರ ನಿಷೇಧ' ಒಪ್ಪಿಕೊಳ್ಳೋಣ. ಇತರೆ ಧರ್ಮಗಳಿಗೆ ...ಂತರಗೊಂಡವರು ಆ ಧರ್ಮದಲ್ಲಿಯೇ ಕೊಳೆಯಬೇಕೆ? ಮತ್ತೆ ಹಿಂದೂ ...ಕ್ಕೆ ಬರಲು ಆಶಿಸುವವರಿಗೂ ಇದು ಅನ್ವಯ ಆಗುತ್ತಾ ಅಂದರೆ ...ಂತೆ! ಹಿಂದೂ ಧರ್ಮ ತೊರೆದು ಬೇರೆ ಮತ ಸೇರಿದವರು ...ಮಗಬಹುದು. ಆದರೆ ಇದು ಮರು ಮತಾಂತರ ಅಲ್ಲ! ಕಾನೂನುಬದ್ಧ ... 'ಸ್ವಂತ ಮನೆಗೆ ಮರಳುವ ವಿಧಾನ'! ಎನ್ನುತ್ತಾರೆ ಭಜರಂಗದಳದ ...ಯ ಸಂಚಾಲಕ ಪ್ರಕಾಶ್ ಶರ್ಮ.

...ಂದೂ ಧರ್ಮಕ್ಕೆ ಮರಳುವುದು ಸರಿ. ಆದರೆ ಯಾವ ಜಾತಿಗೆ ...ತ್ತಾರೆ ಅವರನ್ನು ಅನ್ನುವ ಅನುಮಾನ ಬೇಕಿಲ್ಲ, ಅವರು ಮರಳುತ್ತಿರುವುದು ... ಮನೆಗೆ' ಎಂಬುದು ನೆನಪಿರಲಿ. ಅಂದರೆ ಅದೇ ಜಾತಿಗೆ!

■

ಕುಣಿಗಲ್ ಸಭೆ



■ ಪಿ. ಲಂಕೇಶ್ ಡಿಸೆಂಬರ್ 23, 1990

ಕುಣಿಗಲ್ ವೈ.ಕೆ. ರಾಮಯ್ಯನವರ ಜಾಗ. ಅಲ್ಲಿಂದ ಸ್ವಲ್ಪ ದೂರದಲ್ಲಿ ರಾಮಯ್ಯ ತಮ್ಮ ಇಡೀ ಜೀವನದ ಶ್ರಮದಿಂದ ಮಾಡಿರುವ ತೋಟ, ಕುಣಿಗಲ್‌ಗೆ ಹತ್ತಿರದಲ್ಲೇ ಅವರ ಹಳ್ಳಿ. ಅವರಿಗೆ ಹೆಸರು, ಕುಟುಂಬ, ಹಿನ್ನೆಲೆಯೆಲ್ಲ ಗೊತ್ತಿರುವ ಅನೇಕ ಗ್ರಾಮಸ್ಥರು. ಈಚೆಗೆ ಕುಣಿಗಲ್‌ನಲ್ಲಿ ಗಲಭೆಯಾಯಿತು. ವೀರೇಂದ್ರರನ್ನು ಬೀಳಿಸುವ ಮುನ್ನ ಆದ ಗಲಾಟೆ; ಹಲವಾರು ಸಂಸಾರಗಳು ಬೀದಿ ಪಾಲಾದವು-ಕಾಂಗ್ರೆಸ್ ಮತ್ತು ಆರೆಸ್ಸೆಸ್‌ಗಳು ತಮ್ಮ ರಾಕ್ಷಸೀಕೃತ್ಯದಿಂದ ಕೃತಕೃತ್ಯರಾದ ಧೋರಣೆಯಲ್ಲಿ ಅಡ್ಡಾಡತೊಡಗಿದರು. ಕುಣಿಗಲ್ ಬಡ ತಾಲ್ಲೂಕು. ಅಲ್ಲಿಯ ಜನರಿಗೆ ಈ ಗಲಭೆಯಿಂದ ದಿಗ್ಭ್ರಮೆ, ಮಾತಾಡಲೂ ಹೆದರಿಕೆ.

ಇಂಥ ಪ್ರಕ್ಷುಬ್ಧ ವಾತಾವರಣದಲ್ಲಿ ವೈ.ಕೆ. ರಾಮಯ್ಯ ಒಂದು ಜಾತಿಸಾಮರಸ್ಯದ ಸಭೆ ನಡೆಸಲು ಉದ್ದೇಶಿಸಿದರು. ಎಲ್ಲ ಪಕ್ಷ, ಗುಂಪು, ಬಣದ ನಾಯಕರನ್ನು ಕುಣಿಗಲ್‌ಗೆ ಆಹ್ವಾನಿಸಿದರು. ನನ್ನನ್ನು ಕರೆದರು. ಸಭೆ ಬುಧವಾರ (26.12.90) ನಡೆಯಬೇಕಾಗಿದೆ; ರಾಮಯ್ಯನವರಿಗೆ ಅಚ್ಚರಿಯಾಗುವಂತೆ ಅವರ ಅನುಯಾಯಿಗಳೇ "ಈಗ ಸಭೆ ಬೇಡ ಸಾರ್" "ಆದರ ಅಗತ್ಯವೇನಿದೆ ಸಾರ್?" ಅನ್ನತೊಡಗಿದರು. ರಾಮಯ್ಯ ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡರು. ಸಭೆಯನ್ನೇ ನಡೆಸಲಾರದ ಪರಿಸ್ಥಿತಿಯೆ? ಜನ ಅಷ್ಟು ಹೆದರಿಕೊಂಡಿದ್ದಾರೆಯೆ? ಯಾಕೆ ಹೀಗಾಯಿತು?

ಇಡೀ ಎರಡು ದಿನ ಕುಣಿಗಲ್‌ನಲ್ಲಿ ಅಡ್ಡಾಡಿದ ರಾಮಯ್ಯ ಸಭೆ ನಡೆಸಲೇಬೇಕೆಂದು ಹಟ ಹಿಡಿದು ಕೂತರು. ತೀರಾ ಚಿಕ್ಕವರಾದ ಹುಡುಗರು ಉತ್ಸಾಹದಿಂದ ಓಡಾಡತೊಡಗಿದರು. ಭಿತ್ತಿಪತ್ರ ಬರೆದರು. ರಸ್ತೆಯ ಮೇಲೆ ಬಟ್ಟೆಯ ಮೇಲೆ ಘೋಷಣೆ ಬರೆದು ಕಟ್ಟಿದರು. 'ಸರ್ವರಿಗೆ ಸಮ ಬಾಳು, ಸರ್ವರಿಗೆ ಸಮಪಾಲು' 'ರಾಮ, ರಹೀಂ, ಕೃಷ್ಣ ಕರೀಂ' ಮುಂತಾದ ಕಣ್ಣಿಗೆ ಕಟ್ಟುವಂಥ, ಮನಸ್ಸು ಮುಟ್ಟುವಂಥ ಬರಹಗಳು. ರಾಮಯ್ಯ ತಮ್ಮ ಊರಿನ ಜನರಿಗೆ, ತಮಗೆ ಗೊತ್ತಿದ್ದವರಿಗೆ ಸಭೆಗೆ ಬರಲು ಹೇಳಿದರು. ಪೆಂಡಾಲ್ ಸಿದ್ಧವಾಗಿ ಹಬ್ಬದ ವಾತಾವರಣ ಮೂಡಿತು. ಎಲ್ಲ ಜಾತಿಯ ತರುಣರು ಹುಮ್ಮಸ್ಸಿನಿಂದ ಓಡಾಡಿದರು.

ನಾನು ಕುಣಿಗಲ್‌ಗೆ ಹೋದಾಗ ಅನೇಕ ಅತಿಥಿಗಳು ಬಂದಿರಲಿಲ್ಲ. ಕಮ್ಯುನಿಸ್ಟ್ ನಾಯಕರಾದ ದಸ್ತಗೀರ್, ಸೂರ್ಯನಾರಾಯಣರಾವ್, ಶೂದ್ರ, ನಾನು ಮತ್ತು ರಾಮಯ್ಯ-ಚಪ್ಪರಕ್ಕೆ ಹೋದೆವು. ಜನ ಘೇರಾಯಿಸಿದ್ದರು.



"ಸಭೆಯ ಅಗತ್ಯವಿಲ್ಲವೆ? ಏಕೆ? ನಾವು ನಮ್ಮ ಜನರ ಹತ್ತಿರ ಮಾತಾಡಲಾಗದಂಥ ವಾತಾವರಣ ಸೃಷ್ಟಿಯಾಗಿದೆಯೆ? ಇದನ್ನು ಯಾರು ಸೃಷ್ಟಿಸಿದರು? ಇದನ್ನೆಲ್ಲ ನಾವು ಸಹಿಸಬೇಕೆ?" ಎಂದು ಶುರು ಮಾಡಿದ ರಾಮಯ್ಯ ಸಭೆ ಎಲ್ಲದಕ್ಕೆ ಕಿವಿಗೊಡುವಂತೆ ಮಾಡಿದರು. ನಾವೆಲ್ಲ ಯಾವ ಪಕ್ಷದ ಪರವಾಗಿಯೂ ಮಾತಾಡುವವರಾಗಿರಲಿಲ್ಲ.

ಸೂರಿ, "ಈ ದೇಶದಲ್ಲಿ ರಾಮನನ್ನು ದುರುಪಯೋಗಪಡಿಸಿಕೊಳ್ಳುವುದು ನಿಲ್ಲಬೇಕು, ಬಡತನದಲ್ಲಿ ನರಳುತ್ತಿರುವ ಜನರನ್ನು ಈ ಸ್ವಾರ್ಥಿಗಳು ಅಣಕಿಸುವುದು ನಿಲ್ಲಬೇಕು" ಎಂದು ಗುಡುಗಿದರು.

ಇಡೀ ಸಭೆಯನ್ನು ವರದಿ ಮಾಡುವುದಿಲ್ಲ; ದಿಲ್ಲಿಗೆ ಹೊರಟು ಕೂತು ಇದನ್ನೆಲ್ಲ ಬರೆಯುತ್ತಿದ್ದೇನೆ. ರಾಮಯ್ಯನವರು ರಾಮನನ್ನು ಕಂಡದ್ದು ಅರ್ಥಪೂರ್ಣವಾಗಿತ್ತು "ನನ್ನ ಹೆಸರೇ ರಾಮಯ್ಯ-ಆದರೆ ನಾನು ದ್ವಿಜರ ರಾಮಯ್ಯನಲ್ಲ ಎಂದು ತಿಳಿದಿದ್ದೇನೆ. ತ್ರೇತಾಯುಗದಲ್ಲಿ ನನ್ನಂಥ ಶೂದ್ರನೇ ಒಬ್ಬ (ಆತನ ಹೆಸರು ಶಂಭೂಕ) ತಪಸ್ಸು ಶುರು ಮಾಡಿದ. ಬ್ರಾಹ್ಮಣನೊಬ್ಬ ತನ್ನ ಮಗನಿಗೆ ಹಾವು ಕಚ್ಚಿದೆ, ಅದಕ್ಕೆ ಕಾರಣ ಧರ್ಮಗ್ಲಾನಿಯಾಗಿ ಶೂದ್ರನೊಬ್ಬ ತಪಸ್ಸು ಶುರುಮಾಡಿರುವುದು ಎಂದು ಶ್ರೀರಾಮನಿಗೆ ದೂರು ಕೊಟ್ಟ. ಶ್ರೀರಾಮ ಕೂಡಲೆ ಈ ದ್ವಿಜನ ತೃಪ್ತಿಗಾಗಿ ತಪಸ್ವಿ ಶಂಭೂಕನನ್ನು ಕೊಂದ. ಆದರೆ ಅದು ಅನ್ಯಾಯವೆಂಬುದು ಶೂದ್ರ ಸಮುದಾಯಕ್ಕೆ ತಿಳಿದಿತ್ತು. ಆದ್ದರಿಂದಲೇ ಕುವೆಂಪು ಅವರ ರಾಮ ಶಂಭೂಕನಿಗೆ ನಮಿಸುತ್ತಾನೆ, ಆತನ ವಿರುದ್ಧ ದೂರು ಕೊಟ್ಟ ಬ್ರಾಹ್ಮಣನಿಗೆ ಶಿಕ್ಷೆ ವಿಧಿಸುತ್ತಾನೆ. ಶಂಭೂಕ ನಿಜವಾದ ತಪಸ್ವಿಯೆಂದು ವರ್ಣಿಸುತ್ತಾರೆ.

ಕುವೆಂಪು ಅವರ ರಾಮ ನಮಗೆ ಬೇಕೋ, ಶಂಭೂಕನ ಮೇಲೆ ದ್ವೇಷಕಾರಿದ ದ್ವಿಜನ ರಾಮ ನಮಗೆ ಬೇಕೋ? ಅಯೋಧ್ಯೆಯ ಬಗ್ಗೆ ಕೋರ್ಟಿನ ತೀರ್ಪನ್ನು ಕೂಡ ವಿರೋಧಿಸುವುದಾಗಿ ಹೇಳಿ ವಿನಾಕಾರಣ ಗೊಂದಲ, ಹಿಂಸೆಗೆ ಕಾರಣರಾದವರು ದ್ವಿಜನ ರಾಮನಿಗಾಗಿ ಬಡಿದಾಡುವವರು; ನಮ್ಮ ಅಮಾಯಕ ಜನರಿಗೆ ಮೀಸಲಾತಿ ದೊರೆತರೆ ಅದರ ವಿರುದ್ಧ ಬಡಿದಾಡಿ ರಕ್ತ ಸುರಿಸಿದವರು. ಅವರ ರಾಮ ಮತ್ತು ಅವರ ಮೋಸಕ್ಕೆ ನಾವು ಬಲಿಯಾಗುವುದು ಬೇಡ" ಅಂದರು ರಾಮಯ್ಯ.

"ಸೂಜಿ ಚುಚ್ಚಿದರೆ ಎಲ್ಲರ ದೇಹದಿಂದಲೂ ರಕ್ತ ಬರುತ್ತೆ" ಅಂದರು ರಾಮಯ್ಯ. ನಾನು, ನನ್ನ ಭಾಷಣವನ್ನು ಆ ರಕ್ತದಿಂದಲೇ ಶುರುಮಾಡಿದೆ. ಶಿವಮೊಗ್ಗೆಯ ಸಭೆಯೊಂದರಲ್ಲಿ ಹೋದ ವರ್ಷ ನಮ್ಮ ಮಹಿಳಾ ಸದಸ್ಯರು ಒಂದು ಘೋಷಣೆ ರೂಪಿಸಿದ್ದರು "ನಮ್ಮಲ್ಲಿಲ್ಲ-ಕ್ರೈಸ್ತ ರಕ್ತ" "ನಮ್ಮಲ್ಲಿಲ್ಲ-ಮುಸ್ಲಿಂ ರಕ್ತ" "ನಮ್ಮಲ್ಲಿಲ್ಲ-ಹಿಂದೂ ರಕ್ತ" "ನಮ್ಮಲ್ಲಿರುವುದು ಮಾನವ ರಕ್ತ" ಅದನ್ನೇ ಎತ್ತಿಕೊಂಡು ವಿವರಿಸಿದೆ; ಅದರೊಂದಿಗೆ ಇನ್ನೊಂದು ಘೋಷಣೆ ನೆನಪು ಮಾಡಿದೆ. "ದಕ್ಷಿಣ ಭಾರತ.... ದ್ರಾವಿಡರಿಗಾದರೆ" "ಕಾಶ್ಮೀರ... ಮುಸ್ಲಿಮರಿಗಾದರೆ", "ನಾಗಾಲ್ಯಾಂಡ್.... ಕ್ರಿಶ್ಚಿಯನ್ನರಿಗಾದರೆ...." "ಪಂಜಾಬ್... ಸಿಖ್ಖರಿಗಾದರೆ", "ಅಯೋಧ್ಯೆ... ಹಿಂದೂಗಳಿಗಾದರೆ..." "ಭಾರತ ಯಾರಿಗೆ?" "ಭಾರತ ಯಾರಿಗೆ?"

ರಕ್ತದ ಬಗ್ಗೆ ಆರೆಸೆಸ್‌ಗಳು ಮಾತಾಡುತ್ತಾರೆ, ತಮ್ಮಲ್ಲಿ ಹಿಂದೂ ರಕ್ತವಿದೆಯೆಂದು ಕೂಗಾಡುತ್ತಾರೆ. ಆದರೆ ರಕ್ತದ ಗುಟ್ಟು ಅವರಿಗೆ ಗೊತ್ತಿಲ್ಲ. ಬ್ರಾಹ್ಮಣನೊಬ್ಬನಿಗೆ ಅಪಘಾತವಾಗಿ ಅಥವಾ ಶಸ್ತ್ರಚಿಕಿತ್ಸೆಯಾಗಿ ಆತನ ಗುಂಪಿನ ರಕ್ತವೇ ಬೇಕಾದಾಗ ಅದು ಆತನ ಜಾತಿಯಲ್ಲಿ ಸಿಕ್ಕದಿರಬಹುದು, ದಲಿತನಲ್ಲಿ, ಮುಸ್ಲಿಮನಲ್ಲಿ, ಬೋವಿಯಲ್ಲಿ ಸಿಕ್ಕಬಹುದು. ಮನುಷ್ಯರ ರಕ್ತವೆಲ್ಲ ಸಮಾನವಾದದ್ದು. ಇದು ವೈಜ್ಞಾನಿಕ ತಿಳಿವಳಿಕೆ ಎಂದು ಹೇಳಿದೆ.

ಎರಡನೆಯದಾಗಿ... ಅಷ್ಟು ಹೊತ್ತು ನಗುವ ತ್ರಾಣವನ್ನು ಕಳೆದುಕೊಂಡಿದ್ದ ಸಭಿಕರನ್ನು ನಗಿಸಲು ಒಂದು ಪ್ರಸಂಗ ಹೇಳಿದೆ. ಬೆಂಗಳೂರಿನ ನಾಟಕದ ನಟ, ನಿರ್ದೇಶಕನೊಬ್ಬ ಎಲ್ಲ ಜಾತಿಯ ಜನರೊಂದಿಗೆ ನಟಿಸುತ್ತಿದ್ದ, ನಾಟಕ ಆಡುತ್ತಿದ್ದ. ಆತ ಅನುಮಾನದ ಸ್ವಭಾವದವನು. ಇತರ ಜಾತಿಯವರು ತನಗೆ ಪ್ರಾಮುಖ್ಯ ಕೊಡುತ್ತಿಲ್ಲ, ಸರಿಯಾದ ಪಾತ್ರ ಕೊಡುತ್ತಿಲ್ಲ ಅಂದುಕೊಂಡು ತನ್ನ ಜಾತಿಯವರನ್ನೇ ಸೇರಿಸಿ ಒಂದು ನಾಟಕದ ತಂಡ ಕಟ್ಟಿದ. ನಾಟಕಗಳ ಯಶಸ್ಸು ಇಳಿಯಿತು. ಇದು ಸರಿಹೋಗಲಿಲ್ಲವೆಂದು ಎಲ್ಲರನ್ನೂ ಮನೆಗೆ ಕಳಿಸಿ ತನ್ನ ಕುಟುಂಬದ ಸದಸ್ಯರನ್ನು ಮಾತ್ರ ಸೇರಿಸಿಕೊಂಡು ನಾಟಕ ಆಡತೊಡಗಿದ. ಅದರಲ್ಲಿ ಆತ ರಾಮ, ಅವನ ಹೆಂಡತಿ ಸೀತೆ, ತಮ್ಮ ಲಕ್ಷ್ಮಣ, ತಮ್ಮನ ಹೆಂಡತಿ ಮಂಡೋದರಿ. ಆದರೆ ತಮ್ಮನ ಹೆಂಡತಿಗೆ ಸೀತೆಯಾಗಬೇಕೆಂದು ಆಸೆ. ಆತನಿಗೆ ಕೂಡ ತಮ್ಮನ ಹೆಂಡತಿಯನ್ನು ಸೀತೆಯಾಗಿಸಲು ಆಸೆ... ಅದರಿಂದ ಆತನ ನಟನೆಯ ಹುಮ್ಮಸ್ಸೂ ಹೆಚ್ಚುವುದು ಅವನಿಗೆ ವಿಚಿತ್ರವಾಗಿ ಕಂಡಿತು. ಇದರಿಂದೆಲ್ಲ ಜಗಳವಾಗಿ ನಾಟಕ ನಿಂತಿತು. ಕೊನೆಗೆ ಆ ನಟ ಏಕಪಾತ್ರಾಭಿನಯ ಮಾಡಬೇಕಾಯಿತು. ಕಂಪನಿ ಮುಚ್ಚಿತು. ಜನ ಗೊಳ್ಳೆಂದು ನಗತೊಡಗಿದರು.

ಈ ದೇಶದ ಕಂಪನಿ ಮುಚ್ಚದಿರಬೇಕಾದರೆ ಎಲ್ಲರೂ ಒಟ್ಟಾಗಿ ಬಾಳುವುದನ್ನು, ಪಾತ್ರ ವಹಿಸುವುದನ್ನು ಕಲಿಯಬೇಕು.

ಅಷ್ಟರಲ್ಲಿ ಸಭೆಗೆ ಹೊಸ ಜೀವ ಬಂದಿತ್ತು. ಅಹಮದ್ ಶಫಿ ಎಂಬ ತರುಣನ ಮನೆಯಲ್ಲಿ ಟೀ ಕುಡಿದು ಹೊರಟೆವು. ಹೊತ್ತು ಮುಳುಗಿ ನಮ್ಮ ಸುತ್ತ ಕತ್ತಲು ಆವರಿಸುತ್ತಿದ್ದಂತೆ.... ನಮ್ಮನ್ನು ಅನಿರ್ವಚನೀಯ ಸಂತೋಷ, ಹೊಂಬಿಸಿಲು ತುಂಬಿತ್ತು. ■

ಕಣ್ಣೋಟದ ಎಲ್ಲೆಗೆ ನಿಲುಕದ
ಎತ್ತರ ಎತ್ತರ ಸುತ್ತಲ ಪ್ರಾಕಾರ
ಮೇಲ್‌ಶಿಖರ ಹಸಿರು ಪಾಚಿ ಇಳಿ
ಬಿದ್ದ
ಗೋಪುರ
ಒಳಗೆಲ್ಲಾ ಹಕ್ಕಿಗೂಡು
ಒಂದೊಂದೇ ಹುಲ್ಲುಗರಿ
ಪುರಲೆ ಹೆಣೆದು ಕಟ್ಟಿದ
ಬೆಚ್ಚಗಿನ ಒಳ ಅಂಕ
ಮರಿ ಒಡೆದ ಮೊಟ್ಟೆಯ ಹೊಟ್ಟು
ಹೊಟ್ಟೆಯ ಪೂದಗು
ಪಿಳಪಿಳನೆ ಹೊರಸೂಸುವ
ಪಿಳಗಣ್ಣುಗಳು

ತಲೆತಲಾಂತರದಲ್ಲಿ ಬಿಸಿಲುಮಳೆಗೆ
ಕಡಿಗೊಂಡು ಬಿಮ್ಮನೆ ಗಟ್ಟಿಯಾಗಿಯೇ
ಕುಳಿತ ಗುಡಿಯ ತಲೆಬಾಗಿಲ ಮುಂದೆ
ಮಣ್ಣ ಹಾಳೆಯಲಿ ಒಂದೊಂದೇ
ಕಲೆಯನ್ನು ದಿಟ್ಟಿಸಿ ನೋಡಿದೆ.
ಊರ ಜೋಡಿದಾರ್ರ ಅಮ್ಮಣ್ಣಿ
ಇಂದ್ರಾವತಮ್ಮ
ಅಂಗಡಿ ಶೆಟ್ಟರ, ಲಕ್ಷ್ಮೀಕಾಂತಮ್ಮ
ಊರೇ ಮೆರೆದ ಗೌಡಸಾನಿ ಬೀರಕ್ಕ
ಕಲಾರಿ, ನೀರಗಂಟಿ, ಹೆಂಡಿರು ಮುನೆಕ್ಕ
ಸೌಡಕ್ಕ
ತಲೆ ಕೊಂಗು ಮರೆಯಲ್ಲಿ
ತಗಡುಡಬ್ಬಿಯ ಮೊರೆತ

(ಜಾ) ಜಗತೀಕರಣ



ಕಾಸುಕಾಸಿಗೆ ಬಿಟ್ಟಬಾಯಿ
ಇವರೆಲ್ಲ ಗಂಡಸು ಮಕ್ಕಳ
ಘನಂದಾರಿ ಓದು
ಸಾಗಿ, ಸಪ್ತ ಸಮುದ್ರಗಳಾಚೆ
ಮುತ್ತು, ಮಾಣಿಕ್ಯದ
ಭಂಡಾರ ಹೊತ್ತು ತರಲು
ಹೋಗಿದ್ದಾರೆ


■ ಉತ್ತನೂರು ರಾಜಮ್ಮ ವಿ. ಶೆಟ್ಟಿ

ಹೊರಗಿದ್ದವರು ದೂರ ಹೋದರೆ ಒಳಗಿರುವವರಿಗೆ ಏಕೆ ಸಿಟ್ಟು?

ಒಂದು ಪತ್ರ

ಅಮೆರಿಕದಲ್ಲಿ ಕರಿಯರು ಕ್ರೈಸ್ತ ಧರ್ಮ ತೊರೆದು ಇಸ್ಲಾಂ ಧರ್ಮ ಸ್ವೀಕರಿಸುತ್ತಿದ್ದಾರೆ. ಕ್ರೈಸ್ತ ಹಾಗೂ ಇಸ್ಲಾಂ ಎರಡೂ ಧರ್ಮಗಳು ಯಹೂದಿ ಮೂಲದವುಗಳಾಗಿದ್ದು ಈ ಎರಡೂ ಧರ್ಮಗಳ ಮೂಲ ತತ್ವಗಳು ಒಂದೇ ಆಗಿವೆ. ಕರಿಯರು ಕ್ರೈಸ್ತ ಧರ್ಮ ತೊರೆಯಲು ಕಾರಣ ಧರ್ಮದ ತತ್ವ ಸಿದ್ಧಾಂತಗಳಲ್ಲ. ಬಿಳಿಯರು ಕ್ರೈಸ್ತ ಧರ್ಮವನ್ನು ಎಂದೂ ಕರಿಯರ ಶೋಷಣೆಯ ಸಾಧನವಾಗಿ ಬಳಸಿರಲಿಲ್ಲವಾದರೂ ಕರಿಯರು ತಮ್ಮ ಬಂಡಾಯ/ಪ್ರತಿಭಟನೆಯ ಸಂಕೇತವಾಗಿ ಶೋಷಕರ ಧರ್ಮವಾದ ಕ್ರೈಸ್ತ ಧರ್ಮವನ್ನು ತೊರೆಯುತ್ತಿದ್ದಾರೆ. ಒಂದು ವೇಳೆ ಬಿಳಿಯರು ಮುಸ್ಲಿಮರಾಗಿದ್ದರೆ ಕರಿಯರು ಕ್ರೈಸ್ತ ಧರ್ಮವನ್ನು ತಮ್ಮ ಬಂಡಾಯದ ಪ್ರತೀಕವಾಗಿ ಸ್ವೀಕರಿಸುತ್ತಿದ್ದರು.

ಇದೇ ರೀತಿ ಭಾರತದಲ್ಲೂ ದಲಿತರು ತಮ್ಮ ಶೋಷಕರ ಧರ್ಮವಾದ ಹಿಂದೂ ಧರ್ಮವನ್ನು ತೊರೆಯುತ್ತಿದ್ದಾರೆ. ಮೇಲಾಗಿ ಹಿಂದೂ ಧರ್ಮ ಮೇಲ್ಜಾತಿಯವರ ಕೈಯಲ್ಲಿ ದಲಿತರ ಶೋಷಣೆಯ ಸಾಧನವಾಗಿದೆ. ಹಾಗಿರುವಾಗ ದಮನಿತರು ಪ್ರತಿಭಟನೆಯ ಸಂಕೇತವಾಗಿ ತಮ್ಮ ಶೋಷಕರ ಧರ್ಮವಾದ ಹಿಂದೂ ಧರ್ಮವನ್ನು ತೊರೆದರೆ ತಪ್ಪೇನು? ಅಮೆರಿಕದ ಬಿಳಿಯರು ಕ್ರೈಸ್ತ ಧರ್ಮ ಉಪಯೋಗಿಸಿ ಕರಿಯರಲ್ಲಿ ದಾಸ್ಯ ಮನೋಭಾವ ಬಿತ್ತಿರಲಿಲ್ಲ. ನಿಮ್ಮ ಹಿಂದಿನ ಜನ್ಮದ ಪಾಪದ ಫಲವಾಗಿ ನೀವು ಕರಿಯರಾಗಿ ಹುಟ್ಟಿದ್ದು ಎಂದು ಬಿಳಿಯರು ಎಂದೂ ಹೇಳಿಲ್ಲ. ಆದರೆ ಹಿಂದೂ ಧರ್ಮದಲ್ಲಿ ದಲಿತರನ್ನು ಹಿಂದಿನ ಜನ್ಮದ ಪಾಪದ ಫಲವಾಗಿ ಕೀಳಜಾತಿಯಲ್ಲಿ ಹುಟ್ಟಿದ್ದು ಎಂದು ಬ್ರೈನ್‌ವಾಶ್ ಮಾಡಿ ಅವರು ತಾವಾಗಿಯೇ ಶೋಷಣೆಗೆ ಒಡ್ಡಿಕೊಳ್ಳುವಂತೆ ಮಾಡಲಾಗಿದೆ.



ಮತಾಂತರ ನಿಷೇಧಿಸಬೇಕೆಂದು ಮೇಲ್ಜಾತಿ ಮುಖಂಡರು ಕೇಳುತ್ತಿರುವಾಗ ದಲಿತ ಮುಖಂಡರು ಸುಮ್ಮನಿರುವುದು ಆಶ್ಚರ್ಯವಾಗುತ್ತಿದೆ. ಬಹುಶಃ ಅವರಲ್ಲೂ ಹಿಂದೂ ಮೇಲ್ಜಾತಿಯ ಮನಸ್ಥಿತಿ ಹುಟ್ಟಿರಬೇಕು. ಮೇಲ್ಜಾತಿ ಯಾವಾಗಲೂ ಮೇಲ್ಜಾತಿ ಆಗಿಯೇ ಇರಬಯಸುತ್ತದೆ. ಅದರಂತೆ ದಲಿತರಲ್ಲಿಯ ಕೆನೆಪದರು ಸಹ ತಾವು ಕೆನೆಪದರಾಗಿಯೇ ಇರಲು ಬಯಸುತ್ತಿರುವಂತಿದೆ. ಎಲ್ಲಾ ದಲಿತರು ಮತಾಂತರ ಹೊಂದಿ ಮೇಲೆಬಂದರೆ ತಮ್ಮ ಕೆನೆಪದರು ಸ್ಥಾನಕ್ಕೆ ಚ್ಯುತಿ ಬರಬಹುದು ಎಂದು ಹೆದರಿಕೆ ಇವರಿಗಿರಬಹುದೇ?

ಆಮಿಷೆಯ ಮತಾಂತರವೆನ್ನುವುದು ಅರ್ಥಹೀನ ಶಬ್ದ. ಆಮಿಷೆ ತಪ್ಪಾದರೆ ದೇವರ ಕೋಪದ ಕಲ್ಪಿತ ಭಯ ಹುಟ್ಟಿಸಿ ಜನರನ್ನು ತಮ್ಮ ಧರ್ಮದೊಳಗೆ ಹಿಡಿದಿಟ್ಟುಕೊಂಡು ಶೋಷಿಸುವುದು ಅದಕ್ಕಿಂತ ದೊಡ್ಡ ತಪ್ಪು. ಬಲಾತ್ಕಾರದ ಮತಾಂತರ ತಪ್ಪು ನಿಜ, ಆದರೆ ಬಲಾತ್ಕಾರದಿಂದ ಮತಾಂತರವನ್ನು ತಡೆಯುವುದೂ ಅಷ್ಟೇ ದೊಡ್ಡ ತಪ್ಪು. ಭಾರತದಲ್ಲಿ ಕೇವಲ 3% ಇರುವ ಕ್ರೈಸ್ತರು 80% ಇರುವ ಹಾಗೂ ಸಮಾಜದ ಮೇಲೆ ಬಲಾಢ್ಯ ಹಿಡಿತ ಹೊಂದಿರುವ ಹಿಂದೂಗಳನ್ನು ಬಲಾತ್ಕಾರವಾಗಿ ಮತಾಂತರಿಸಲು ಹೇಗೆ ಸಾಧ್ಯ?

ಸ್ವತಃ ಹೆತ್ತ ತಂದೆತಾಯಿಗಳೇ ಮಗನನ್ನು ಹೀನಾಯವಾಗಿ ನಡೆಸಿಕೊಂಡರೆ ಮಗನು ಹೆತ್ತವರ ಮನೆಯನ್ನೇ ತೊರೆದು ಹೋಗುತ್ತಾನೆ. ಹಾಗಿರುವಾಗ ಶತಮಾನಗಳಿಂದ ಸಮಾಜದಿಂದ ಹೊರಗಿಡಲ್ಪಟ್ಟ ದಲಿತರು ಹೊರಗಿನಿಂದ ಹೊರಗೆ ಹೊರಟು ಹೋದರೆ ಒಳಗಿರುವವರಿಗೆ ಏಕೆ ಆಕ್ಷೇಪ? ಕಳೆದ ಶತಮಾನದವರೆಗೂ ದಲಿತರು ಏನು ಕೆಲಸ ಮಾಡಬೇಕು, ಏನು ತಿನ್ನಬೇಕು, ಏನು ಉಡಬೇಕು, ಎಲ್ಲಿ ವಾಸಿಸಬೇಕು, ಹೇಗೆ ಜೀವಿಸಬೇಕು, ಏನೇನು ಕಲಿಯಬಾರದು ಎಂದೆಲ್ಲಾ ನಿರ್ಧರಿಸುತ್ತಿದ್ದವರು ಮೇಲ್ಜಾತಿಯವರು. ಆದರೆ ಈಗಿನ ಮುಕ್ತ ಜಗತ್ತಿನಲ್ಲಾದರೂ ದಲಿತರು ತಮಗೆ ಬೇಕಾದುದನ್ನು ತಾವೇ ನಿರ್ಧರಿಸಬಾರದೇ? ಅವರು ಯಾವ ಧರ್ಮ ಪಾಲಿಸಬೇಕೆಂದು ಮೇಲ್ಜಾತಿಯವರು ನಿರ್ಧರಿಸಬೇಕೆ? ಎಂಬುದಾಗಿ ದಲಿತ ಮುಖಂಡರು ಕೇಸರಿ ನೇತಾರರನ್ನು ಪ್ರಶ್ನಿಸುತ್ತಿಲ್ಲವೇಕೆಂದು ಅರ್ಥವಾಗುತ್ತಿಲ್ಲ. ಮತಾಂತರದ ಬಗ್ಗೆ ಅತಿಹೆಚ್ಚು ಬೊಬ್ಬೆ ಹಾಕುತ್ತಿರುವವರೆಲ್ಲಾ ಮತಾಂತರದಿಂದ ಸ್ವಲ್ಪವೂ ಬಾಧಿತರಾಗದ ಮೇಲ್ಜಾತಿಯವರು ಮಾತ್ರ. ಒಂದು ವೇಳೆ ಅಂಬೇಡ್ಕರ್‌ರವರ ಅನುಯಾಯಿಗಳಾದ ದಲಿತ ನಾಯಕರು ಕ್ರೈಸ್ತ ಧರ್ಮ ಸ್ವೀಕರಿಸಿದ್ದರೆ ಇಂದು ಕೇಸರಿ ಪಡೆಗಳಿಗೆ ಚರ್ಚ್‌ಗಳ ಮೇಲೆ ದಾಳಿ ನಡೆಸುವಷ್ಟು ಧೈರ್ಯ ಬರುತ್ತಿತ್ತೆ?

'ಸತ್ಯದರ್ಶಿನಿ'ಗಿಂತ ಹೆಚ್ಚು ಖಾರವಾದ ವಿಮರ್ಶೆ ಎ.ಎನ್. ಮೂರ್ತಿರಾಯರ 'ದೇವರು' ಪುಸ್ತಕದಲ್ಲಿದೆ. ಹಿಂದೂ ಧರ್ಮದ ದೇವರ ಕಥೆಪುರಾಣಗಳಲ್ಲಿ ಬರುವ ಪಾತ್ರಗಳು, ನಂಬಿಕೆಗಳು ಎಷ್ಟೊಂದು ಅಸಂಬದ್ಧ, ತರ್ಕವಿಹೀನ, ಹಾಸ್ಯಾಸ್ಪದ ಎಂಬುದನ್ನು ಮೂರ್ತಿರಾಯರು ರಸವತ್ತಾಗಿ ವಿಮರ್ಶಿಸಿದ್ದಾರೆ. ಅಷ್ಟೇ ಏಕೆ, ನಮ್ಮದೇ ಮಕ್ಕಳು, ನಮ್ಮ ಪುರಾಣ ಕಥೆಗಳನ್ನು ಹಿರಿಯರಿಂದ ಕೇಳಿದ ನಂತರ, ಮುಗ್ಧವಾಗಿ ಕೇಳುವ ತರ್ಕಪೂರ್ಣ ಪ್ರಶ್ನೆಗಳಿಗೆ ಉತ್ತರಿಸಲಾರದೇ ಹಿರಿಯರು ಮುಜುಗರ ಪಡುವುದನ್ನು ಎಲ್ಲರೂ ನೋಡಿದ್ದೇವೆ. ಮಕ್ಕಳ ಪ್ರಶ್ನೆಗಳಿಗೆ ಉತ್ತರ ಕೊಡಲಾಗದೇ ಇಕ್ಕಟ್ಟಿಗೆ ಸಿಲುಕಿದಾಗ, ಮಕ್ಕಳನ್ನು ಗದರಿಸಿ, ಪಾಪಭೀತಿ ತುಂಬಿ, ಮಕ್ಕಳ ಬಾಯಿ ಮುಚ್ಚಿಸುವ ಬದಲು ಹಿರಿಯರು ಆ ಪ್ರಶ್ನೆಗಳನ್ನು ತಮಗೇ ತಾನೇ ಕೇಳಿಕೊಂಡರೆ, ಆಗ ಪರಧರ್ಮದವರು ನಮ್ಮ ನಂಬಿಕೆಗಳ ಬಗ್ಗೆ ಕೇಳುವ ಪ್ರಶ್ನೆಗಳು ನಮಗೆ ಅವಹೇಳನಕಾರಿ ಎನಿಸುವುದೇ ಇಲ್ಲ.

ದೇವರ ಸ್ತುತಿಗಳನ್ನು, ಸಹಸ್ರನಾಮಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಅರ್ಥೈಸಿಕೊಂಡಾಗ ಅವು ನಮಗೆ ದೇವರ ಹೊಗಳಿಕೆಯೋ ಅಥವಾ ಬಯ್ಗುಳಗಳೊ ಎಂದು ಅನುಮಾನ ಹುಟ್ಟುತ್ತದೆ. ದೇವರನ್ನು ದೊಳ್ಳು ಹೊಟ್ಟೆಯವ (ಲಂಬೋದರ), ಹಲ್ಲುಮುರುಕ (ಏಕದಂತ), ವಕ್ರತುಂಡ (ಸೊಟ್ಟ ಮೈಯವ) ಎಂಬುದೆಲ್ಲಾ ಅವಹೇಳನಕಾರಿ ಅಲ್ಲವೇ? ಕಾಮಭರಿತನೊಬ್ಬ ಪ್ರೇಯಸಿಯ ಅಂಗಾಂಗಗಳನ್ನು ವರ್ಣಿಸುವುದಕ್ಕೂ, ಶಂಕರಾಚಾರ್ಯರ 'ಸೌಂದರ್ಯ ಲಹರಿಗೂ' ಏನಾದರೂ ವ್ಯತ್ಯಾಸವಿದೆಯೋ? ಕೆಲವೊಮ್ಮೆ ಸಣ್ಣ ಮಕ್ಕಳಂತೆ ಹಿರಿಯರೂ ನಿರ್ಭಯವಾಗಿ ಪಾಪಭೀತಿ ತೊರೆದು ತಮ್ಮ ನಂಬಿಕೆಗಳನ್ನು, ಪುರಾಣ ಕಥೆಗಳನ್ನು-ಪಾತ್ರಗಳನ್ನು, ತರ್ಕಪೂರ್ಣವಾಗಿ ವಿಶ್ಲೇಷಿಸುವಂತಾಗಿದ್ದರೆ ಎಷ್ಟು ಒಳ್ಳೆಯದಾಗಿರುತ್ತಿತ್ತು ಅನಿಸುತ್ತದೆ.

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು



ಜೀನಿಬಿ ಕತೆ

ಜೂಜುಕೋರನೊಬ್ಬ ಮಠಕ್ಕೆ ಬಂದು "ನಿನ್ನೆ ಇಸ್ಪೀಟ್ ಆಟ ಆಡುತ್ತಿರುವಾಗ ನಾನು ಮೋಸ ಮಾಡಿ ಸಿಕ್ಕಿಹಾಕಿಕೊಂಡೆ. ನನ್ನ ಜೊತೆ ಇದ್ದವರೆಲ್ಲ ನನಗೆ ಬಡಿದು ಕಿಟಕಿಯಿಂದ ಹೊರಗೆ ಬಿಸಾಕಿದರು. ನನಗೆ ನಿಮ್ಮ ಸಲಹೆ ಏನು?" ಎಂದು ಗುರುಗಳನ್ನು ಕೇಳಿದ.

"ನಾನು ನೀನಾಗಿದ್ದರೆ ಇನ್ನು ಮುಂದೆ ನೆಲಮಹಡಿಯಲ್ಲಿ ಮಾತ್ರ ಜೂಜಾಡಲು ಕೂರುತ್ತೇನೆ" ಎಂದು ಗುರುಗಳು ಅವನಿಗೆ ಹೇಳಿದರು.

ಇದನ್ನು ಕೇಳಿ ಅಚ್ಚರಿಗೊಂಡ ಶಿಷ್ಯರು ಜೂಜುಕೋರ ಹೋದ ನಂತರ "ಇನ್ನು ಮುಂದೆ ಜೂಜಾಡಬೇಡ ಎಂದು ನೀವೇಕೆ ಅವನಿಗೆ ಹೇಳಲಿಲ್ಲ?" ಎಂದು ಗುರುಗಳನ್ನು ಕೇಳಿದರು.

ಆಗ ಗುರುಗಳು "ಯಾಕೆಂದರೆ ಆತ ನನ್ನ ಆ ಸಲಹೆಯನ್ನು ಪಾಲಿಸುತ್ತಿರಲಿಲ್ಲ ಎಂಬುದು ನನಗೆ ಗೊತ್ತು" ಎಂದು ಮಾರ್ಮಿಕವಾಗಿ ಉತ್ತರಿಸಿದರು.

ಮಾದೇಶ್ವರ ಮಹಿಮೆ!

ಕನ್ನಡ ಚಿತ್ರರಂಗದಲ್ಲಿ ಈಗ ಮಾದೇಶನಿಗೆ ಎಲ್ಲಿಲ್ಲದ ಬೇಡಿಕೆ. ಹೀಗೆಂದಾಕ್ಷಣ ನೀವು 'ಮಾದೇಶ' ಚಿತ್ರಕ್ಕೆ ಬೇಡಿಕೆಯಿದೆ ಎಂದು ಭಾವಿಸಬೇಡಿ. ಈ ಚಿತ್ರ ಥಿಯೇಟರಿಗೆ ಬಂದಷ್ಟೇ ವೇಗವಾಗಿ ಡಬ್ಬಕ್ಕೆ ಸೇರಿರುವುದರಿಂತ ಅದನ್ನು ಜನ ಮರೆತೇಬಿಟ್ಟಿದ್ದಾರೆ.

ನಾವು ಹೇಳಲು ಹೊರಟಿರುವುದು ಮಲೆ ಮಹದೇಶ್ವರನ ಬಗ್ಗೆ. 'ಜನುಮದ ಜೋಡಿ' ಚಿತ್ರದಲ್ಲಿ ಮೊದಲ ಬಾರಿಗೆ ಶಿವರಾಜ್ ಕುಮಾರ್ ಮಲೆ ಮಾದೇಶ್ವರನನ್ನು ಕೊಂಡಾಡಿ ಕುಣಿದು ಕುಪ್ಪಳಿಸಿದ್ದರು. ಆ ಚಿತ್ರ ಸೂಪರ್ ಹಿಟ್ ಆಯಿತು. ಅಷ್ಟೇ ಅಲ್ಲ ದೊಡ್ಡ ರಂಗೇಗೌಡರು ಬರೆದಿರುವ 'ಕ್ವಾರಣ್ಯ ನೀಡವ್ವ ಕೋಡುಗಲ್ಲ ಮಾದೇವನಿಗೇ...' ಹಾಡನ್ನು ಇಡೀ ಕರ್ನಾಟಕವೇ ಗುನುಗುನಿಸಿತ್ತು.



ಇದಾದನಂತರ ಮಾದೇಶ ಮತ್ತೆ 'ಜೋಗಿ' ಚಿತ್ರದಲ್ಲಿ ಕಾಣಿಸಿಕೊಂಡ. ಈ ಬಾರಿಯೂ ಮಾದೇಶನ ಭಕ್ತನಾಗಿ ಶಿವರಾಜ್ ಕುಮಾರ್ ನಟಿಸಿದರು. ಈ ಚಿತ್ರದಲ್ಲೂ ಮಾದೇಶನನ್ನು ಹಾಡಿ ಕೊಂಡಾಡಿದ ಹಾಡು ಸಖತ್ ಪಾಪ್ಯುಲರ್ ಆಯಿತು. ಚಿತ್ರವೂ ಸೂಪರ್ ಹಿಟ್ ಆಯಿತು.

ಇದೀಗ 'ಸೈಕೋ' ಎಂಬ ಚಿತ್ರದಲ್ಲಿ ರಘು ದೀಕ್ಷಿತ್ ಸಂಗೀತ ನೀಡಿ ಹಾಡಿದ 'ನಿನ್ನಾ ಪೂಜೆ ಬಂದೇ ಮಾದೇಶ್ವರಾ...' ಹಾಡಂತೂ ಎಷ್ಟು ಜನಪ್ರಿಯವಾಗಿದೆಯೆಂದರೆ, ಕನಿಷ್ಠ ದಿನಕ್ಕೆ ಹತ್ತು ಹದಿನೈದು ಬಾರಿ ಆ ಹಾಡು ರೇಡಿಯೋಗಳಲ್ಲಿ ಬರುತ್ತಿದೆ. ಈ ಚಿತ್ರದ ನಿರ್ದೇಶಕ, ನಟ, ನಟಿ ಬಗ್ಗೆ ಯಾರಿಗೂ ಏನೂ ಗೊತ್ತಿಲ್ಲ. ಆದರೆ ಈ ಒಂದೇ ಒಂದು ಹಾಡು ಈಗಾಗಲೇ ಜನರಿಗೆ ಚಿತ್ರವನ್ನು ನೋಡಬೇಕೆಂದೆನಿಸುವಂತೆ ಮಾಡಿದೆ. ಇದು ಮಾದೇಶನ ಮಹಿಮೆ.




ರಘುದೀಕ್ಷಿತ್

ಇಷ್ಟಕ್ಕೇ ಇದು ಮುಗಿಯಲಿಲ್ಲ. ಸದ್ಯದಲ್ಲೇ ಹೊಸಬರೇ ಸೇರಿರುವ 'ತಬ್ಬಲಿ' ಎಂಬ ಚಿತ್ರ ಬಿಡುಗಡೆಯಾಗಲಿದೆ. ಆ ಚಿತ್ರದಲ್ಲಿ ಮೂಗೂರು ಸುಂದರಂ ಒಂದು ಹಾಡಿಗೆ ನರ್ತಿಸಿದ್ದಾರೆ. ಕ್ಷಮಿಸಿ, ಮೂಗೂರು ಸುಂದರಂ ಎಂದರೆ ನಿಮಗೆ ಥಟ್ಟನೆ ಗೊತ್ತಾಗಲಾರದು. ಇವರು ಡ್ಯಾನ್ಸ್ ಕಿಂಗ್ ಪ್ರಭುದೇವ್ ಅವರ ತಂದೆ. ಇವರು ಹಾಡಿ ನರ್ತಿಸಿದ ಹಾಡು ಕೂಡಾ ಮಾದೇಶನ ಗುಣಗಾನವೇ ಆಗಿದೆ ಎಂಬುದು ವಿಶೇಷ.

ಈ ಹಾಡು ಕೂಡಾ ಈಗಾಗಲೇ ಟೀವಿಗಳಲ್ಲಿ ಪ್ರೇಕ್ಷಕರ ಒತ್ತಾಯದ ಮೇರೆಗೆ ಮತ್ತೆ ಮತ್ತೆ ಪ್ರಸಾರವಾಗುತ್ತಿದೆ. ಈ ಚಿತ್ರದ ನಾಯಕ ನಾಯಕಿ ನರ್ತಿಸಿರುವ ಹಾಡುಗಳನ್ನು ಕೇಳುವವರೇ ಇಲ್ಲವಾದರೂ ಮೂಗೂರು ಸುಂದರಂ ಮಾಸ್ಟರ್ ನರ್ತಿಸಿರುವ ಈ ಹಾಡಿಗೆ ಡಿಮ್ಯಾಡೋ ಡಿಮ್ಯಾಂಡು.

ಇದನ್ನೆಲ್ಲ ನೋಡಿ, ಇನ್ನು ಮುಂದೆ ಪ್ರೇಕ್ಷಕರನ್ನು ಥಿಯೇಟರಿಗೆ ಸೆಳೆಯಲು ದೊಡ್ಡ ದೊಡ್ಡ ಹೀರೋ ಹೀರೋಯಿನ್‌ಗಳ ಬದಲಿಗೆ ಮಾದೇಶನ ಹಾಡೊಂದಿದ್ದರೆ ಸಾಕು ಎಂದು ನಮ್ಮ ಗಾಂಧಿನಗರಿಗರು ತರ್ಕಿಸಿದರೂ ಆಶ್ಚರ್ಯವಿಲ್ಲ. ■



ಮೂಗೂರು ಸುಂದರಂ

ಸದ್ದಿಲ್ಲದ 'ಮಾತು'ಗಾರ ಸುದರ್ಶನ್

ಪರದೆ ಹಿಂದೆ

ಕನ್ನಡ ಚಿತ್ರಂಗದಲ್ಲಿರುವವರಿಗೆ ಸುದರ್ಶನ್ ಎಂಬ 'ಪವಾಡ' ಪುರುಷನ ಪರಿಚಯ ಇಲ್ಲದಿರಲು ಸಾಧ್ಯವೇ ಇಲ್ಲ, ಆದರೆ ಕನ್ನಡದಲ್ಲಿ ನಿರ್ಮಾಣವಾಗುವ ಬಹಳಷ್ಟು ಚಿತ್ರಗಳಲ್ಲಿ ಸುದರ್ಶನ್ ಪಾತ್ರ ಇದ್ದೇ ಇದ್ದೂ ಇವರ ಬಗ್ಗೆ ಹೊರಗಿನವರಿಗೆ ಗೊತ್ತೇ ಇಲ್ಲ!

ಬೆಳ್ಳಿಪರದೆಯ ಮೇಲೆ ನಾಯಕನಟನ ಡೈಲಾಗ್ ಕೇಳುತ್ತಿದ್ದಂತೆ ಅಭಿಮಾನಿಗಳು ಹರ್ಷೋದ್ಗಾರವೆತ್ತಿ ಚಪ್ಪಾಳೆ ತಟ್ಟುತ್ತಾರೆ. ಆದರೆ ಹಲವು ಬಾರಿ ಆ ಡೈಲಾಗ್ ಅನ್ನು ಆ ನಾಯಕ ನಟ ಹೇಳಿರುವುದೇ ಇಲ್ಲ. ಬದಲಾಗಿ ಆ ನಟನ ಬಾಯಿಯ ಚಲನೆಯನ್ನು ಗಮನಿಸಿ, ಆತನ ಬಾಡಿ ಲಾಂಗ್ವೇಜ್ ಮತ್ತು ದೃಶ್ಯಕ್ಕೆ ತಕ್ಕಂತೆ ಆ ಡೈಲಾಗ್ ಹೇಳಿರುವವರು ಈ ಸುದರ್ಶನ್ ಆಗಿರುತ್ತಾರೆ. ದುರಂತವೆಂದರೆ, ನಾಯಕ ನಟರನ್ನು ಹೃದಯ ಪ್ರವೇಶ ಮಾಡಿ ಅವರಿಗೆ ಧ್ವನಿ ನೀಡುವ ಸುದರ್ಶನ್‌ರಂತಹ ಪ್ರತಿಭೆಗಳನ್ನು, ಶ್ರಮಜೀವಿಗಳನ್ನು ಯಾರೊಬ್ಬರೂ ಗುರುತಿಸದಿರುವುದು.

ಅನಂತ್‌ನಾಗ್ ಕನ್ನಡ ಚಿತ್ರರಂಗ ಕಂಡಿರುವ ಮಹೋನ್ನತ ನಟ, ಆದರಲ್ಲೂ ಅನಂತ್ ಕಂಠದ ಗಮ್ಮತ್ತೇ ಬೇರೆ. ಇಂತಹ ಅನಂತ್‌ನಾಗ್ 1991ರಲ್ಲಿ ಬಂದ 'ಮರಣ ಮೃದಂಗ' ಚಿತ್ರದಿಂದ ಹಿಡಿದು ಇವತ್ತಿನವರೆಗೆ ಬಂದಿರುವ ಬಹಳಷ್ಟು ಸಿನಿಮಾಗಳಿಗೆ (ಕವಿತಾ ಲಂಕೇಶ್ ನಿರ್ದೇಶನದ 'ಪ್ರೀತಿ ಪ್ರೇಮ ಪ್ರಣಯ' ಹೊರತುಪಡಿಸಿ) ತಮ್ಮ ಕಂಠದಾನವನ್ನೇ ಮಾಡಿಲ್ಲ ಎಂದರೆ ನೀವು ನಂಬುತ್ತೀರಾ? ಆದರೆ ಅದು ನಿಜ. ಇತ್ತೀಚೆಗೆ ಅನಂತ್‌ನಾಗ್ ಪೋಷಕ ಪಾತ್ರಗಳಲ್ಲೇ ಹೆಚ್ಚಾಗಿ ನಟಿಸುತ್ತಿರುವುದರಿಂದ ಮತ್ತು ಟೀವಿಯಲ್ಲೂ ತುಂಬ ಬ್ಯುಸಿ ಇರುವುದರಿಂದ ಅವರಿಗೆ ತಮ್ಮ ಪಾತ್ರಗಳಿಗೆ ಡಬ್ ಮಾಡುವ ಉತ್ಸಾಹವಿಲ್ಲ, ಆದ್ದರಿಂದ ಅವರು "ಸುದರ್ಶನ್‌ಗೆ ಹೇಳಿಬಿಡ್ರಿ. ನನಗಿಂತ ಚೆನ್ನಾಗಿ ನನ್ನ ಹಾಗೇ ಮಾತಾಡ್ತಾನೆ" ಎನ್ನುತ್ತಾರಂತೆ. ಹೀಗೆ ಅನಂತ್ ನಾಗ್‌ರ ಕಳೆದ ಬಹಳಷ್ಟು ಚಿತ್ರಗಳಿಗೆ ಕಂಠದಾನ ಮಾಡಿರುವ ಸುದರ್ಶನ್‌ರ ಧ್ವನಿಯಲ್ಲಿನ ಪರ್‌ಫೆಕ್ಷನ್ ಎಂಥದ್ದು ಎಂಬುದನ್ನು ನೀವೇ ಊಹಿಸಿ. ಮೊದಲ ಬಾರಿ ಸುದರ್ಶನ್ ತನ್ನಂತೆಯೇ ಮಾತನಾಡುವುದನ್ನು ಕಂಡ ಅನಂತ್ ನಿಬ್ಬೆರಗಾಗಿ "ನನ್ನನ್ನು ನಾನೇ ನಂಬಲು ಸಾಧ್ಯವಾಗುತ್ತಿಲ್ಲ, ಇದು ಕನಸೋ ಇಲ್ಲ ನನಸೋ" ಎಂದಿದ್ದರಂತೆ.



ಹಾಗೆಂದು ಸುದರ್ಶನ್ ಅನಂತ್ ನಾಗ್‌ರಿಗೆ ಮಾತ್ರ ಧ್ವನಿ ನೀಡುತ್ತಾರೆ ಎಂದು ಭಾವಿಸಬೇಡಿ. ಮುಖ್ಯಮಂತ್ರಿ ಚಂದ್ರು, ಸಾಯಿಕುಮಾರ್, ಅರುಣ್ ಪಾಂಡ್ಯನ್, ಅಶೀಷ್ ವಿದ್ಯಾರ್ಥಿ, ವಿನೋದ್ ರಾಜ್, ಅವಿನಾಶ್ ಗೋವಿಂದ್, ಬಾಲಿವುಡ್‌ನ ಟೀನು ಆನಂದ್‌ರಿಂದ ಹಿಡಿದು ಇವತ್ತಿನ ದಿಗಂತ್ ಎಂಬ ಚಾಕೋಲೇಟ್ ಹೀರೋ ತನಕ ಎಲ್ಲರಿಗೂ ಇವರದೇ ಧ್ವನಿ. ಇದಲ್ಲದೆ ನಟರ್‍ಯಾರಾದರೂ ಇದ್ದಕ್ಕಿದ್ದ ಹಾಗೆ ಸತ್ತುಹೋದರೆ ಅವರ ಪಾತ್ರಗಳಿಗೆ ಧ್ವನಿ ನೀಡಲು ಇದೇ ಸುದರ್ಶನ್‌ರ ಮೊರೆಹೋಗಬೇಕು. ಬಾಲಕೃಷ್ಣ, ದಿನೇಶ್ ಮುಂತಾದವರ ಕಾಲಾನಂತರ ಅವರು ಬಿಟ್ಟುಹೋದ ಚಿತ್ರಗಳಿಗೆ ಸುದರ್ಶನ್ ಅವರೇ ಕಂಠದಾನ ಮಾಡಿದ್ದಾರೆ.


ಇನ್ನು ಕೆಲ ಹಳೆಯ ಚಿತ್ರಗಳು ಡಬ್ಬಾದಲ್ಲೇ ಇದ್ದು ಇದ್ದು ಫಂಗಸ್ ಸಮಸ್ಯೆಯಿಂದ ಸೌಂಡ್ ಟ್ರ್ಯಾಕ್ ಸಂಪೂರ್ಣಯಾಗಿ ಹಾಳಾಗಿ ಹೋಗಿರುತ್ತದೆ. ಹೀಗಾಗಿ ಹಳೆಯ ಚಿತ್ರಗಳನ್ನು ನಿರ್ಮಿಸಿದವರು ತಮ್ಮ ಚಿತ್ರಗಳನ್ನು ಟಿವಿ ರೈಟ್ಸ್‌ಗೆ ಮಾರಬೇಕೆಂದರೆ ಸುದರ್ಶನ್ ಆ ಚಿತ್ರದ ಎಲ್ಲ ಪಾತ್ರಗಳಿಗೂ ಧ್ವನಿ ನೀಡಬೇಕು. ಇತ್ತೀಚೆಗೆ 'ಕುಂಕುಮ ರಕ್ಷೆ' ಚಿತ್ರಕ್ಕಾಗಿ ಆ ಚಿತ್ರದಲ್ಲಿ ನಟಿಸಿದ್ದ ರಜನೀಕಾಂತ್, ಅಶೋಕ್‌ರಿಂದ ಹಿಡಿದು ಚಿತ್ರದಲ್ಲಿ ಬರುವ ಸಣ್ಣಪುಟ್ಟ ಪಾತ್ರಗಳಿಗೂ ಸುದರ್ಶನ್ ತಮ್ಮ ದನಿಯನ್ನು ಬದಲಾಯಿಸಿ ವಿವಿಧ ರೀತಿಯಲ್ಲಿ ಪಾತ್ರಗಳಿಗೆ ತಕ್ಕಂತೆ ವಾಯ್ಸ್ ನೀಡಿದ್ದರು.

ಕೆಲವೊಮ್ಮೆ ಚಿತ್ರದ ಕಲಾವಿದರು ಹಲವು ಕಾರಣಗಳಿಂದ ಕಿರಿಕ್ ಮಾಡಿಕೊಂಡು ಡಬ್ಬಿಂಗ್ ಮುಗಿಸದೇ ಬಿಟ್ಟು ಪಲಾಯನ ಮಾಡಿರುತ್ತಾರಲ್ಲ! ಅಂಥ ಸಂದರ್ಭಗಳಲ್ಲೂ ನಿರ್ಮಾಪಕನ ಪಾಲಿನ ಆಪದ್ಬಾಂಧವವಾಗುವವರು ಇದೇ ಸುದರ್ಶನ್. ಹಿಂದೆ ಅಜಯ್ ಗುಂಡೂರಾವ್ ಅಭಿನಯದ, ರಾಜೇಂದ್ರ ಸಿಂಗ್‌ಬಾಬು ನಿರ್ದೇಶನದ 'ಹೂವು-ಹಣ್ಣು' ಚಿತ್ರದಲ್ಲಿ ಬರುವ 30 ಪಾತ್ರಗಳಿಗೂ ಇವರು ತಮ್ಮ ಕಂಠವನ್ನೇ ಬದಲಿಸಿ ಮಾತನಾಡಿದ್ದರು ಎಂದರೆ ನಂಬಲೇಬೇಕು. ಹಾಗೆಯೇ ಇತ್ತೀಚೆಗೆ 'ಚಂಡ' ಚಿತ್ರದ ನಿರ್ದೇಶಕ ಎಸ್. ನಾರಾಯಣ ಮತ್ತು ನಾಯಕ ನಟ ವಿಜಯ್ ನಡುವೆ ಕಿರಿಕ್ ಆಗಿ ಡಬ್ಬಿಂಗ್ ಅರ್ಧಕ್ಕೆ ನಿಂತಿದ್ದಾಗ, ಇದೇ ಸುದರ್ಶನ್ ವಿಜಯ್ ಪಾತ್ರಕ್ಕೂ ಡಬ್ ಮಾಡಿದ್ದರು.

■ ಅರುಣ್ ಕುಮಾರ್.ಜಿ

ಕೆಲವೊಮ್ಮೆ ವಿಷ್ಣು ಉಪೇಂದ್ರ, ಶಿವರಾಜ್‌ಕುಮಾರ್‌ರಂತಹ ಸ್ಟಾರ್‌ಗಳು ಬ್ಯುಸಿ ಇದ್ದರೆ, "ಸುದರ್ಶನ್, ಸ್ವಲ್ಪವಿಟ್ಟು ನಮ್ಮ ಪಾಲಿನ ಪ್ಯಾಚ್‌ವರ್ಕ್ ಮುಗಿಸಿಕೊಡಿ" ಎಂದು ಆ ಕೆಲಸವನ್ನು ಸುದರ್ಶನ್ ಅವರ ತಲೆಗೇರಿಸಿ ನಿರಾಳವಾಗುತ್ತಾರೆ ಎಂದರೆ ಸುಮ್ಮನೆ ಮಾತೇ?

ಸುದರ್ಶನ ಪ್ರವರ ಇಲ್ಲಿಗೇ ಮುಗಿಯುವುದಿಲ್ಲ, ಬೆಳಗ್ಗೆ ಎದ್ದ ತಕ್ಷಣ ಬೆಂಗಳೂರಿನ ಜನ ಇವರ ದನಿಯನ್ನು ಕೇಳಿಸಿಕೊಳ್ಳಲೇಬೇಕು! ಬೆಂಗಳೂರು ಮಹಾನಗರ ಪಾಲಿಕೆಯ ಕಸದ ಗಾಡಿಯವರು ಹಾಕುವ ಕ್ಯಾಸೆಟ್‌ನಲ್ಲಿ "ಎಲ್ಲೆಂದರಲ್ಲಿ ಕಸ ಹಾಕಬೇಡಿ" ಎನ್ನುವ ಉಪದೇಶದ ಮಾತುಗಳನ್ನು ಹೇಳಿರುವುದು ಕೂಡ ಬೇರೆ ಯಾರೂ ಅಲ್ಲ, once again ಇದೇ ಸುದರ್ಶನ್. ಇದರೊಂದಿಗೆ ಎಫ್‌ಎಂನ ಜಾಹೀರಾತುಗಳು, ರೇಡಿಯೋ ಜಿಂಗಲ್ಸ್‌ಗಳು ಎಲ್ಲವೂ ಸುದರ್ಶನ್‌ಮಯ!




ಸಣ್ಣಪುಟ್ಟ ಮಿಮಿಕ್ರಿ ಆರ್ಟಿಸ್ಟುಗಳೂ ಇಂದು ಟಿವಿ, ಸಿನಿಮಾಗಳಲ್ಲಿ ಕಾಣಿಸಿಕೊಳ್ಳಲು ಹಂಬಲಿಸುತ್ತಾರೆ. ಕೆಲವರಂತೂ ಅರೆಬರೆ ಪ್ರತಿಭೆಯಿದ್ದರೂ ವರ್ಷವಿಡೀ ಫಾರಿನ್ ಟೂರ್ ಮಾಡುತ್ತಾ, ಸೂಟುಬೂಟು ಹಾಕಿಕೊಂಡು ಪೋಸು ಕೊಡ್ತಾರೆ. ಆದರೆ ಮಿಮಿಕ್ರಿಯಲ್ಲಿ ನೂರಕ್ಕೆ ನೂರರಷ್ಟು ಪರ್‌ಫೆಕ್ಷನ್ ಹೊಂದಿರುವ ಸುದರ್ಶನ್ ಮಾತ್ರ ಸದಾ ತೆರೆಯ ಹಿಂದೆಯೇ ಇರಲು ಇಷ್ಟಪಡುತ್ತಾರೆ.

ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಗಿಸಿ ಸಣ್ಣಪುಟ್ಟ ಆರ್ಕೆಸ್ಟ್ರಾಗಳಲ್ಲಿ ಮಿಮಿಕ್ರಿ ಮಾಡಿಕೊಂಡಿದ್ದ ಸುದರ್ಶನ್ ಈಗ ಇಷ್ಟೆಲ್ಲಾ ಸಾಧಿಸಿದ್ದಾರೆ. ಆರ್ಯಭಟದಂಥ ಪ್ರತಿಷ್ಠಿತ ಪ್ರಶಸ್ತಿಗಳಿಂದ ಹಿಡಿದು ಹಲವಾರು ಪುರಸ್ಕಾರಗಳನ್ನು ಪಡೆದಿದ್ದಾರೆ. ದುರದೃಷ್ಟವೆಂದರೆ ನಮ್ಮ ರಾಜ್ಯ ಸರ್ಕಾರ ಮಾತ್ರ ಇದುವರೆಗೂ ಇವರಿಗೆ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿಲ್ಲ, ಪ್ರತೀ ಬಾರಿ ಅನೌನ್ಸ್‌ಮೆಂಟಿಗೆ ಮುಂಚೆ ಇವರ ಹೆಸರು ಕೇಳಿಬರುತ್ತದಾದರೂ ಕಡೇ ಘಳಿಗೆಯಲ್ಲಿ ಅದು ಮರೀಚಿಕೆಯಾಗೇ ಉಳಿಯುತ್ತಿದೆ.

ಇನ್ನಾದರೂ ಸರ್ಕಾರ ಸುದರ್ಶನ್‌ರಂಥ ಡಬ್ಬಿಂಗ್ ಆರ್ಟಿಸ್ಟ್‌ಗೆ ಬೆಲೆ ಕೊಡುತ್ತದೆಯೋ ಎಂಬುದನ್ನು ಕಾದುನೋಡಬೇಕು ■

ರಜನಿ ರಾಜಕಾರಣ!



ರಜನೀಕಾಂತ್ ರಾಜಕೀಯ ಪ್ರವೇಶಿಸಲಿದ್ದಾರಾ?

ತಮಿಳರ ಆರಾಧ್ಯ ದೈವ ರಜನೀಕಾಂತ್ ಎದುರು ಕಳೆದ ಎರಡು ದಶಕಗಳಿಂದ ಆಗಾಗ ಈ ಪ್ರಶ್ನೆ ತಲೆಯೆತ್ತುತ್ತಲೇ ಇರುತ್ತದೆ. ಆದರೆ ರಜನಿ ಮಾತ್ರ ತಾನು ರಾಜಕೀಯ ಸೇರುವ ಮಾತನ್ನು ತಳ್ಳಿಹಾಕುತ್ತಲೇ ಬಂದಿದ್ದಾರೆ.

ಕಳೆದ ತಿಂಗಳಷ್ಟೇ ಚಿರಂಜೀವಿ ನೇತೃತ್ವದಲ್ಲಿ ಆಂಧ್ರದಲ್ಲಿ 'ಪ್ರಜಾ ರಾಜ್ಯಂ' ಎಂಬ ಹೊಸ ಪಕ್ಷ ಉದ್ಭವಿಸಿ ಅಲ್ಲಿನ ರಾಜಕೀಯ ಪರಿಸ್ಥಿತಿಯಲ್ಲಿ ಏರುಪೇರುಗಳನ್ನು ಸೃಷ್ಟಿಸಿರುವ ಬೆನ್ನಲ್ಲೇ ತಮಿಳುನಾಡಿನಲ್ಲೂ ರಜನೀಕಾಂತ್ ನೇತೃತ್ವದಲ್ಲಿ ಪಕ್ಷವೊಂದು ಉದಯಿಸುವ ಲಕ್ಷಣಗಳು ಕಾಣುತ್ತಿವೆ. ಇದು ಈ ತಿಂಗಳ 18ನೇ ತಾರೀಖಿನ ಒಳಗೆ ಖಾತರಿಗೊಳ್ಳಲಿದೆ.


ರಜನಿಯ ರಾಜಕೀಯ ಪ್ರವೇಶದ ಮೊದಲ ಹೆಜ್ಜೆ ಎಂಬಂತೆ ಮೊನ್ನೆ ರಜನಿಯ ಹುಟ್ಟುಹಬ್ಬದ ದಿನ ಅವರ ಅಭಿಮಾನಿ ಸಂಘದ ಪರವಾಗಿ 'ದೇಶೀಯ ದ್ರಾವಿಡರ್ ಮಕ್ಕಳ್ ಮುನ್ನೇಟ್ರ ಕಳಗಂ' (ಡಿಡಿಎಂಎಂಕೆ) ಎಂಬ ಹೆಸರಿನಲ್ಲಿ ಪಕ್ಷದ ಫ್ಲಾಗ್ ಕೂಡಾ ಬಿಡುಗಡೆಗೊಂಡಿದೆ. ಕೆಂಪು, ಬಿಳಿ ಮತ್ತು ಕಪ್ಪು ಬಣ್ಣದ ಈ ಧ್ವಜದ ಮಧ್ಯದಲ್ಲಿ ರಜನೀಕಾಂತ್‌ರ ಮುಖವಿದೆ.

ಮೊದಲಿನಿಂದಲೂ ಸ್ವತಃ ರಜನಿಕಾಂತ್ ಹೇಳುತ್ತಿರುವಂತೆ ರಾಜಕಾರಣಕ್ಕಿಳಿಯುವ ಉತ್ಸಾಹ ರಜನಿಯಲ್ಲಿಲ್ಲ, ಆದರೆ ಚಿರಂಜೀವಿಯ ಕಾರಣದಿಂದ ರಜನಿ ಅಭಿಮಾನಿಗಳು ಹಿಂದೆಂದಿಗಿಂತಲೂ ಇಂದು ಹೆಚ್ಚು ಒತ್ತಡ ಹಾಕಲಾರಂಭಿಸಿದ್ದಾರೆ. ಅಭಿಮಾನಿಗಳ ಮಾತು ಒತ್ತಟ್ಟಿಗಿರಲಿ, ಸ್ವತಃ ಅವರ ಪತ್ನಿ ಲತಾ ಹಾಗೂ ರಜನಿಯ ಅಣ್ಣ ಸತ್ಯನಾರಾಯಣ್ ಅವರ ಒತ್ತಾಯವೇ ಹೆಚ್ಚಾಗಿದೆ. ಮೊದಲಿನಿಂದಲೂ ಅನೇಕ ಚಾರಿಟಿ ಸಂಸ್ಥೆಗಳನ್ನು, ಶಾಲೆಗಳನ್ನು ನಡೆಸಿಕೊಂಡುಬಂದಿರುವ ರಜನಿ ತನ್ನ ವರ್ಚಸ್ಸನ್ನು ಬಳಸಿಕೊಂಡು ತಮಿಳುನಾಡಿನಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಲಿ ಎಂಬುದೇ ಅವರ ಪತ್ನಿ ಲತಾರವರ ಆದಮ್ಯ ಬಯಕೆ. ಈ ವಿಚಾರವನ್ನು ಆಕೆ ಆಗಾಗ ಬಹಿರಂಗಗೊಳಿಸುತ್ತಲೂ ಇದ್ದಾರೆ.

ಈ ಎಲ್ಲ ಒತ್ತಡಗಳಿಂದ ಒಂದು ಪಕ್ಷ ರಜನಿ ತನ್ನ ಸ್ವಂತ ಪಾರ್ಟಿ ಕಟ್ಟಿ ರಾಜಕಾರಣ ಪ್ರವೇಶಿಸಿದರೆ ವರ್ಕ್‌ಔಟ್ ಆಗುತ್ತಾ? ಎಂಬುದು ಎಲ್ಲರನ್ನೂ ಕಾಡುತ್ತಿರುವ ಮಿಲಿಯನ್ ಡಾಲರ್ ಪ್ರಶ್ನೆ.

ಒಂದು ವೇಳೆ "ಆತನಿಗಿರುವ ಅಭಿಮಾನಿಗಳು, ಕ್ರೇಜ್‌ಗಳಿಂದ ರಜನಿ ಸಲೀಸಾಗಿ ಗೆಲ್ಲುತ್ತಾರೆ, ಬೆಳೆಯುತ್ತಾರೆ" ಎಂದುಕೊಂಡರೆ ಬಹುಶಃ ಅದು ತಪ್ಪು ಲೆಕ್ಕಾಚಾರವಲ್ಲದೇ ಮತ್ತೇನೂ ಅಲ್ಲ, ಯಾಕೆಂದರೆ, ಜಾತಿರಾಜಕಾರಣದಲ್ಲಿ ತಮಿಳುನಾಡು ಬೇರೆಲ್ಲ ರಾಜ್ಯಗಳಿಗಿಂತಲೂ ಒಂದು ಹೆಜ್ಜೆ ಮುಂದಿದೆ. ಅದೂ ಅಲ್ಲದೆ ಚಿತ್ರರಂಗದವರದ್ದೇ ಸರಿಸುಮಾರು ಆರು ಪಕ್ಷಗಳಿವೆ.

ಅಲ್ಲಿನ ಕಲಾವಿದರ ಸಂಘದ ಅಧ್ಯಕ್ಷನೂ ಆಗಿರುವ ನಟ ಶರತ್‌ಕುಮಾರ್ ತನ್ನ ಜಾತಿ ಯವರೊಂದಿಗೆ ಸೇರಿ ನಾಡಾರ್ ಸಮುದಾಯದ ಪಕ್ಷವನ್ನು ಕಟ್ಟಿಕೊಂಡಿದ್ದಾನೆ. ಹಿರಿಯ ನಟ ಮುತ್ತುರಾಮನ್ ಮಗ ಕಾರ್ತಿಕ್ ತಮಿಳುನಾಡಿನಲ್ಲಿ ದೇವರ್ ಜನಾಂಗದ ಪರವಾಗಿ ರಾಜಕೀಯ ಪಕ್ಷವನ್ನು ಸ್ಥಾಪಿಸಲು ಮುಂದಾಗಿದ್ದಾನೆ.




ಶರತ್

ಇವತ್ತಿಗೂ ತಂಜಾವೂರು ಪ್ರಾಂತ್ಯದಲ್ಲಿ ದೇವರ್, ವಳವರ್, ಕಳ್‌ವರ್ ಎಂಬ ಜಾತಿಗಳು ರಾಜಕೀಯವಾಗಿ ಪ್ರಾಬಲ್ಯ ಹೊಂದಿದೆ. ಅಲ್ಲದೇ ವಿಜಯಕಾಂತ್ ಅಲಿಯಾಸ್ ವಿಜಯ ರಾಜ ನಾಯ್ಡು ಎಂಬ ಮತ್ತೊಬ್ಬ ಪವರ್‌ಫುಲ್ ನಟ ಕೂಡಾ ತಮಿಳುನಾಡಿನಲ್ಲಿ ನೆಲೆಗೊಂಡಿರುವ ತೆಲುಗರನ್ನು ಒಗ್ಗೂಡಿಸಿಕೊಂಡು ತನ್ನದೇ 'ಮುರ್ಪೋಕು ದ್ರಾವಿಡ ಕಳಗಂ' ಎಂಬ ಪ್ರತ್ಯೇಕ ಪೊಲಿಟಿಕಲ್ ಪಾರ್ಟಿಯ ನೇತಾರನಾಗಿದ್ದಾನೆ. ಮಾತ್ರವಲ್ಲ, 'ನಾನೇ ಮುಂದಿನ ಮುಖ್ಯಮಂತ್ರಿ' ಎಂಬ ಕನಸಿನಲ್ಲಿದ್ದಾನೆ. ಇನ್ನು ದಲಿತರನ್ನು ಒಗ್ಗೂಡಿಸಿಕೊಂಡಿರುವ 'ದಲಿತ್ ಫ್ಯಾಂತರ್ಸ್ ಆಫ್ ಇಂಡಿಯಾ'ದ ತೋಳ್ ತಿರುಮಾವಳವನ್ ಕೂಡಾ ಅಲ್ಲಿನ ದಲಿತರ ಪ್ರಬಲ ಧ್ವನಿಯಾಗಿ ಬೆಳೆದುನಿಂತಿದ್ದಾನೆ.



ವಿಜಯ್‌ಕಾಂತ್



ಎಲ್ಲರೂ ತಿರುಗಿಬಿದ್ದಿದ್ದಾರೆ

ಅದೂ ಅಲ್ಲದೆ ಕಾವೇರಿ ಹಾಗೂ ಹೊಗೇನಕಲ್ ವಿಚಾರದಲ್ಲಿ ರಜನಿಯ ಇಬ್ಬಂದಿ ನಿಲುವುಗಳು, ಹೇಳಿಕೆಗಳು ಅಲ್ಲಿನ ಕಟ್ಟರ್ ತಮಿಳಿಗರು ರಜನಿಯತ್ತ ಕೆಂಗಣ್ಣು ಬೀರುವಂತೆ ಮಾಡಿದೆ. ಎಷ್ಟೆಂದರೆ ಶರತ್‌ಕುಮಾರ್ ಕೂಡ ರಜನಿಯ ವಿರುದ್ಧ ಬಹಿರಂಗ ಹೇಳಿಕೆಗಳನ್ನು ನೀಡಿದ್ದಾನೆ. ಇಷ್ಟೇ ಅಲ್ಲದೆ ವಡಿವೇಲುವಂತ ಕಾಮಿಡಿ ನಟ ಕೂಡಾ ನದಿ ನೀರು ಹಂಚಿಕೆ ವಿಚಾರಕ್ಕೆ ಸಂಬಂಧಿಸಿದಂತೆ ರಜನಿ ವಿರುದ್ಧ ತಿರುಗಿಬಿದ್ದಿದ್ದಾನೆ. ಸಾಲದೆಂಬಂತೆ ಪೆರಿಯಾರ್‌ವಾದಿ ಸತ್ಯರಾಜ್ ಅಂತೂ ಕಂಡ ಕಂಡ ಸಭೆ ಸಮಾರಂಭಗಳಲ್ಲಿ ಇವತ್ತು ರಜನಿಯನ್ನು 'ಅವಕಾಶವಾದಿ' ಎಂದು ಜರಿಯುತ್ತಿದ್ದಾನೆ. ಇನ್ನು ತಮಿಳುನಾಡಿನಲ್ಲಿ ಗಟ್ಟಿಯಾಗಿ ನೆಲೆನಿಂತಿರುವ ಎಲ್‌ಟಿಟಿಇ ಬೆಂಬಲಿತ ತಮಿಳು ಮೂವ್‌ಮೆಂಟ್‌ಗಳೂ 'ರಜನಿ ರಾಜಕಾರಣ'ವನ್ನು ಒಪ್ಪುತ್ತಿಲ್ಲ.

ಒಟ್ಟಾರೆ ತಮಿಳುನಾಡಿನ ಪರಿಸ್ಥಿತಿ ಹೀಗಿರುವಾಗ ರಜನಿ ನಿಜಕ್ಕೂ ತನ್ನ ಪೊಲಿಟಿಕಲ್ ಪಾರ್ಟಿಯನ್ನು ಸ್ಥಾಪಿಸಲು ಸಾಧ್ಯವೇ? ಸದ್ಯಕ್ಕೆ ಅವರ ಅಭಿಮಾನಿಗಳು ತಮಿಳುನಾಡನ್ನು 'ರಜನಿ ರಾಜ್ಯ'ವನ್ನಾಗಿಸುತ್ತೇವೆಂದು ಬೊಬ್ಬಿಡುತ್ತಿದ್ದಾರೆ. ಆದರೆ ಒಮ್ಮೆ ಪ್ರಾಕ್ಟಿಕಲ್ ಆಗಿ ನೋಡಿದರೆ ಮಾತ್ರ ಇದರ ನೈಜತೆಯ ಅರಿವಾಗುತ್ತದೆ.

ರಜನೀಕಾಂತ್‌ರನ್ನು ತಮಿಳುನಾಡಿನ ಜನ ಚಿತ್ರರಂಗದಲ್ಲಿ ಒಬ್ಬ ಸೂಪರ್‌ಸ್ಟಾರ್ ಆಗಿ ಬೆಳೆಸಿರಬಹುದು. ಆದರೆ ರಾಜಕೀಯದ ವಿಚಾರಕ್ಕೆ ಬಂದಾಗ ಮಾತ್ರ ಇದು ಅಷ್ಟು ಸುಲಭದ ಮಾತಲ್ಲ, ಇದೆಲ್ಲ ಸ್ವತಃ ರಜನಿಗೆ ತಿಳಿಯದ ವಿಚಾರವೇನಲ್ಲ. ಒಂದೊಮ್ಮೆ ತಾನು ರಾಜಕೀಯಕ್ಕೆ ಪ್ರವೇಶಿಸಿದರೆ ಇರುವುದೆಲ್ಲವನ್ನೂ ಕಳೆದುಕೊಂಡು 'ಮರಳಿ ಮನೆಗೆ' ಎಂಬಂತೆ ಕರ್ನಾಟಕದತ್ತ ಮುಖ ಮಾಡಬೇಕು ಎಂಬ ಸತ್ಯ ರಜನಿಗೆ ತಿಳಿದೇ ಇದೆ. ಆದರೆ ಪರಿಸ್ಥಿತಿಯ ಒತ್ತಡ ಆತನನ್ನು ಎಲ್ಲಿಗೆ ಕೊಂಡೊಯ್ಯುತ್ತದೋ? ಯಾರು ಬಲ್ಲರು. ■

ರಮ್ಯಾಗೆ ಬಾಯ್ಕಾಟ್



ಒಂದೆಡೆ ರಜನೀಕಾಂತ್ ವಿರುದ್ಧ ತಮಿಳು ಚಿತ್ರರಂಗ ಪ್ರತ್ಯಕ್ಷವಾಗೇ ತಿರುಗಿಬಿದ್ದಿದ್ದರೆ, ಇನ್ನೊಂದೆಡೆ ಕನ್ನಡದ ನಟಿ ರಮ್ಯಾಳ ವಿರುದ್ಧವೂ ಅಲ್ಲಿನ ಕೆಲವು ತಮಿಳು ಸಂಘಟನೆಗಳು ಯುದ್ಧ ಸಾರಿವೆ. ಹೊಗೇನಕಲ್ ವಿವಾದದ ಸಂದರ್ಭದಲ್ಲಿ ರಮ್ಯಾ ಕರ್ನಾಟಕದ ಪರವಾಗಿ ಪ್ರತಿಭಟನೆಗಳಲ್ಲಿ ಪಾಲ್ಗೊಂಡು ತಮಿಳುನಾಡಿನ ವಿರುದ್ಧ ಹೇಳಿಕೆಗಳನ್ನು ನೀಡಿದ್ದಳು. ಇದರಿಂದ ಕುಪಿತರಾಗಿರುವ ಅಲ್ಲಿನ ಸಂಘಟನೆಗಳು ರಮ್ಯಾಳನ್ನು ಬಾಯ್ಕಾಟ್ ಮಾಡಬೇಕೆಂದು ಶರತ್ ಕುಮಾರ್ ನೇತೃತ್ವದ ಕಲಾವಿದರ ಸಂಘದ ಮೇಲೆ ಸಾಕಷ್ಟು ಒತ್ತಡ ತರುತ್ತಿವೆ.



'ಸಿಲ್ಕ್' ಸಿನಿಮಾ!

ಸಿಲ್ಕ್ ಸ್ಮಿತಾ!

ದಕ್ಷಿಣ ಭಾರತದ ಪ್ರತಿಯೊಬ್ಬ ಚಿತ್ರರಸಿಕನಿಗೂ ಗೊತ್ತಿರುವ ಹೆಸರಿದು. 80ರ ದಶಕದಲ್ಲಿ ಬೆಳ್ಳಿತೆರೆಗೆ ಲಗ್ಗೆಯಿಟ್ಟ ಈಕೆ ನಾಯಕಿಯಾಗಿ, ಡ್ಯಾನ್ಸರ್ ಆಗಿ, ಲೇಡಿ ಡಾನ್ ಆಗಿ.... ಮಾಡಿದ ಪಾತ್ರಗಳು, ಸೃಷ್ಟಿಸಿದ ಕ್ರೇಜ್ ಅಷ್ಟಿಷ್ಟೇನಲ್ಲ! ಇವತ್ತಿಗೂ ಆಕೆಯನ್ನು ನೆನೆಸಿಕೊಂಡರೆ ಪ್ರೇಕ್ಷಕ ಅಬ್ಬಬ್ಬಾ ಎಂದು ಏದುಸಿರುಬಿಡುತ್ತಾನೆ.

ಸಿಲ್ಕ್ ಸ್ಮಿತಾ ತನ್ನ ಅಭಿಮಾನಿಗಳನ್ನು ಎಷ್ಟೇ ರಂಜಿಸಿದ್ದರೂ ಆಕೆಯ ಖಾಸಗೀ ಜೀವನವಂತೂ ಬರೀ ದುಃಖದುಮ್ಮಾನಗಳಿಂದ ಕೂಡಿತ್ತು. ಆಂಧ್ರ ಪ್ರದೇಶದ ಸಣ್ಣ ಗ್ರಾಮವೊಂದರಲ್ಲಿ ಹುಟ್ಟಿದ ಈಕೆ ಜನಪ್ರಿಯತೆಯ ಉತ್ತುಂಗಕ್ಕೇರಿದರೂ ಕಡೆಗೆ ಎಲ್ಲ ರೀತಿಯ ಸಂಕಷ್ಟಗಳಿಗೆ ಸಿಲುಕಿ 1996ರಲ್ಲಿ ಆತ್ಮಹತ್ಯೆಗೆ ಶರಣಾದಳು.



ಇಂಥ ಸಿಲ್ಕ್ ಸ್ಮಿತಾಳ ಜೀವನಗಾಥೆಯನ್ನು ಆಧರಿಸಿ ಬಾಲಿವುಡ್‌ನಲ್ಲಿ ಸಿನಿಮಾ ಆರಂಭವಾಗುತ್ತಿದೆ. ಬಾಲಾಜಿ ಫಿಲಂಸ್‌ನ 'ಏಕ್ತಾ ಕಪೂರ್' ಈ ಚಿತ್ರವನ್ನು ನಿರ್ಮಿಸುತ್ತಿದ್ದು, ಸಿಲ್ಕ್ ಪಾತ್ರದಲ್ಲಿ ಸದ್ಯದ ಸೆಕ್ಸ್ ಬಾಂಬ್ ಮಲ್ಲಿಕಾ ಶೆರಾವತ್ ಕಾಣಿಸುತ್ತಿರುವುದೇ ವಿಶೇಷ. ಒಟ್ಟಿನಲ್ಲಿ ನಾಗಕನ್ನೆಯಾಗಿ ಅವತಾರವೆತ್ತುತ್ತಿರುವ ಮಲ್ಲಿಕಾ, ಸ್ಮಿತಾಳ ಪಾತ್ರಕ್ಕೆ ಹೇಗೆ ಜೀವಕಳೆ ತಂದುಕೊಡುತ್ತಾಳೋ ನೋಡಬೇಕು.

ಬಾಕ್ಸಾಫೀಸ್ 'ಬುದ್ಧಿವಂತ'!

'ಬುದ್ಧಿವಂತ' ಚಿತ್ರದ ಬಾಕ್ಸಾಫೀಸ್ ಗಳಿಕೆಯನ್ನು ನೋಡಿ ಗಾಂಧಿನಗರದ ಜನರು ದಂಗಾಗಿಹೋಗಿದ್ದಾರೆ. ಉಪೇಂದ್ರರನ್ನು ಸೋಲಿನ ಸರಪಳಿಯಿಂದ 'ಬುದ್ಧಿವಂತ' ಚಿತ್ರ ಬಿಡುಗಡೆಗೊಳಿಸಿದೆ. ಉಪ್ಪಿ ಮತ್ತೆ ಮೈಕೊಡವಿ ನಿಲ್ಲುವಂತೆ ಮಾಡಿದೆ.

ಈ ಚಿತ್ರ ಮೊದಲ ವಾರವೇ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಗಳಿಸಿತ್ತು. ಎರಡನೇ ವಾರಕ್ಕೆ ಮತ್ತೆ ಒಂದೂವರೆ ಕೋಟಿ ತಂದಿತು. ಅಂದರೆ ಎರಡು ವಾರಗಳಲ್ಲಿ ನಾಲ್ಕು ಕೋಟಿ ರೂಪಾಯಿ ನಿರ್ಮಾಪಕ ಮೋಹನ್ ಕಿಸೆಗೆ ಮರಳಿ ಬಂದಿತು. ಈ ಚಿತ್ರ ಮೋಹನ್ ಪಾಲಿಗೆ ಕಲ್ಪವೃಕ್ಷವಾಗುವ ಎಲ್ಲ ಸಾಧ್ಯತೆ ಇದೆ.

ಅದೊಂದು ಕಾಲವಿತ್ತು, ಉಪೇಂದ್ರ ಚಿತ್ರವೆಂದರೆ, ಪಡ್ಡೆ ಹುಡುಗರು ಮಾತ್ರ ಬಾಯಿ ಚಪ್ಪರಿಸುತ್ತಾ ಸಿನಿಮಾ ಆನಂದಿಸುತ್ತಿದ್ದರು. 'ಎ' ಮತ್ತು 'ಉಪೇಂದ್ರ' ಚಿತ್ರದಲ್ಲಿ ಆತನ ಡೈಲಾಗ್‌ಗಳೇ ಹೈಲೇಟ್ ಆಗಿದ್ದವು. 'ಬುದ್ಧಿವಂತ'ದಲ್ಲೂ ಉಪೇಂದ್ರನ ಡೈಲಾಗುಗಳು ಆತನ ಅಭಿಮಾನಿಗಳಿಗೆ ಹಳೆಯ ಉಪ್ಪಿಯನ್ನು ನೆನಪಿಸುವಂತಿವೆ. ಅದರ ಜೊತೆಗೆ ವೈಭವವಾಗಿ ಮೂಡಿಬಂದ ಮೂರು ಹಾಡುಗಳು ಚಿತ್ರದ ದಿಕ್ಕನ್ನೇ ಬದಲಿಸಿವೆ. ಉಪ್ಪಿ ಅಭಿಮಾನಿಗಳು ಈ ಚಿತ್ರದ 'ಚಿತ್ರಾನ್ನ' ಹಾಡನ್ನು ಚಪ್ಪರಿಸುತ್ತಿದ್ದಾರೆ.



ಉಪ್ಪಿಯ ಜಯಭೇರಿಯ ಮಧ್ಯೆ ಪುನೀತ್ ಅಭಿನಯದ 'ವಂಶಿ' ಸ್ವಲ್ಪ ಕುಂಟುತ್ತಿದೆ.

ಉಪ್ಪಿಯ ಗೆಲುವು ಮತ್ತೆ ಹಳೇ ನಾಯಕ ನಟರಿಗೆ ಒಂದು ರೀತಿಯ ಹೊಸ ಹುಮ್ಮಸ್ಸನ್ನೂ, ಹೊಸಬರಲ್ಲಿ ಆತಂಕವನ್ನೂ ಸೃಷ್ಟಿಸಿದೆ.

ಅದನೇ ಇರಲಿ, "ಈ ಚಿತ್ರವನ್ನು ಸಂಪೂರ್ಣವಾಗಿ ಮನರಂಜನಾದೃಷ್ಟಿಯಿಂದ ಮಾತ್ರ ಮಾಡಿದ್ದೇನೆ. ಈ ಚಿತ್ರದಲ್ಲಿ ಬೇರೆ ಏನನ್ನೂ ಹುಡುಕಬೇಡಿ" ಎಂದು ಉಪ್ಪಿ ಚಿತ್ರ ಬಿಡುಗಡೆಯಾದ ದಿನವೇ ಪ್ರಾಮಾಣಿಕವಾಗಿ ಹೇಳಿದ್ದನ್ನು ಮೆಚ್ಚಬೇಕು.

ಮೂರ್ಖರ ಪೆಟ್ಟಿಗೆಯಿಂದ ಹೊರಬರುತ್ತಿರುವ ಪ್ರತಿಭೆಗಳು

ಮೊನ್ನೆ ಶುಕ್ರವಾರದಂದು 'ಚಿಕ್ಕಮಗಳೂರ ಚಿಕ್ಕಮಲ್ಲಿಗೆ' ಚಿತ್ರ ಬಿಡುಗಡೆಯಾಯಿತು. ಈ ಚಿತ್ರದ ನಾಯಕನ ಹೆಸರು ಶ್ರವಂತ್. ಅದೇ ದಿನ ಮುಂಜಾನೆ 'ಕೃಷ್ಣ ನೀ ಲೇಟಾಗಿ ಬಾರೋ' ಎಂಬ ಹೊಸ ಚಿತ್ರ ಸೆಟ್ಟೇರಿತು. ಈ ಚಿತ್ರದ ನಿರ್ದೇಶಕ ನಟ ಮೋಹನ್. ಇನ್ನೊಂದೆಡೆ ಸಿಹಿಕಹಿ ಚಂದ್ರು ನಿರ್ದೇಶಿಸುತ್ತಿರುವ, ವಿಷ್ಣುವರ್ಧನ್ ನಟಿಸುತ್ತಿರುವ 'ನಾನೇ ಬೇರೆ ನನ್ನ ಸ್ಟೈಲೇ ಬೇರೆ' ಚಿತ್ರದ ಬಗ್ಗೆ ಎಲ್ಲೆಡೆ ಸುದ್ದಿ ಹರಡಿದೆ.



ಅಲ್ಲಾ, ಮೋಹನ್‌ಗೂ ಶ್ರವಂತ್‌ಗೂ ಚಂದ್ರುಗೂ ಏನು ಸಂಬಂಧ? ಎಂದು ನೀವು ಆಶ್ಚರ್ಯ ಪಡಬಹುದು. ಈ ತ್ರಿಮೂರ್ತಿಗಳ ನಡುವೆ ಒಂದು ರೀತಿಯ ವಿಚಿತ್ರ ಸಂಬಂಧವಿದೆ. ಅದೇನೆಂದರೆ, ಮೂವರೂ ಟೀವಿಯಲ್ಲಿ ನಿರೂಪಕರಾಗಿದ್ದವರು.



ಒಂದು ಕಾಲದಲ್ಲಿ ಟೀವಿಯೆಂದರೆ, ಸಿನಿಮಾದವರು ಅಲರ್ಜಿ ತೋರಿಸುತ್ತಿದ್ದರು. ಅದು ಏನಿದ್ದರೂ ಕಿರುತೆರೆ. ನಮ್ಮದು ಬೆಳ್ಳಿತೆರೆ. ಅಲ್ಲಿ ವ್ಯಕ್ತಿಯನ್ನು ಚಿಕ್ಕದಾಗಿ ತೋರಿಸಿದರೆ, ನಾವು ಲೈಫ್ ಸೈಜಿಗಿಂತಲೂ ದೊಡ್ಡದಾಗಿ ತೋರಿಸುತ್ತೇವೆ... ಇತ್ಯಾದಿ ಬಂಡಲ್ ಬಿಡುತ್ತಿದ್ದರು. ಆದರೆ ಈಗ ಪರಿಸ್ಥಿತಿ ಸಂಪೂರ್ಣವಾಗಿ ಬದಲಾಗಿದೆ. ಟೀವಿಯಿಲ್ಲದೇ ಯಾವ ನಿರ್ಮಾಪಕ ಅಥವಾ ನಾಯಕನಟ ಉಸಿರಾಡಲೂ ಸಾಧ್ಯವಾಗುತ್ತಿಲ್ಲ, ಅಷ್ಟೇ ಯಾಕೆ ದಿನಕ್ಕೊಬ್ಬ ಹೊಸ ನಾಯಕ, ಹೊಸ ನಿರ್ದೇಶಕ ಟೀವಿ ಕ್ಷೇತ್ರದಿಂದ ಬೆಳ್ಳಿತೆರೆಗೆ ಲಗ್ಗೆಯಿಡುತ್ತಿದ್ದಾರೆ. ಇದರ ತದ್ವಿರುದ್ಧವಾಗಿ ಬೆಳ್ಳಿತೆರೆಯ ಮುದಿ ತಲೆಗಳೂ ಟೀವಿ ಕಡೆಗೆ ಹೋಗುತ್ತಿದ್ದಾರೆ.



ಹಾಗೆ ನೋಡಿದರೆ ಕನ್ನಡ ಚಿತ್ರರಂಗ ಕಂಡ ಪಾದರಸದಂತ ವ್ಯಕ್ತಿ, ಕ್ರಿಯಾಶೀಲತೆಯಲ್ಲಿ ಬಹಳ ಎತ್ತರವನ್ನೇರಿದ ಶಂಕರ್‌ನಾಗ್ ಕೂಡಾ ಟೀವಿಯಲ್ಲಿ ನಿರೂಪಕರಾಗಿ ತಮ್ಮ ವೃತ್ತಿ ಜೀವನ ಆರಂಭಿಸಿದ್ದರು ಎಂಬುದು ಬಹುತೇಕ ಜನರಿಗೆ ಗೊತ್ತಿಲ್ಲ. ಹಾಗೆಯೇ ಅನಂತ ನಾಗ್ ಮತ್ತು ರಮೇಶ್ ಅರವಿಂದ್ ಕೂಡ ಟೀವಿಯಲ್ಲಿ ನಿರೂಪಕರಾಗಿದ್ದರು. ಇವತ್ತು ಅನಂತ್ ಸಿನಿಮಾ ಮತ್ತು ಟೀವಿ ಎರಡರಲ್ಲೂ ಅಪಾರ ಬೇಡಿಕೆ ಹೊಂದಿರುವ ನಟನಾಗಿದ್ದರೆ, ರಮೇಶ್ ಅರವಿಂದ್ ಈಗ ನಟನಾಗಿ ಮಾತ್ರವಲ್ಲ, ನಿರ್ದೇಶಕನಾಗಿಯೂ ಬೆಳೆದುನಿಂತಿದ್ದಾರೆ.



ಇನ್ನೊಂದು ಉದಾಹರಣೆ ಕಿರುತೆರೆಯಲ್ಲಿ ನಿರ್ದೇಶಕನಾಗಿ ಬಹಳ ದೊಡ್ಡ ಹೆಸರು ಮಾಡಿದ ಸಿಹಿಕಹಿ ಚಂದ್ರು ಈಗ ಸಾಹಸಸಿಂಹ ವಿಷ್ಣುವರ್ಧನ್ ಅವರ ಚಿತ್ರ ನಿರ್ದೇಶಿಸಲು ಹೊರಟಿರುವುದು. 'ನಾನೇ ಬೇರೆ ನನ್ನ ಸ್ಟೈಲೇ ಬೇರೆ' ಈ ಚಿತ್ರದ ಹೆಸರು. ಸಿಹಿಕಹಿ ಚಂದ್ರುಗೆ ಇದು ಚೊಚ್ಚಲ ನಿರ್ದೇಶನವಾದರೂ, ಉದ್ಯಮದಲ್ಲಿ ಈ ಚಿತ್ರದ ಬಗ್ಗೆ ಈಗಲೇ ಕುತೂಹಲ ಆರಂಭವಾಗಿದೆ.



ಗಣೇಶ್ ಕೂಡ ಉದಯ ಟೀವಿಯಲ್ಲಿ 'ಕಾಮಿಡಿ ಟೈಮ್' ಎಂಬ ಹಾಸ್ಯ ಪ್ರಧಾನ ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದದ್ದು ಎಲ್ಲರಿಗೂ ಗೊತ್ತು, ಇಂದು ಚಿತ್ರವೊಂದಕ್ಕೆ ಸುಮಾರು ಒಂದು ಕೋಟಿಯಷ್ಟು ಸಂಭಾವನೆ ಈ ಕಾಮಿಡಿ ಟೈಮ್ ಗಣೇಶ್ ಪಡೆಯುತ್ತಿದ್ದರೆ, ಅದಕ್ಕೆ ಮೂಲ ಕಾರಣ ಆತನಿಗೆ ಟೀವಿಯಲ್ಲಿ ದೊರಕಿದ ಎಕ್ಸ್‌ಪೋಜರ್ ಎಂದೇ ಹೇಳಬಹುದು.



ಗಣೇಶ್ ಹೀರೋ ಆಗಿ ಕ್ಲಿಕ್ ಆಗಿದ್ದೇ ತಡ, ಉದಯ ಟೀವಿಯ ನಿರೂಪಕರೆಲ್ಲಾ ಸಾಲುಸಾಲಾಗಿ ಹೀರೋ ಆಗಲು ಹೊರಟು ನಿಂತಿದ್ದಾರೆ. ಅವರಲ್ಲಿ 'ಚಿಕ್ಕಮಗಳೂರು ಚಿಕ್ಕಮಲ್ಲಿಗೆ'ಯ ಚಿಗುರು ಮೀಸೆಯ ಹುಡುಗ ಶ್ರವಂತ್ ಕೂಡಾ ಒಬ್ಬ. ಈತನಿಗಿಂತ ಮೊದಲು ಗಟ್ಟಿಮುಟ್ಟಾದ 'ಯು2' ಆನಂದ್ ಎಂಬ ಮತ್ತೊಬ್ಬ ಹುಡುಗ 'ಮನಸುಗಳ ಮಾತುಮಧುರ' ಎಂಬ ಚಿತ್ರದಿಂದ ನಾಯಕನಟನಾಗಿ ಆರಂಗೇಟ್ರಂ ಮಾಡಿ ಇದೀಗ 'ನನ್ನೆದೆಯಾ ಹಾಡು' ಮುಗಿಸಿದ್ದಾನೆ. ಇವರಿಬ್ಬರಿಗಿಂತ ತಾನೇನು ಕಡಿಮೆ ಎಂಬಂತೆ ಮತ್ತೊಬ್ಬ ನಿರೂಪಕ ರಾಹುಲ್ ಒಂದೇ ಬಾರಿಗೆ ಮೂರು ಚಿತ್ರಗಳಲ್ಲಿ ನಾಯಕನಾಗಿ ನಟಿಸುತ್ತಿದ್ದಾನೆ. 'ನನ್ನುಸಿರೇ' ಮತ್ತು 'ಹೃದಯದಲಿ ಇದೇನಿದು' ಚಿತ್ರಗಳು ಈಗಾಗಲೇ ಸಂಪೂರ್ಣಗೊಂಡಿವೆ.



ಇವರೆಲ್ಲಾ ಮತ್ತೊಬ್ಬ ಗಣೇಶ್ ಆಗುತ್ತಾರೆಯೇ? ಎಂದು ನೀವು ಪ್ರಶ್ನಿಸಬಹುದು. ಆದರೆ ಇಂತಹ ಪ್ರಶ್ನೆಗಳಿಗೆ ಗಾಂಧಿನಗರದಲ್ಲಿ ಉತ್ತರ ಸಿಗುವುದೇ ಇಲ್ಲ, ಇಲ್ಲೇನಿದ್ದರೂ ಅದೃಷ್ಟದ ಲೆಕ್ಕಾಚಾರ. ಒಂದು ಚಿತ್ರ ಗೆದ್ದರೂ ಸಾಕು, ಆತ ದಿನಬೆಳಗಾಗುವುದರೊಳಗೆ ಹೀರೋ ಪಟ್ಟ ಅಲಂಕರಿಸಿರುತ್ತಾನೆ.



ಕನ್ನಡ ಚಿತ್ರರಂಗಕ್ಕೆ ನಾಯಕಿಯರ ಕೊರತೆಯಿರುವ ಈ ಸಂದರ್ಭದಲ್ಲಿ 'ಮೂರ್ಖರ ಪೆಟ್ಟಿಗೆ' ಎಂದೇ ಕರೆಯಲ್ಪಡುವ ಟೀವಿ ನಾಯಕಿಯರನ್ನೂ ಚಿತ್ರರಂಗಕ್ಕೆ ನೀಡಿದೆ. ಅವರಲ್ಲಿ ಮುಖ್ಯವಾಗಿ 'ಚಾಮರಾಜಪೇಟೆ'ಯ ಶ್ವೇತಾಶ್ರೀ ಈಗ ಕರ್ನಾಟಕದಾದ್ಯಂತ 'ಜಿಂಕೆಮರಿ' ಖ್ಯಾತಿಯ ಹುಡುಗಿಯಾಗಿ ಕುಣಿದಾಡುತ್ತಿದ್ದಾಳೆ. ಈಕೆ ನಟಿಸಿದ ಮೊದಲ ಚಿತ್ರ 'ನಂದ ಲವ್ಸ್ ನಂದಿತಾ' ಈಕೆಗೆ ಒಳ್ಳೆಯ ಸ್ಟಾರ್ ವ್ಯಾಲ್ಯೂ ತಂದುಕೊಟ್ಟಿದ[...] ಕಳೆದ ವರ್ಷ ಬಿಡುಗಡೆಗೊಂಡಿದ್ದ ಎಸ್. ನಾರಾಯಣ[...] ನಿರ್ದೇಶನದ 'ಚೆಂಡ'ದಲ್ಲಿ ಕಾವ್ಯ ಶಾಸ್ತ್ರಿ ಎಂಬ ಮತ್ತೊಬ್[...] ನಿರೂಪಕಿ ವಿಜಯ್ ಜೊತೆ ನಾಯಕಿಯಾಗಿದ್ದಳು. ಮತ್ತೊಂದೆ[...] 'ನಮ್ ಏರಿಯಾಲ್ ಒಂದಿನ' ಚಿತ್ರದ ಮೂಲಕ ಮೇಘನ[...] ಗಾಂವ್ಕರ್ ಕೂಡ ನಾಯಕಿಯಾಗಿ ಬಡ್ತಿಪಡೆದಿದ್ದಾಳೆ. 'ನೆನಪಿರಲಿ[...] ಚಿತ್ರದ ಮನೋಜ್ಞ ನಟನೆಯಿಂದ ಎಲ್ಲರ ಮನಗೆದ್ದ ವಿಪಾ[...] ಯ್ಯಾನೆ ಸಿಂಧೂ ಈಗಲೂ ಬೆಳ್ಳಿತೆರೆ ಮತ್ತು ಕಿರುತೆರೆ ಎರಡನ್ನೂ[...] ತೂಗಿಸಿಕೊಂಡು ಅಲ್ಲೂ, ಇಲ್ಲೂ ಸೈ ಎನಿಸಿಕೊಂಡಿದ್ದಾಳೆ.

ನಾಯಕ ಮತ್ತು ನಾಯಕಿಯರನ್ನು ಚಿತ್ರರಂಗಕ್ಕೆ ನೀಡಿರ[...] ಟೀವಿ ರಂಗ ಸಾಕಷ್ಟು ತಂತ್ರಜ್ಞರನ್ನು ಕೂಡಾ ನೀಡಿದೆ. ಈ[...] ಟೀವಿಯ ಸ್ಟೇಜ್ ಕಾರ್ಯಕ್ರಮಗಳಿಗೆ ಕೊರಿಯೋಗ್ರಾಫರ್ ಆಗಿದ್ದ ಹರ್ಷ ಈಗ ಚಿತ್ರರಂಗದಲ್ಲಿ ಬೇಡಿಕೆಯಲ್ಲಿರುವ ನೃತ್ಯ ನಿರ್ದೇಶಕ ಮಾತ್ರವಲ್ಲ 'ಗೆಳೆಯ' ಚಿತ್ರದ ಮುಖಾಂತರ ತಾನೊಬ್[...] ಪ್ರತಿಭಾವಂತ ನಿರ್ದೇಶಕ ಎಂಬುದನ್ನೂ ಸಾಬೀತುಮಾಡಿದ್ದಾನೆ.

ದೂರದರ್ಶನದಲ್ಲಿ ಛಾಯಾಗ್ರಾಹಕರಾಗಿದ್ದ ಅಶೋಕ್ ಕಶ್ಯಪ್ ವಿಷ್ಣು ಅಭಿನಯದ 'ಹಾಲುಂಡ ತವರು' ಚಿತ್ರದ ಮುಖಾಂತ[...] ಸ್ಟಾರ್ ಛಾಯಾಗ್ರಾಹಕರೆನಿಸಿದ್ದರು. ಇದೀಗ 'ಸಿಹಿಮುತ್ತು' ಚಿತ್ರ[...] ಮೂಲಕ ನಿರ್ದೇಶಕರಾಗಿಯೂ ಬಡ್ತಿ ಪಡೆದಿದ್ದಾರೆ. ಇನ್ನೊಂದೆ[...] ಸದ್ಯಕ್ಕೆ ನಂ.1 ಕ್ಯಾಮೆರಾಮನ್ ಎನಿಸಿರುವ 'ತಾಜ್‌ಮಹಲ್' ಖ್ಯಾತಿಯ ಚಂದ್ರು ಕೂಡಾ ಉದಯ ಟೀವಿಯಲ್ಲಿ ನ್ಯೂಸ್ ಕ್ಯಾಮೆರಾಮನ್ ಆಗಿ ಕೆಲಸ ಮಾಡಿದವರು. ಈ ಕಡೆ 'ಸೆವೆನ್ ಓ ಕ್ಲಾಕ್', 'ಸವಿಸವಿ ನೆನಪು' ಮೊದಲಾದ ಚಿತ್ರಗಳ ಯುವ[...] ನಿರ್ದೇಶಕ ಸಂತೋಷ್ ರೈ ಪತಾಜೆ ಈ ಟೀವಿಯ[...] ಛಾಯಾಗ್ರಾಹಕರಾಗಿ ಕೆಲಸ ಮಾಡಿದವರು. ಈಗ ಝಿ[...] ಟೀವಿಯ ಕಾರ್ಯಕ್ರಮ ನಿರೂಪಕರಾಗಿರುವ ರಘುರಾಮ್ ಮತ್ತು ಕೇಶವ್ ನಿರ್ದೇಶಕರಾಗಿ ಚಿತ್ರರಂಗಕ್ಕೆ ಎಂಟ್ರಿ ನೀಡಿದ್ದಾರೆ. ಈ ಹಿಂದೆ ದೂರದರ್ಶನದಲ್ಲಿ ಅನೌನ್ಸರ್ ಆಗಿದ್ದ ಪ್ರವೀಣ್ ನಾಯಕ್ ಒಂದೆರಡು ಚಿತ್ರ ನಿರ್ದೇಶಿಸಿ ಈಗ ಮೌನಿಯಾಗಿದ್ದಾರೆ.

ಇದೆಲ್ಲವೂ ಟೀವಿ ಕ್ಷೇತ್ರದ ಪ್ರತಿಭೆಗಳು ಬೆಳೆದ ಉದಾಹರಣೆಯಾದರೆ, ಅದಕ್ಕಿಂತಲೂ ಮುಖ್ಯವಾಗಿ ಸಿನಿಮಾ ನಿರ್ಮಾಪಕರಿ[...] ಟೀವಿ ರಂಗ ಆರ್ಥಿಕ ಬೆನ್ನೆಲುಬಾಗಿ ನಿಂತಿರುವುದು ಒಂದು ವಿಶೇಷ. ಉದಾಹರಣೆಗೆ ಇನ್ನೂ ಚಿತ್ರೀಕರಣ ಪೂರ್ತಿಗೊಳ್ಳದಿರುವ ಪ್ರೇಮ್ ನಿರ್ದೇಶನದ 'ರಾಜ್' ಚಿತ್ರದ ಸ್ಯಾಟಲೈಟ್ ಹಕ್ಕನ್ನು ಸುವರ್ಣ ಟೀವಿಯವರು ಒಂದು ಕೋಟಿ ಅರವತ್ತೆರಡು ಲ[...] ರೂಪಾಯಿಗಳಿಗೆ ಖರೀದಿಸಿದ್ದಾರೆ. ಅದೇ ರೀತಿ ರಘುರಾಮ್ ನಿರ್ದೇಶನದ ಶಿವರಾಜ್‌ಕುಮಾರ್ ಅಭಿನಯದ 'ಚೆಲುವೆಯೆ ನಿನ್ನ ನೋಡಲು' ಚಿತ್ರ ಇನ್ನೂ ಸೆಟ್ಟೇ ಏರಿಲ್ಲ. ಆದರೆ ಇದ[...] ಸ್ಯಾಟಲೈಟ್ ಹಕ್ಕನ್ನು ಸುವರ್ಣದವರು ಒಂದು ಕೋಟಿ ಹದಿನೆಂಟು ಲಕ್ಷಕ್ಕೆ ಖರೀದಿಸಿದ್ದಾರೆ.

ಇನ್ನೊಂದೆಡೆ ಯಾರಿಗೂ ಗೊತ್ತಿಲ್ಲದ ನಟನಟಿಯರು ನಟಿಸಿರುವ 'ಸೈಕೋ', 'ಪಟ್ರೆ ಲವ್ಸ್ ಪದ್ಮ' ಮೊದಲಾದ ಚಿತ್ರಗಳನ್ನು ಝೀ ಟೀವಿಯವರು ಸುಮಾರು ಮೂವತ್ತೈದು ಲಕ್ಷ ರೂಪಾಯಿಗೆ ಖರೀದಿಸಿದ್ದಾರೆ. ಇನ್ನು ಈಗಷ್ಟೇ ಚಿತ್ರೀಕರಣ ಪೂರೈಸಿರುವ 'ಬಿರುಗಾಳಿ' 62 ಲಕ್ಷಕ್ಕೆ ಉದಯ ಟೀವಿ[...] ಬಿಕರಿಯಾಗಿದೆ.

ಹೀಗೆ ಒಂದು ಕಾಲದಲ್ಲಿ ಎಲ್ಲರಿಂದ ಮೂರ್ಖರ ಪೆಟ್ಟಿಗೆ ಎಂದು ಹೀಯಾಳಿಸಲ್ಪಡುತ್ತಿದ್ದ ಟೀವಿ ಕ್ಷೇತ್ರ ಇಂದು ಹೊ[...] ಹೊಸ ಪ್ರತಿಭೆಗಳನ್ನು ಬೆಳೆಸುವ ರಂಗವಾಗಿ ರೂಪಾಂತರಗೊಂಡಿದೆ. ಅಷ್ಟೇ ಅಲ್ಲ, ಆರ್ಥಿಕವಾಗಿಯೂ ಟೀವಿಯ ಕೊಡುಗೆ ಅನನ್ಯ. ಪ್ರಚಾರಕ್ಕಂತೂ ಸಿನಿಮಾದವರು ಸಂಪೂರ್ಣವಾಗಿ ಟೀವಿ ಮಾಧ್ಯಮಕ್ಕೇ ಶರಣಾಗಿದ್ದಾರೆ.

ಶಂಕರ್ ನಾಗ್‌ರಿಂದ ಕಾಮಿಡಿ ಟೈಮ್ ಗಣೇಶ್ ಸೇರಿದಂ[...] ಇವತ್ತಿನ ಶ್ರವಂತ್ ತನಕ ಮೂರ್ಖರ ಪೆಟ್ಟಿಗೆಯಿಂದ ಬಂದ ಪ್ರತಿಭೆಗಳ ಸರಣಿ ಇನ್ನೂ ಮುಂದುವರೆಯಲಿ...

■ ಶೆಣ[...]

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises, # 124, 4th M[...]